ಹಂಪಿ ಕನ್ನಡ ವಿಶ್ವವಿದ್ಯಾಲಯ

"ಅ.ರಾ. ಮಿತ್ರ ಅವರ ಲಲಿತ ಪ್ರಬಂಧಗಳು-ಒಂದು ಅಧ್ಯಯನ"

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ
ಎಂ.ಫಿಲ್. ಸಂಪ್ರಬಂಧ

೨೦೧೩-೨೦೧೪

ಸಂಶೋಧನ ವಿದ್ಯಾರ್ಥಿ
ರವಿಕುಮಾರ ಆರ್.

ರಿ. ನಂ. **BMS BKS/00665**

ಮಾರ್ಗದರ್ಶಕರು
ಡಾ. ಲೋಕೇಶ್ವರಪ್ಪ ಕೆ.ಬಿ.

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ
ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ
ನರಸಿಂಹರಾಜ ಕಾಲೋನಿ, ಬೆಂಗಳೂರು – ೫೬೦ ೦೧೯.

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ

ಎಂ.ಫಿಲ್. ಪದವಿಯ ನಿಬಂಧ

ನಿಬಂಧದ ವಿಷಯ

"ಅ.ರಾ. ಮಿತ್ರ ಅವರ ಲಲಿತ ಪ್ರಬಂಧಗಳು–ಒಂದು ಅಧ್ಯಯನ"

ಮಾರ್ಗದರ್ಶಕರು

ಡಾ. ಲೋಕೇಶ್ವರಪ್ಪ ಕೆ.ಬಿ.

ರಿ. ನಂ. **BMS BKS/00665**

ಸಂಶೋಧನ ವಿದ್ಯಾರ್ಥಿ

ರವಿಕುಮಾರ ಆರ್.

ವರ್ಷ : ೨೦೧೩–೨೦೧೪

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ

ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ

ನರಸಿಂಹರಾಜ ಕಾಲೋನಿ, ಬೆಂಗಳೂರು – ೫೬೦ ೦೧೯.

ಅಭ್ಯರ್ಥಿಯ ಪ್ರಮಾಣ ಪತ್ರ

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ, ಬೆಂಗಳೂರು ಇವರ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ೨೦೧೩-೨೦೧೪ನೇ ಸಾಲಿನ ಎಂ.ಫಿಲ್. ಪದವಿಗಾಗಿ **ಅ.ರಾ. ಮಿತ್ರ ಅವರ ಲಲಿತ ಪ್ರಬಂಧಗಳು-ಒಂದು ಅಧ್ಯಯನ** ಎಂಬ ಶೀರ್ಷಿಕೆಯ ಈ ನಿಬಂಧವನ್ನು ಡಾ. ಲೋಕೇಶ್ವರಪ್ಪ ಕೆ.ಬಿ. ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಸಲ್ಲಿಸುತ್ತಿದ್ದೇನೆ.

ಈ ನಿಬಂಧವು ನನ್ನ ಸ್ವಂತ ಬರವಣಿಗೆಯಾಗಿದ್ದು, ಇದರ ಯಾವುದೇ ಭಾಗವನ್ನು ಈವರೆಗೆ ಬೇರೆಲ್ಲೂ ಪ್ರಕಟಿಸಿಲ್ಲ ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸ್ಥಳ : ಬೆಂಗಳೂರು
ದಿನಾಂಕ : ೨೧/೦೭/೨೦೧೪

ಸಂಶೋಧನಾ ವಿದ್ಯಾರ್ಥಿ
ರವಿಕುಮಾರ ಆರ್.

ಮಾರ್ಗದರ್ಶಕರ ಪ್ರಮಾಣ ಪತ್ರ

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ, ಬೆಂಗಳೂರು ಇವರ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ೨೦೧೩–೨೦೧೪ನೇ ಸಾಲಿನ ಎಂ.ಫಿಲ್. ಪದವಿಗಾಗಿ **ಅ.ರಾ. ಮಿತ್ರ ಅವರ ಲಲಿತ ಪ್ರಬಂಧಗಳು–ಒಂದು ಅಧ್ಯಯನ** ಎಂಬ ಶೀರ್ಷಿಕೆಯ ಈ ನಿಬಂಧವನ್ನು ರವಿಕುಮಾರ ಆರ್. ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಸಲ್ಲಿಸಿದ್ದಾರೆ.

ಈ ನಿಬಂಧವು ವಿದ್ಯಾರ್ಥಿಯ ಸ್ವಂತ ಬರವಣಿಗೆಯಾಗಿದ್ದು, ಇದರ ಯಾವುದೇ ಭಾಗವನ್ನು ಈವರೆಗೆ ಬೇರೆಲ್ಲೂ ಪ್ರಕಟಿಸಿಲ್ಲ ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸ್ಥಳ : ಬೆಂಗಳೂರು
ದಿನಾಂಕ : 21-7-14

ಮಾರ್ಗದರ್ಶಕರು

ಡಾ. ಲೋಕೇಶ್ವರಪ್ಪ ಕೆ.ಬಿ.

ಡಾ॥ ಲೋಕೇಶ್ವರಪ್ಪ ಕೆ.ಬಿ.
ಕನ್ನಡ ವಿಭಾಗ, ಎಂ.ಇ.ಎಸ್. ಕಾಲೇಜು
ಮಲ್ಲೇಶ್ವರ, ಬೆಂಗಳೂರು - 3.

ಅ.ರಾ. ಮಿತ್ರ ಅವರ ಲಲಿತ ಪ್ರಬಂಧಗಳು – ಒಂದು ಅಧ್ಯಯನ

ಪರಿವಿಡಿ

ಅಧ್ಯಾಯ – 1

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

ಉದ್ದೇಶ :

ಲಲಿತ ಪ್ರಬಂಧ ಒಂದು ವಿಶಿಷ್ಟ ಸಾಹಿತ್ಯ ಪ್ರಕಾರವಾಗಿದ್ದು 20ನೇ ಶತಮಾನದಲ್ಲಿ ಹೆಚ್ಚು ಬೆಳವಣಿಗೆಯನ್ನು ಹೊಂದಿದ್ದನ್ನು ಕಾಣುತ್ತೇವೆ. ಈ ಸಾಹಿತ್ಯ ಪ್ರಕಾರದಲ್ಲಿ ಹಲವು ಮಹನೀಯರು ತಮ್ಮನ್ನು ತೊಡಗಿಸಿಕೊಂಡು ಕೃಷಿ ನಡೆಸಿದ್ದಾರೆ. ಅವರುಗಳಲ್ಲಿ ಪ್ರಮುಖರಾದವರೆಂದರೆ ಎ.ಎನ್. ಮೂರ್ತಿರಾವ್, ವಿ.ಸೀತಾರಾಮಯ್ಯ, ಗೊರೂರು ರಾಮಸ್ವಾಮಿ ಐಯ್ಯಂಗಾರ್, ತೀ.ನಂ.ಶ್ರೀಕಂಠಯ್ಯ, ಲಾಂಗೊಲಾಚಾರ್ಯ, ದ.ಬಾ.ಕುಲಕರ್ಣಿ, ರಾ.ಕು. ಬೇಂದ್ರೆ, ಕುವೆಂಪು, ಶಿವರಾಮಕಾರಂತ, ಅ.ರಾ.ಮಿತ್ರ, ಸುನಂದಾ ಬೆಳಗಾಂವಕರ, ಎಂ.ಎಸ್. ಸುಂಕಾಪುರ, ಹಾ.ಮಾ.ನಾಯಕ, ಎಚ್ಚೆಸ್ಕೆ, ಮುಂತಾದವರು ಲಲಿತ ಪ್ರಬಂಧಕ್ಕೆ ವಿಶಿಷ್ಟ ಸ್ಥಾನ ತಂದುಕೊಟ್ಟಿದ್ದಾರೆ. ನವಿರಾದ ಹಾಸ್ಯದ ಮೂಲಕ ವಿಷಯವನ್ನು ಬೆಳೆಸುತ್ತ ಓದುಗರಲ್ಲಿ ಕುತೂಹಲವನ್ನು ಮೂಡಿಸುತ್ತ ಸಾಗುವ ಲಲಿತ ಪ್ರಬಂಧಗಳಲ್ಲಿ ವಿಡಂಬನೆ ಮುಖ್ಯವಾಗಿದ್ದು ಸಾಹಿತ್ಯ ಪ್ರಕಾರದಲ್ಲಿ ತನ್ನದೇ ಆದ ಸ್ಥಾನವನ್ನು ಉಳಿಸಿಕೊಂಡು ಬಂದಿದೆ. ಇದರಲ್ಲಿ ವಸ್ತು ಮುಖ್ಯವಾಗಿರದೆ ವಿಷಯ ನಿರೂಪಣೆ ಮುಖ್ಯವಾಗಿದ್ದು, ಪ್ರಬಂಧಕಾರ ಹರಟುತ್ತಾ ಪ್ರಬಂಧವನ್ನು ರಚಿಸುತ್ತಾನೆ. ಈ ಸಾಹಿತ್ಯ ಪ್ರಕಾರದಲ್ಲಿ ತಮ್ಮನ್ನು ತೊಡಗಿಸಿಕೊಂಡು ಅ.ರಾ.ಮಿತ್ರರವರು ಹಲವು ಪ್ರಬಂಧಗಳನ್ನು ರಚಿಸಿದ್ದಾರೆ. ಇವರ ಲಲಿತ ಪ್ರಬಂಧಗಳೂ ಹಲವು ವಿಶಿಷ್ಟತೆಯಿಂದ ಕೂಡಿದ್ದು ಓದುಗರ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿಯುತ್ತವೆ. ಹಾಗೆ ತಮ್ಮ ವಿದ್ವತ್ ಭಾಷಾ ಪ್ರೌಢಿಮೆಯಿಂದ ಪ್ರಬಂಧಗಳನ್ನು ರಚಿಸುವ ಮಿತ್ರರವರು ಜನಮಾನಸದಲ್ಲಿ ಶಾಶ್ವತವಾಗಿ ಉಳಿದಿದ್ದಾರೆ.

ನವಿರಾದ ಹಾಸ್ಯದೊಂದಿಗೆ ಪ್ರಬಂಧ ರಚಿಸುವುದರಲ್ಲಿ ಸಿದ್ಧಹಸ್ತರಾದ ಅ.ರಾ.ಮಿತ್ರರು ಹಲವು ಲಲಿತ ಪ್ರಬಂಧಗಳನ್ನು ರಚಿಸಿ ತಮ್ಮದೇ ಆದ ವಿಶಿಷ್ಟ ಛಾಪು ಮೂಡಿಸಿದ್ದಾರೆ. ಇವರು ತಮ್ಮ ಪ್ರಬಂಧಗಳಲ್ಲಿ ಮನುಷ್ಯನ ನಡವಳಿ ಗುಣ ಸ್ವಭಾವಗಳನ್ನು ಹಾಸ್ಯದ ಮೂಲಕ ವಿಡಂಬಿಸಿರುವುದು ಕಂಡು ಬರುತ್ತದೆ. ಮನುಷ್ಯ ಸಮಾಜದ ಇತರರೊಂದಿಗೆ ವ್ಯವಹರಿಸುವಾಗ ಯಾವೆಲ್ಲ ಗುಣಗಳನ್ನು ಹೊರಹಾಕುತ್ತಾನೆ ? ಸಮಾಜದೊಂದಿಗೆ ಹೇಗೆ ನಡೆದುಕೊಳ್ಳುತ್ತಾನೆ ? ಇವನ ವರ್ತನೆಗಳಿಗೆ ಕಾರಣಗಳೇನು ? ಸಮಾಜದಲ್ಲಿ ಇವನ ಪಾತ್ರ ಎಂಥದ್ದು ? ಎಂಬಂಥ ಹಲವು ಪ್ರಶ್ನೆಗಳು ಪ್ರಬಂಧಗಳನ್ನು ಓದುವಾಗ ನಮ್ಮನ್ನು ಕಾಡುತ್ತವೆ. ಈ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಳ್ಳುವ ಪ್ರಯತ್ನವನ್ನು ಇಲ್ಲಿ ಮೂಡಲಾಗಿದೆ.

ಆಧುನಿಕ ಸಂದರ್ಭದಲ್ಲಿ ಇವರ ಪ್ರಬಂಧಗಳು ಹೆಚ್ಚು ಪ್ರಸ್ತುತವೆನಿಸುತ್ತವೆ. ಮನುಷ್ಯ ತನ್ನ ಹೆಸರು, ಪ್ರತಿಷ್ಠೆ, ಸ್ಥಾನ-ಮಾನವನ್ನು ಉಳಿಸಿಕೊಳ್ಳುವ ಸಲುವಾಗಿ ಅನ್ಯಮಾರ್ಗವನ್ನು

ತುಳಿದು ಸಮಾಜವನ್ನು ಅದಃಪತನದ ಕಡೆಗೆ ಕೊಂಡೊಯ್ಯುತ್ತಿದ್ದಾನೆ. ಇವನ ಸ್ವಾರ್ಥ ಬುದ್ಧಿಯಿಂದ ಸಮಾಜದ ಸ್ವಾಸ್ತ ಹಾಳಾಗಿ ಮಾನವೀಯ ಮೌಲ್ಯಗಳು ಮರೆಯಾಗುತ್ತಿದ್ದು ಮಾನವ ಸಂಬಂಧಗಳು ಕಳಚಿ ಬೀಳುತ್ತಿವೆ. ಸಮಾಜದಲ್ಲಿ ಸಾಮರಸ್ಯ ಜೀವನವನ್ನು ನಡೆಸುತ್ತಾ ಹೊಂದಾಣಿಕೆಯಿಂದ ಸಹಬಾಳ್ವೆಯನ್ನು ನಡೆಸದೆ ಮನಸ್ಸನ್ನು ಕೆಡಿಸಿಕೊಂಡು. ಸುಖ ಶಾಂತಿಗಾಗಿ ಹುಡುಕಾಟ ನಡೆಸುತ್ತಾ ಜೀವನವನ್ನು ನರಕ ಸದೃಶ್ಯವನ್ನಾಗಿ ಮಾಡಿಕೊಳ್ಳುತ್ತಿದ್ದಾನೆ. ಇದರಿಂದಾಗಿ ಮನುಷ್ಯತ್ವ ಮರೆಯಾಗಿ ಜೀವನ ಮೌಲ್ಯಗಳು ಅರ್ಥವನ್ನು ಕಳೆದುಕೊಳ್ಳುತ್ತಿವೆ. ಇದಕ್ಕೆಲ್ಲ ಕಾರಣಗಳೇನು ? ನಿಜವಾದ ಜೀವನ ಮೌಲ್ಯಗಳಾವುವು? ಮನುಷ್ಯತ್ವ ಎಂದರೇನು ? ಎಂಬಂಥ ಪ್ರಶ್ನೆಗಳಗೆ ಉತ್ತರವನ್ನು ಕಂಡುಕೊಳ್ಳುವ ಸಲುವಾಗಿ ಈ ಸಂಶೋಧನೆಯನ್ನು ಕೈಗೊಳ್ಳಲಾಗಿದೆ.

ಅ.ರಾ.ಮಿತ್ರರವರು ತಮ್ಮ ಪ್ರಬಂಧಗಳಲ್ಲಿ ವ್ಯಕ್ತಿಯ ಗುಣಗಳನ್ನು ಸಮಾಜವನ್ನು ವಿಡಂಬಿಸುತ್ತ ಮನುಷ್ಯತ್ವ ಹಾಗೂ ಜೀವನ ಮೌಲ್ಯಗಳನ್ನು ಹೇಗೆ ಕಟ್ಟಿಕೊಟ್ಟಿದ್ದಾರೆ? ಮನುಷ್ಯ ಸಂಬಂಧಗಳನ್ನು ಗಟ್ಟಿಗೊಳಸುತ್ತಾರೆ ? ಸಮಾಜದ ಕಾಳಜಿಯ ಬಗ್ಗೆ ಇವರ ದೃಷ್ಟಿಕೋನ ಎಂಥದ್ದು ? ವೈಚಾರಿಕ ನಿಲುವುಗಳೇನು ? ಮುಂತಾದ ಅಂಶಗಳು ಇವರ ಪ್ರಬಂಧಗಳಲ್ಲಿ ಹೇಗೆ ಮೂಡಿಬಂದಿವೆ ಎಂಬಂಥಹ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಅಧ್ಯಯನ ಕೈಗೊಳ್ಳುವುದು ನನ್ನ ಮುಖ್ಯ ಉದ್ದೇಶವಾಗಿದೆ.

ವ್ಯಾಪ್ತಿ :

ಅ.ರಾ. ಮಿತ್ರರವರು ಹಲವು ವಿಚಾರಪ್ರಬಂಧ, ವಿಮರ್ಶೆ. ಸಂಕೀರ್ಣ ಬರಹ, ಲಲಿತ ಪ್ರಬಂಧಗಳನ್ನು ಬರೆದಿದ್ದು ನನ್ನ ಅಧ್ಯಯನಕ್ಕೆ ಅವರ ಲಲಿತ ಪ್ರಬಂಧಗಳನ್ನು ಮಾತ್ರ ಆಯ್ದುಕೊಳ್ಳಲಾಗಿದೆ. ಇವರ ಲಲಿತ ಪ್ರಬಂಧಗಳು ಹಲವು ಪ್ರಬಂಧಗಳ ಸಂಕಲನ ರೂಪದಲ್ಲಿ ಹೊರಬಂದಿವೆ. ಅವುಗಳೆಂದರೆ 'ಬಾಲ್ಕನಿಯ ಬಂಧುಗಳು'. 'ಆರತಕ್ಷತೆ'. 'ನಾನೇಕೆ ಕೊರೆಯುತ್ತೇನೆ' ಯಾರೋ ಬಂದಿದ್ದರು'. 'ಸಂಕಲ್ಪಗಳು'. ಮಿತ್ರ ಪ್ರಬಂಧ. ಬೆಸ್ಟ್ ಆಫ್ ಅ.ರಾ.ಮಿತ್ರ. ಸಮಗ್ರ ಲಲಿತ ಪ್ರಬಂಧಗಳು ಇವು ಮಿತ್ರರವರ ಪ್ರಬಂಧ ಸಂಕಲನಗಳು. ಇವುಗಳು ನನ್ನ ಅಧ್ಯಯನಕ್ಕೆ ಅಗತ್ಯವಾದ ಸಾಮಾಜಿಕ. ಸಾಂಸಾರಿಕ. ಶಿಕ್ಷಣ. ಭಾಷಿಕ. ವಿಡಂಬನೆ ವಿಷಯಗಳನ್ನು ಒಳಗೊಂಡಿರುವ ಪ್ರಬಂಧಗಳನ್ನು ಆಯ್ದು ಅಧ್ಯಯನಗಳಗೆ ಅಗತ್ಯವಿರುವ. ಸಂಶೋಧನೆಯಲ್ಲಿ ವಿಭಾಗ ಮಾಡಿಕೊಂಡಿರುವ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ಅವುಗಳ ವ್ಯಾಪ್ತಿಗೆ ಬರುವ ಪ್ರಬಂಧಗಳನ್ನು ಆಯ್ಕೆ ಮಾಡಿಕೊಂಡು ಸಂಶೋಧನೆಯನ್ನು ಕೈಗೊಳ್ಳಲಾಗಿದೆ.

ಸ್ವರೂಪ :

ಅ.ರಾ.ಮಿತ್ರರವರ ಲಲಿತ ಪ್ರಬಂಧಗಳು ವಿಶಿಷ್ಟತೆಯಿಂದ ಕೂಡಿದ್ದು ಓದುಗರಿಗೆ ಹೆಚ್ಚು ಮುದವನ್ನು ನೀಡುತ್ತವೆ. ಈ ಪ್ರಬಂಧಗಳು ಓದಿ ನಕ್ಕು ಮರೆಯುವಂತವುಗಳಾಗಿರದೆ ನಮ್ಮನ್ನು ಹೆಚ್ಚು ಚಿಂತನೆಗೆ ಒಳಪಡಿಸುತ್ತವೆ. ಇವರು ಬಳಸುವ ದುಷ್ಟಾಂತ. ಭಾಷೆ. ಹಾಸ್ಯ ಎಲ್ಲವೂ ವಿಶಿಷ್ಟತೆಯಿಂದ ಕೂಡಿದ್ದು ಹಾಸ್ಯದ ಮೂಲಕ ಸಮಾಜವನ್ನು. ವ್ಯಕ್ತಿಯನ್ನು ವಿಡಂಬಿಸುತ್ತಾ ಓದುಗರೊಂದಿಗೆ ಸಂಭಾಷಣೆಯನ್ನು ನಡೆಸುತ್ತಾ ಪ್ರಬಂಧವನ್ನು ಹೆಣೆಯುತ್ತಾರೆ.

ಲಲಿತ ಪ್ರಬಂಧ ಒಂದು ವಿಶಿಷ್ಟ ಪ್ರಕಾರವಾಗಿದ್ದು ಅದು ಬೆಳೆದುಬಂದದ್ದನ್ನು ಸಂಕ್ಷಿಪ್ತವಾಗಿ ಪರಿಚಯ ಮಾಡಿಕೊಡಲಾಗುವುದು. ಅ.ರಾ.ಮಿತ್ರರವರು ಲಲಿತ ಪ್ರಬಂಧಗಳಿಗೆ ತಮ್ಮನ್ನು ತೊಡಗಿಸಿಕೊಂಡ ಬಗೆ ಅವರ ಜೀವನ. ಬದುಕು ಬರಹಗಳ ಸಂಕ್ಷಿಪ್ತ ಚರಿತ್ರೆಯನ್ನು ಮಾಡಿಕೊಡಲಾಗುವುದು. ಅ.ರಾ.ಮಿತ್ರರವರು ತಮ್ಮ ಪ್ರಬಂಧಗಳಲ್ಲಿ ಸಾಮಾಜಿಕ. ಸಾಂಸಾರಿಕ. ಶಿಕ್ಷಣ. ರಾಜಕೀಯ. ವ್ಯಕ್ತಿಯ ಗಣ ಸ್ವಭಾವಗಳನ್ನು ಹೇಗೆ ವಿಡಂಬಿಸುತ್ತಾರೆ. ಅವುಗಳ ಮುಖ್ಯ ಉದ್ದೇಶವೇನು ಸಮಾಜದಲ್ಲಿ ವ್ಯಕ್ತಿಯ ಗುಣ ಸ್ವಭಾವಗಳು ಹೇಗೆ ಅನಾವರಣಗೊಳ್ಳುತ್ತವೆ ಎಂಬಂತ ಅಂಶಗಳನ್ನು ತಿಳಿಸಲಾಗುವುದು.

ಸಾಮಾಜಿಕ ಸಂದರ್ಭದಲ್ಲಿ ನಮ್ಮ ಸುತ್ತಮುತ್ತ ಎಂತೆಂಥಹ ವ್ಯಕ್ತಿಗಳು ಇರುತ್ತಾರೆ. ಸಾಂಸಾರಿಕ ಸಂದರ್ಭದಲ್ಲಿ ಕಂಡು ಬರುವ ಅಂಶಗಳನ್ನು ಹೇಗೆ ವಿಡಂಬಿಸುತ್ತಾರೆ. ಸಂಸಾರದಲ್ಲಿ ಏನೆಲ್ಲಾ ಸಮಸ್ಯೆಗಳಿರುತ್ತವೆ. ಸರಸ. ವಿರಸ. ಕಲಹ. ಮುಂತಾದವುಗಳಿಗೆ ಕಾರಣಗಳೇನು. ಸಂಸಾರದಲ್ಲಿ ಗಂಡು ಹೆಣ್ಣಿನ ವಿಭಿನ್ನ ಆಲೋಚನೆಗಳು ಹೇಗಿರುತ್ತವೆ. ಅವರುಗಳ ಪಾತ್ರವೇನು ಎಂಬಂಥ ಅಂಶಗಳನ್ನು ಪ್ರಬಂಧಗಳ ಹಿನ್ನೆಲೆಯಲ್ಲಿ ಸಂಶೋಧಿಸಲಾಗುವುದು.

ಸಂಸಾರದಲ್ಲಿ ತಾಳ್ಮೆ ಮುಖ್ಯ ತಾಳ್ಮೆ ಕಳೆದುಕೊಂಡು ಎಲ್ಲರೊಂದಿಗೆ ಜಗಳವಾಡುತ್ತ ನಡೆದರೆ ಮನಸ್ಥಾಪ ಉಂಟಾಗಿ ಸಂಸಾರದಲ್ಲಿ ಬಿರುಕುಗಳು ಕಾಣಿಸಿಕೊಳ್ಳುತ್ತವೆ. ಆಗ ಸಂಸಾರ ಒಡೆದು ಚೂರಾಗುತ್ತವೆ. ಸಂಸಾರ ತೂಗಿಸಲು ಜಾಣ್ಮೆ ಮುಖ್ಯ. ಅಲ್ಲಿ ಗಂಡು ಹೆಣ್ಣುಗಳು ತಮ್ಮ ಸ್ಥಾನಮಾನವನ್ನು ಅರಿತು ನಡೆದುಕೊಳ್ಳಬೇಕಾಗುತ್ತದೆ. ಇಲ್ಲದೆ ಹೋದರೆ ಸಂಸಾರ ಕದಡಿದ ಕೊಳದಂತಾಗುತ್ತದೆ. ಇದಕ್ಕೆ ಕಾರಣವಾಗುವ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಸಂಶೋಧನೆ ಕೈಗೊಳ್ಳಲಾಗುವುದು.

ಸಮಾಜದ ಬೆಳವಣಿಗೆಯಲ್ಲಿ ಶಿಕ್ಷಣ. ರಾಜಕಾರಣ. ಸರ್ಕಾರಿ ಅಧಿಕಾರಿಗಳ ಪಾತ್ರ ಗುರುತರವಾದದ್ದು. ಆದರೆ ಇವು ತಪ್ಪು ಹೆಜ್ಜೆಯನ್ನು ಇಟ್ಟಾಗ ಇಡೀ ಸಮಾಜವೇ ಅದೋಗತಿಗೆ ಸಾಗುತ್ತದೆ. ಸಮಾಜದ ಅದೋಗತಿಗೆ ಕಾರಣವಾಗುವ ಅಂಶಗಳನ್ನು ತಮ್ಮ ಪ್ರಬಂಧಗಳಲ್ಲಿ ಹೇಗೆ ವಿಡಂಬಿಸಿದ್ದಾರೆ ಎಂಬಂಥ ಅಂಶಗಳನ್ನು ಇಲ್ಲಿ ತಿಳಿಸಲಾಗುವುದು. ದೇಹದ ಅಂಗಾಂಗಗಳ ಅಭಿವ್ಯಕ್ತಿಯ ಸ್ವರೂಪ. ಸಾಮಾಜಿಕ ಸಂದರ್ಭದಲ್ಲಿ ಹೇಗೆ ಪ್ರಕಟಗೊಳ್ಳುತ್ತದೆ.

ಹಾಗೆ ಪ್ರಕಟಗೊಂಡಾಗ ಆತನ ವ್ಯಕ್ತಿತ್ವದ ಮೇಲೆ ದೇಹದ ಅಂಗಾಂಗಗಳು ಹೇಗೆ ಪ್ರಭಾವ ಬೀರುತ್ತವೆ. ಅವನ ಗುಣ ಸ್ವಭಾವವನ್ನು ಚಿತ್ರಿಸುವಲ್ಲಿ ದೇಹದ ಅಂಗಾಂಗಗಳು ಹೇಗೆ ಪ್ರಮುಖ ಪಾತ್ರ ವಹಿಸುತ್ತವೆ ಎಂಬುದನ್ನು ತಿಳಿಸಿಕೊಡಲಾಗುವುದು.

ಅ.ರಾ.ಮಿತ್ರರವರ ಲಲಿತ ಪ್ರಬಂಧಗಳು ಹಲವು ವಿಶಿಷ್ಟತೆಯಿಂದ ಕೂಡಿದ್ದು ಓದುಗರನ್ನು ಹೆಚ್ಚು ಆಕರ್ಷಿಸುತ್ತವೆ. ವಸ್ತುವಿನ ಆಯ್ಕೆ ಆಯ್ಕೆಯಲ್ಲಿನ ಭಿನ್ನತೆ. ವಿಷಯ ಬೆಳವಣಿಗೆ. ವಿಷಯ ಬೆಳವಣಿಗೆಯಲ್ಲಿ ತೋರುವ ಜಾಣ್ಮೆ. ದುಷ್ಟಾಂತಗಳ ಹೋಲಿಕೆ. ಪುರಾಣ ಉಕ್ತಿಗಳ ಬಳಸುವಿಕೆ. ಅವುಗಳ ಔಚಿತ್ಯ ಪಾತ್ರಗಳನ್ನು ಚಿತ್ರಿಸುವಾಗ ತೋರುವ ನೈಪುಣ್ಯತೆ. ಭಾಷೆಯ ಸ್ವರೂಪ. ಹೊಸ ಪದಗಳ ಸೃಷ್ಟಿ. ಪದಗಳನ್ನು ಸ್ಥಾನಪಲ್ಲಟಗೊಳಿಸಿ ಅವುಗಳಿಗೆ ವಿಶೇಷ ಅರ್ಥ ಒದಗಿಸಿಕೊಡುವ ಅವರ ಚಮತ್ಕಾರತೆ. ಹಾಸ್ಯ ಪ್ರಜ್ಞೆ. ಹಾಸ್ಯ ಮುಂತಾದ ಅಂಶಗಳನ್ನು ಕುರಿತು ಸಂಶೋಧನೆಯನ್ನು ಕೈಗೊಳ್ಳಲಾಗುವುದು.

ಲೇಖಕನಿಗೆ ಸಾಮಾಜಿಕ ಜವಾಬ್ದಾರಿಗಳಿದ್ದಾಗ ಮಾತ್ರ ಸಾಹಿತ್ಯ ಸಾರ್ಥಕತೆಯನ್ನು ಪಡೆದು ಕೊಳ್ಳುತ್ತದೆ. ಇಲ್ಲದೆ ಹೋದರೆ ಆತನ ಶ್ರಮ ವ್ಯರ್ಥವಾಗುತ್ತದೆ. ತನ್ನ ಅಮೂರ್ತ ಆಲೋಚನೆ. ಚಿಂತನೆಗಳನ್ನು ಬರವಣಿಗೆಯ ಮೂಲಕ ಮೂರ್ತರೂಪಕ್ಕೆ ಇಳಿಸುವಾಗ ಸಾಮಾಜಿಕ ಕಾಳಜಿ. ಮುಖ್ಯವಾಗಿರಬೇಕಾಗುತ್ತದೆ. ಆ ದೃಷ್ಟಿಯಿಂದ ನೋಡಿದಾಗ ಅ.ರಾ.ಮಿತ್ರರವರ ಪ್ರಬಂಧಗಳು ನಿಜವಾಗಲು ಮಾನವ ಜೀವನ ಶೈಲಿಯ ಪ್ರತಿಬಿಂಬಗಳಾಗಿವೆ. ಸಮಾಜದಲ್ಲಿ ವ್ಯಕ್ತಿ ಹೇಗೆ ನಡೆದುಕೊಳ್ಳುತ್ತಾನೆ ಎಂಬಂಥ ಅಂಶಗಳು ಇವರ ಪ್ರಬಂಧದಲ್ಲಿ ಪ್ರಮುಖವಾಗಿ ಕಾಣಿಸಿಕೊಳ್ಳುತ್ತವೆ. ಮನುಷ್ಯ ತನ್ನ ಸುತ್ತಮುತ್ತಲಿನವರೊಂದಿಗೆ ಸಂಘರ್ಷಕ್ಕೆ ಇಳಿದು ಸಂಬಂಧಗಳು ಹಾಳಾಗಲು ಕಾರಣನಾಗುತ್ತಿದ್ದಾನೆ. ಇದಕ್ಕೆ ಕಾರಣವಾಗುವ ಅಂಶಗಳು ಯಾವುವು ? ನಿಜವಾದ ಜೀವನ ಮೌಲ್ಯಗಳು ಯಾವುವು ? ಇದನ್ನು ಮನುಷ್ಯ ಯಾಕೆ ಕಳೆದುಕೊಳ್ಳುತ್ತಿದ್ದಾನೆ ಎಂಬಂಥಹ ಅಂಶಗಳನ್ನು ಚರ್ಚಿಸಿ ನಿಜವಾದ ಮಾನವೀಯ ಮೌಲ್ಯಗಳನ್ನು ಹೇಗೆ ನಡೆಸಬೇಕು. ಬದುಕಿನಲ್ಲಿ ಶಾಂತಿ ನೆಮ್ಮದಿಯನ್ನು ಹೇಗೆ ಕಂಡುಕೊಳ್ಳಬೇಕು ಎಂಬುದನ್ನು ತಿಳಿಸಿ ಕೊಡಲಾಗುವುದು.

ಈ ಮೇಲಿನ ಅಂಶಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಅ.ರಾ.ಮಿತ್ರರವರ ಲಲಿತ ಪ್ರಬಂಧಗಳಲ್ಲಿ ಕಂಡು ಬರುವ ಸಾಮಾಜಿಕ. ಸಾಂಸಾರಿಕ. ವಿಡಂಬನೆ ಹಾಗೂ ಲಲಿತ ಪ್ರಬಂಧಗಳ ವಿಶಿಷ್ಟತೆಯನ್ನು ವಿಡಂಬನೆಯ ಮೂಲಕ ಮನುಷತ್ವ ಮತ್ತು ಜೀವನ ಮೌಲ್ಯಗಳ ಹುಡುಕಾಟವನ್ನು 'ಅ.ರಾ.ಮಿತ್ರರವರ ಸಮಗ್ರ ಲಲಿತ ಪ್ರಬಂಧಗಳು-ಒಂದು ಅಧ್ಯಯನ' ಎಂಬ ಶೀರ್ಷಿಕೆ ಅಡಿಯಲ್ಲಿ' ಸಂಶೋಧನೆ ಕೈಗೊಂಡು ಅಧ್ಯಯನವನ್ನು ನಡೆಸಿ ಆ ಮೂಲಕ ಮಿತ್ರರವರು ಮನುಷತ್ವ ಮತ್ತು ಜೀವನ ಮೌಲ್ಯಗಳನ್ನು ಹೀಗೆ ಕಟ್ಟಿಕೊಡುತ್ತಾರೆ ಎಂಬಂತ ಅಂಶಗಳನ್ನು ತಿಳಿಸಿಕೊಡಲಾಗುವುದು.

ಅಧ್ಯಾಯ - 2

ಕನ್ನಡ ಲಲಿತ ಪ್ರಬಂಧಗಳ ಸಂಕ್ಷಿಪ್ತ ಚರಿತ್ರೆ

ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಕಾವ್ಯ ಉತ್ಕೃಷ್ಟವಾಗಿ ಬೆಳೆದಂತೆ ಗದ್ಯ ಸಾಹಿತ್ಯ ಅಷ್ಟಾಗಿ ಬೆಳೆಯಲಿಲ್ಲ. ಕಾವ್ಯವನ್ನು ಕವಿಗಳು ತಮ್ಮ ಪಾಂಡಿತ್ಯ ಮತ್ತು ಪ್ರತಿಭೆಯ ಅಭಿವ್ಯಕ್ತಿಗಾಗಿ ಹಾಗೂ ರಾಜರನ್ನು ಓಲೈಸುವ ಸಲುವಾಗಿಯೂ ಬರೆದಿದ್ದಾರೆ. ವಡ್ಡಾರಾಧನೆ ಕೃತಿಯೇ ಕನ್ನಡದಲ್ಲಿ ದೊರೆತ ಮೊದಲ ಗದ್ಯ ಗ್ರಂಥ. (920) ಅನಂತರ ಚಾವುಂಡರಾಯನ ಚಾವುಂಡಪುರಾಣ (975), ದುರ್ಗಸಿಂಹನ ಪಂಚತಂತ್ರ (1030, ಗದ್ಯ ಪ್ರಧಾನ), ಹಸ್ತಮಲ್ಲನ ಪೂರ್ವ ಪುರಾಣ (ಸು.1300), ಮಗ್ಗೆಯ ಮಾಯದೇವನ ಅನುಭವ ಸೂತ್ರ (1430), ಷಟ್ಟಲಗದ್ಯ ನಿಜಗುಣ ಶಿವಯೋಗಿಯ 'ವಿವೇಕ ಚಿಂತಾಮಣಿ' (1500). ಇವುಗಳನ್ನು ಬಿಟ್ಟರೆ ಮೈಸೂರು ಅರಸರ ಆಳ್ವಿಕೆಯವರೆಗೆ ಗದ್ಯಸಾಹಿತ್ಯ ಅಷ್ಟಾಗಿ ಬೆಳೆಯಲಿಲ್ಲ ಅನಂತರದ ಕಾಲದಲ್ಲಿ ಇದು ಬೆಳವಣಿಗೆ ಹೊಂದಿದನ್ನು ಕಾಣಬಹುದು. ಈ ಕಾಲದ ಪ್ರಮುಖ ಗದ್ಯ ಕೃತಿಗಳೆಂದರೆ ಚಿಕ್ಕದೇವರಾಜನ 'ಚಿಕ್ಕದೇವರಾಜ ಭಿನ್ನಪ' (1700), ತಿರುಮಲಾರ್ಯನ 'ಚಿಕದೇವರಾಜ ವಂಶಾವಳಿ' (1700), ದೇವಚಂದ್ರನ 'ರಾಜಾವಳೀ ಕಥೆ' (1800), ಮುಮ್ಮಡಿ ಕೃಷ್ಣರಾಜರ 'ಅಖಂಡ ಕಾವೇರಿ ಮಹಾತ್ಮೆ' (1830) ಕೆಂಪುನಾರಾಯಣನ 'ಮುದ್ರಾಮಂಜೂಷ' (1850), ನಂದಳಿಕೆ ಲಕ್ಷ್ಮಿನಾರಣಪ್ಪ (ಮುದ್ರಣ 1900)ನ 'ಅದ್ಭುತ ರಾಮಾಯಣ', 'ರಾಮೇಶ್ವಮೇಧ' ಕೃತಿಗಳು ಪ್ರಮುಖವಾದವು. ಮುಂದೆ ಆಧುನಿಕ ಸಾಹಿತ್ಯದಲ್ಲಿ ಪಾಶ್ಚಿಮಾತ್ಯ ಸಾಹಿತ್ಯದ ಪ್ರಭಾವದಿಂದ ಈ ಗದ್ಯ ಸಾಹಿತ್ಯ ವಿವಿಧ ರೂಪುಗಳನ್ನು ತಾಳಿ ವಿಕಾಸ ಹೊಂದಿ ಬೆಳವಣಿಗೆಯಾದುದ್ದನ್ನು ನೋಡುತ್ತೇವೆ.

ಹತ್ತೊಂಬತ್ತನೆಯ ಶತಮಾನದಲ್ಲಾದ ಯೂರೋಪಿನ ಕ್ರಾಂತಿಯ ಪರಿಣಾಮವಾಗಿ ಅನೇಕ ಪಲ್ಲಟಗಳಾದವು. ಇದು ಪ್ರಪಂಚದಾದ್ಯಂತ ಕಾಣಿಸಿಕೊಂಡು ರಾಜಕೀಯ, ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಸಾಹಿತ್ಯ ಕ್ಷೇತ್ರದಲ್ಲಿ ಅಪಾರ ಬದಲಾವಣೆಗೆ ಎಡೆಮಾಡಿಕೊಟ್ಟಿತು. ಪಶ್ಚಿಮದಿಂದ ಬೀಸಿದ ಬದಲಾವಣೆಯ ಗಾಳಿ ಭಾರತದಲ್ಲೂ ಕಾಣಿಸಿಕೊಂಡಿತು. ಅಧಿಕಾರದ ಚುಕ್ಕಾಣಿ ಹಿಡಿದಿದ್ದ ಬ್ರಿಟೀಷರ ರೀತಿ-ನೀತಿ, ಆಚಾರ-ವಿಚಾರ, ಸಂಸ್ಕೃತಿ, ಜೀವನಶೈಲಿ ಮುಂತಾದವುಗಳ ಪರಿಚಯವಾಗತೊಡಗಿತು. ಮುಖ್ಯವಾಗಿ ಇಂಗ್ಲಿಷ್ ವಿದ್ಯಾಭ್ಯಾಸದಿಂದ ಮಹತ್ತರ ಬದಲಾವಣೆ ಕಾಣಿಸಿಕೊಂಡಿತು. ಪಾಶ್ಚಿಮಾತ್ಯರ ಆಲೋಚನಾಕ್ರಮ ಭಾರತೀಯರನ್ನು ಬೆರಗುಗೊಳಿಸಿತು. ಭಾರತೀಯ ಜೀವನ ಸಂಸ್ಕೃತಿಯ ಮೌಲ್ಯಗಳು ಹಾಗೂ ಪಾಶ್ಚಿಮಾತ್ಯ ಜೀವನ ಶೈಲಿಯ ಮೌಲ್ಯಗಳ ನಡುವೆ ಸಂಘರ್ಷ ಏರ್ಪಟ್ಟಿತ್ತು. ಭಾರತೀಯರು ಪರಂಪರೆಯ ಮಾರ್ಗ ತೊರೆದು ಪಾಶ್ಚಿಮಾತ್ಯರನ್ನು ಅನುಸರಿಸತೊಡಗಿದರು. ಇದು ಅತ್ಯಂತ ಮಹತ್ವಪೂರ್ಣ ಬದಲಾವಣೆಗೆ ಕಾರಣವಾಯಿತು. ಅಂತೆಯೇ ಈ ಕ್ರಾಂತಿಯ ಗಾಳಿ ಕರ್ನಾಟಕದಲ್ಲೂ ಕಾಣಿಸಿಕೊಂಡು ಬದಲಾವಣೆಗೆ ಕಾರಣವಾಯಿತು.

ಆಧುನಿಕ ಕನ್ನಡ ಸಾಹಿತ್ಯದ ಮೇಲೆ ಪಾಶ್ಚಿಮಾತ್ಯರ ಪ್ರಭಾವ ಆದದ್ದು ಇದೆ ಸಂದರ್ಭದಲ್ಲಿ. ಇಂಗ್ಲಿಷ್ ಶಿಕ್ಷಣವನ್ನು ಪಡೆದವರು ಪಾಶ್ಚಿಮಾತ್ಯ ಸಾಹಿತ್ಯವನ್ನು ಓದಿಕೊಂಡರು. ಈ ಸಾಹಿತ್ಯದ ಪ್ರೇರಣೆಯ ಪ್ರಭಾವಕ್ಕೆ ಒಳಗಾಗಿ ಕನ್ನಡ ಸಾಹಿತ್ಯ ಹಲವಾರು ಬದಲಾವಣೆಕಂಡಿತು. ಇದರ ಪರಿಣಾಮವಾಗಿ ಆಧುನಿಕ ಕನ್ನಡ ಸಾಹಿತ್ಯ ಪರಂಪರಾಗತ ಮಾರ್ಗವನ್ನು ತೊರೆದು ಹೊಸ ಸಾಹಿತ್ಯ ರಚನೆಯಾಗತೊಡಗಿತು. ಮೊದಲು ಅನುವಾದದ ಮೂಲಕ ಕಾಣಿಸಿಕೊಂಡು ಮುಂದೆ ಸ್ವತಂತ್ರ ಹೆಜ್ಜೆ ಇಡತೊಡಗಿತು. ಹೊಸ ಸಾಹಿತ್ಯ ಪ್ರಕಾರಗಳು ಕಾಣಿಸಿಕೊಂಡವು. ಸಣ್ಣಕತೆ, ಕಾದಂಬರಿ, (ಗದ್ಯಸಾಹಿತ್ಯ, ಪ್ರಬಂಧ) ಸಾಹಿತ್ಯ ವಿಮರ್ಶೆ, ಪ್ರವಾಸ ಕಥನ, ಸಾಕ್ಷ್ಯಚಿತ್ರ, ವೈಚಾರಿಕ ಸಾಹಿತ್ಯ, ಆತ್ಮಚರಿತ್ರೆ, ಜೀವನ ಚರಿತ್ರೆ, ಅಭಿನಂದನಾ ಗ್ರಂಥ ಮುಂತಾದ ಪ್ರಕಾರಗಳು ಕಾಣಿಸಿಕೊಂಡು ಹೊಸ ಅಲೆಯನ್ನು ಸೃಷ್ಟಿಸಿದವು.

ಗದ್ಯ ಸಾಹಿತ್ಯ ಒಂದು ವಿಶಿಷ್ಟ ಪ್ರಕಾರವಾಗಿದ್ದು ಜನರನ್ನು ತನ್ನೆಡೆಗೆ ಆಕರ್ಷಿಸಿತು. ಹೇಳುವ ವಿಷಯವನ್ನು ಸ್ಫುಟವಾಗಿ ಮನಮುಟ್ಟುವಂತೆ, ಎಲ್ಲರಿಗೂ ಅರ್ಥವಾಗುವಂತೆ ಒಂದು ನಿರ್ದಿಷ್ಟಕಾಲ ಮಿತಿಯೊಳಗೆ ಸುಂದರ ಭಾಷಾ ಶೈಲಿಯ ಮೂಲಕ ಅಭಿವ್ಯಕ್ತಗೊಳಿಸಲು ಅನುಕೂವಾಗಿರುವುದರಿಂದ ಹಲವು ಜನರು ಈ ಗದ್ಯ ಸಾಹಿತ್ಯ ಬರವಣಿಗೆ ಕಡೆ ಒಲವು ಬೆಳೆಸಿಕೊಂಡು ಬರವಣಿಗೆಯಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಪ್ರಮುಖವಾಗಿ ಆಧುನಿಕ ಕಾಲದಲ್ಲಿ ಪ್ರಬಂಧಗಳ ಮೂಲಕ ಗದ್ಯಸಾಹಿತ್ಯ ವಿಕಾಸಗೊಂಡಿತು. ಮೊದಲು ಅನುವಾದದ ಮೂಲಕ ಆರಂಭವಾಗಿ ಅನಂತರ ಸ್ವತಂತ್ರವಾಗಿ ರಚನೆಯಾಗಿ, ಪತ್ರಿಕೆಗಳಲ್ಲಿ ಬಿಡಿಬಿಡಿ ಲೇಖನಗಳಾಗಿ ಪ್ರಕಟಗೊಂಡು ಮುಂದೆ ಪುಸ್ತಕ ರೂಪದಲ್ಲಿ ಹೊರಬಂದವು. ಪ್ರಬಂಧಗಳಲ್ಲಿ ಮುಖ್ಯವಾಗಿ ಅಂಕಣಬರಹ, ಪ್ರವಾಸ ಕಥನ, ವಿಚಾರಸಾಹಿತ್ಯ, ಹರಟೆ-ಲಘು ಪ್ರಬಂಧ, ಲಲಿತ ಪ್ರಬಂಧಗಳನ್ನು ಕಾಣಬಹುದು. ಇವು ಮುಂದೆ ಒಂದು ನಿರ್ದಿಷ್ಟರೂಪ ತಾಳಿ ಬೆಳೆದುಬಂದವು.

ಅಂಕಣ ಬರಹ :

ಬ್ರಿಟೀಷರಿಂದ ಮುದ್ರಣಯಂತ್ರ ಪರಿಚಯವಾದ ಮೇಲೆ ಹಲವು ಪತ್ರಿಕೆಗಳು ಬರತೊಡಗಿದವು ಇಂತಹ ಪತ್ರಿಕೆಗಳಲ್ಲಿ ಒಂದು ನಿರ್ದಿಷ್ಟ ಸ್ಥಳದಲ್ಲಿ ಪ್ರಕಟವಾಗುತ್ತಿದ್ದ ಬರಹಗಳೆ ಅಂಕಣ ಬರಹಗಳು. ಅಂಕಣ ಎಂದರೆ ಕಾಲಮ್ ಎಂದರ್ಥ. ಕಾಲಮ್‌ನ ಮೂಲಾರ್ಥ 'ಕಂಬ' ಪ್ರಕಟವಾಗುವ ವಿಷಯಗಳು ಕಂಬ ಕಂಬಗಳಾಗಿ ಮೂಡಿ ಬರುತ್ತಿದ್ದವು. ಆದ್ದರಿಂದಲೇ ಇದನ್ನು ಇಂಗ್ಲೀಷ್‌ನಲ್ಲಿ 'ಕಾಲಮ್' ಎಂದು ಕರೆಯುತ್ತಾರೆ. ಇವುಗಳಲ್ಲಿ ಒಂದು ಕ್ರಮ, ಏಕರೂಪತೆ ಇದ್ದು, ಒಂದು ಗೊತ್ತಾದ ಜಾಗದಲ್ಲಿ ನಿಯತವಾಗಿ ಬರೆಯಲ್ಪಡುವ ಲೇಖನ ಮೂಲೆಗಳೇ ಕಾಲಂಗಳು ಇದನ್ನು ನಾವು ಅಂಕಣ ಬರಹಗಳೆಂದು ಕರೆಯುವುದು.

1920ರಲ್ಲಿ ಕಾಲಮಿಸ್ಟ್ (ಅಂಕಣಕಾರ) ಎಂಬ ಶಬ್ದವನ್ನು ರೂಢಿಗೆ ತಂದರು. ಜಾನಸನ್, ಗೋಲ್ಡ್‌ಸ್ಮಿತ್, ಯೂಜಿನ್ ಫೀಲ್ಡ್, ಆಬ್ರೋಸ್ ಬಿಯರ್ಸ್ ಮುಂತಾದವರ

ಬರಹಗಳು ಮುಂದೆ ಸ್ಫೂರ್ತಿಯಾದವು. ಹಿಂದಿನ ಕಾಲದಲ್ಲಿ ಮನೆಗಳನ್ನು ಇಷ್ಟು ಅಂಕಣಗಳ ಮನೆ ಎಂದು ಗುರುತಿಸುತ್ತಿದ್ದರು. ಅಂಕಣಗಳ ಸಂಖ್ಯೆಯಿಂದ ಮನೆತನದ ಗೌರವ ನಿರ್ಧಾರವಾಗುತ್ತಿತ್ತು. ಅದೇ ರೀತಿಯಲ್ಲಿ ವಾರಪತ್ರಿಕೆ. ಮಾಸಪತ್ರಿಕೆ. ದಿನಪತ್ರಿಕೆ. ನಿಯತಕಾಲಿಕೆಗಳಲ್ಲಿ ಇಂತಹ ಅಂಕಣ ಬರಹಗಳನ್ನು ಪೋಷಿಸಿಕೊಂಡು ಬಂದಿರುವುದನ್ನು ಕಾಣಬಹುದು. ಈ ಅಂಕಣ ಬರಹಗಳಲ್ಲಿ ಅಂತರ್‌ರಾಷ್ಟ್ರೀಯ ವಿಷಯಗಳು. ಗಡಿಸಮಸ್ಯೆ. ಶಿಕ್ಷಣದ ಸಮಸ್ಯೆ. ಸಾಹಿತ್ಯ ವಿಚಾರಚರ್ಚೆ. ಕ್ರೀಡೆ. ಪ್ರಶಸ್ತಿ. ವ್ಯಕ್ತಿಗಳ ಚರಿತ್ರೆ. ದೇಶದ ಸಂಸ್ಕೃತಿ. ನೆಲ. ಜಲ. ಭಾಷೆ ಹೀಗೆ ಮೊದಲಾದ ಹಲವು ವಿಷಯಗಳು ಈ ಅಂಕಣ ಬರಹದಲ್ಲಿ ಚರ್ಚಿತವಾಗುವುದನ್ನು ಕಾಣಬಹುದು.

ಅಂಕಣ ಬರಹಗಳಿಗೆ ಸ್ಥಳದ ಮಿತಿ ಇರುವುದರಿಂದ ವಿಷಯ ವಿವರಣೆಗಿಂತ ಸಂಕ್ಷಿಪ್ತ ನಿರೂಪಣೆಯೇ ಮುಖ್ಯವಾಗಿದ್ದು. ಅಂಕಣಕಾರ ಹೇಳ ಹೊರಟಿರುವ ವಿಷಯವನ್ನು ಚುರುಕು ಮುಟ್ಟಿಸುವ ರೀತಿ ನಿರೂಪಿಸುವುದು ಮುಖ್ಯವಾಗುತ್ತದೆ. ಆದ್ದರಿಂದ ಅಂಕಣ ಬರಹವನ್ನು ಒಂದು ಬಗೆಯ ಇಣುಕುನೋಟ ಎನ್ನಬಹುದು. ಅಂಕಣ ಬರಹ ಒಂದು ಸವಾಲಿನ ಕೆಲಸವಾಗಿದ್ದು ಸಮಗ್ರ ವಿಷಯವನ್ನು ಶಬ್ದಗಳಲ್ಲಿ ಹಿಡಿದಿಟ್ಟು ಓದುಗರಿಗೆ ಮನವರಿಕೆ ಮಾಡಿಕೊಡುವುದು ಅಂಕಣಕಾರನ ಪ್ರತಿಭೆಗೆ ಸಾಕ್ಷಿಯಾಗುತ್ತದೆ. ಆರಂಭ ಕಾಲದಲ್ಲಿ ಡಿ.ವಿ.ಜಿ.. ಮಾಸ್ತಿ. ಶಿವರಾಮಕಾರಂತ. ಸಿದ್ದನಗಳ್ಳಿ ಕೃಷ್ಣಶರ್ಮ. ಬಸವರಾಜ ಕಟ್ಟಿಮನಿ. ಅ.ನ.ಕೃ.. ನಿರಂಜನ. ಪಿ. ಲಂಕೇಶ್. ಹ.ಮಾ.ನಾಯಕ್. ಕು.ಶಿ. ಹರಿದಾಸಭಟ್. ಎಚ್ಚಸ್ಕೆಯವರು ಇದರಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಇತ್ತೀಚಿನ ಪತ್ರಿಕೆಗಳಲ್ಲಿ ರಾಮಚಂದ್ರಗುಹ. ಹೆಚ್.ಎಸ್.ಶಿವಪ್ರಕಾಶ್. ಪದ್ಮರಾಜ ದಂಡಾವತಿ. ರಘುನಾಥ ಚ.ಹ. ಸೂಲಿಬೆಲೆ ಚಕ್ರವರ್ತಿ. ಪ್ರತಾಪ್ ಸಿಂಹ ಮುಂತಾದವರು ಅಂಕಣ ಬರಹಗಳಲ್ಲಿ ಕಾಣಿಸಿಕೊಳ್ಳುತ್ತಾರೆ.

ಪ್ರವಾಸ ಕಥನ :

ಕನ್ನಡದಲ್ಲಿ ಪ್ರವಾಸ ಕಥನಗಳು ಯತೇಚ್ಛವಾಗಿ ಮೂಡಿ ಬಂದಿವೆ. ಪರಸ್ಥಳಗಳಿಗೆ. ವಿದೇಶಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಆದ ಅನುಭವಗಳನ್ನು ಕಥನದ ಮೂಲಕ ಕಟ್ಟಿಕೊಟ್ಟಿದ್ದಾರೆ. ಪ್ರವಾಸಕ್ಕೆಂದು ಹಲವು ಜನ ಬೇರೆ ಬೇರೆ ಸ್ಥಳಗಳಿಗೆ ತೆರಳುತ್ತಾರೆ. ಆದರೆ ಸಾಹಿತಿಗಳನ್ನು ಹೊರತುಪಡಿಸಿ ಉಳಿದವರು ತಮ್ಮ ಪ್ರವಾಸದ ಅನುಭವಗಳನ್ನು ಬರೆಯದಿರುವುದು ದುರದೃಷ್ಟದ ಸಂಗತಿ. ಸ್ವಾತಂತ್ರ್ಯೋತ್ತರ ಪ್ರವಾಸ ಕಥನ ಗ್ರಂಥಗಳ ವೈವಿಧ್ಯವನ್ನು. ವಿಷಯ ಸಂಪತ್ತನ್ನು. ಜಿ.ಕೆ. ಮಧ್ಯಸ್ಥರು ಗುರುತಿಸಿದ್ದಾರೆ. ವಿ.ಸೀ.ಯವರ 'ಪಂಪಾಯಾತ್ರೆ' ಹಂಪೆಯನ್ನು. ಹಂಪೆಯ ಪ್ರವಾಸದ ಅನುಭವವನ್ನು ಉಂಟು ಮಾಡುವ ಶ್ರೀಮಂತ ಕೃತಿ. ಅದೇ ರೀತಿ ವಿದೇಶಿಗಳಿಗೆ. ಅನ್ಯಸ್ಥಳಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಅಲ್ಲಿನ ಜನರ ಆಚಾರ-ವಿಚಾರ. ರೀತಿ-ನೀತಿ. ಸ್ಥಿತಿ-ಗತಿ. ಸಂಸ್ಕೃತಿ. ಆಹಾರ ಪದ್ಧತಿ. ಜನರ ಜೀವನ ಶೈಲಿ. ಸ್ಥಳದ ಐತಿಹಾಸಿಕ ಹಿನ್ನೆಲೆ ಮುಂತಾದ ಸಂಗತಿಗಳನ್ನು ಪ್ರಾಮಾಣಿಕವಾಗಿ

ದಾಖಲಿಸುವುದನ್ನು ಪ್ರವಾಸ ಕಥನದಲ್ಲಿ ನೋಡುತ್ತೇವೆ. ಇಲ್ಲಿ ವರ್ಣನೆ ಮತ್ತು ವಿಷಯ ಸಂಗ್ರಹ ಮುಖ್ಯವಾಗಿದ್ದು ಆ ಸ್ಥಳದ ಇತಿಹಾಸ ಪರಿಚಯ ಮಾಡಿಕೊಳ್ಳಲು ಸಹಾಯಕವಾಗುತ್ತದೆ. ಹೀಗೆ ವಿದೇಶಗಳಿಗೆ ಭೇಟಿ ನೀಡಿದ ಹಲವು ಸಾಹಿತಿಗಳು ತಮಗೆ ಆದ ಪ್ರವಾಸದ ಅನುಭವವನ್ನು ಸಾಹಿತ್ಯ ರೂಪದಲ್ಲಿ ಹಿಡಿದಿಟ್ಟಿದ್ದಾರೆ. ಮುಖ್ಯವಾಗಿ ಶಿವರಾಮಕಾರಂತರ 'ಅಭೂವಿನಿಂದ ಬರಾಮಕ್ಕೆ'. 'ಅಪೂರ್ವ ಪಶ್ಚಿಮ', 'ಪಾತಾಳಕ್ಕೆ ಪಯಣ' (ಅಮೇರಿಕ ಪ್ರವಾಸ), ಗೊರೂರು ರಾಮಸ್ವಾಮಿ ಐಯ್ಯಂಗಾರ್‌ರವರ 'ಅಮೇರಿಕಾದಲ್ಲಿ ಗೊರೂರು', ಜಿ.ಎಸ್.ಶಿವರುದ್ರಪ್ಪನವರ 'ಮಾಸ್ಕೋದಲ್ಲಿ 22 ದಿನ', ದೆ.ಜವರೇಗೌಡರ 'ವಿದೇಶದಲ್ಲಿ ನಾಲ್ಕುವಾರ', ಬಿ.ಜಿ.ಎಲ್. ಸ್ವಾಮಿಯವರ 'ಅಮೇರಿಕಾ ಪ್ರವಾಸ', ದಿನಕರ ದೇಸಾಯಿಯವರ 'ನಾ ಕಂಡ ಪಡುವಣ', ವಿನಾಯಕರ 'ಸಮುದ್ರದಾಚೆಗೆ', ಗೋ ಸ್ವಾಮಿಯವರ 'ನನ್ನ ಹಿಮಾಲಯ ಯಾತ್ರೆ' ಮುಂತಾದವನ್ನು ಕಾಣಬಹುದು. ನಮ್ಮ ದೇಶದ ಬಗೆಗೆ ಹೊರಗಿನವರ ಅನಿಸಿಕೆಗಳನ್ನು ಶ್ರೀ. ಹೆಚ್.ಎಲ್. ನಾಗೇಗೌಡರು 'ಪ್ರವಾಸಿಕಂಡ ಇಂಡಿಯಾ' ದಲ್ಲಿ ಕಾಣಬಹುದು ಹೀಗೆ ಪ್ರವಾಸ ಕಥನದ ಮೂಲಕ ಗದ್ಯಸಾಹಿತ್ಯ ಬೆಳೆದುದ್ದನ್ನು ಕಾಣಬಹುದು.

ವಿಚಾರ ಸಾಹಿತ್ಯ :

ವಿಚಾರ ಸಾಹಿತ್ಯದ ಮುಖ್ಯ ಉದ್ದೇಶ ಜನರಲ್ಲಿ ವೈಚಾರಿಕ ಮನೋಭಾವವನ್ನು ಬೆಳೆಸುವುದು ಮತ್ತು ದೇಶದ ಬಗ್ಗೆ ಎಚ್ಚರ ಮೂಡಿಸುವುದು. ಭಾಷೆ, ಸಾಹಿತ್ಯ, ಪ್ರಾಂತ್ಯ, ಸಂಸ್ಕೃತಿಯ ಬಗ್ಗೆ ಜನರಲ್ಲಿ ಅಭಿಮಾನ ಬೆಳೆಸುವುದು. ಸಂಸ್ಕೃತದಲ್ಲಿ ವಿಚಾರ ಎಂಬ ಶಬ್ದ ಯೋಚನೆ, ಆಲೋಚನೆ, ಪರೀಕ್ಷೆ-ನಿರೀಕ್ಷಣೆ, ಸಂಗತಿ, ಅಭಿಪ್ರಾಯ, ತರ್ಕ, ವಿಮರ್ಶೆ ನಿರ್ಣಯ, ವಿವೇಕ, ವಿಂಗಡಿಸುವಿಕೆ ಹೀಗೆ ಹಲವು ಅರ್ಥಗಳನ್ನು ಒಳಗೊಂಡಿದೆ. ವಿಚಾರವಂತಿಕೆ ಎಂಬುದು ಎಲ್ಲರೂ ಸ್ವೀಕರಿಸಿರುವಂತಹ ಒಮ್ಮತವಾದ ಅಭಿಪ್ರಾಯಗಳನ್ನು ಪುನರ್ ವಿಮರ್ಶೆಗೆ ಒಳಪಡಿಸುವಂತದ್ದಾಗಿದೆ. ವಿಚಾರವಾದಿ ಹೊರನೋಟಕ್ಕೆ ಸಂಪ್ರದಾಯ ವಿರೋಧಿಯಂತೆ ಕಂಡರೂ ವಾಸ್ತವವಾಗಿ ಸಮಾಜವನ್ನು ಬದಲಿಸುವ ಚಿಂತಕನಾಗಿರುತ್ತಾನೆ. ಸೃಜನಾತ್ಮಕತೆಯ ಹಿನ್ನೆಲೆಯಲ್ಲಿಯೂ ಈ ಬಗೆಯ ವಿಚಾರವಂತಿಕೆ ಕೆಲಸ ಮಾಡುತ್ತದೆ.

"ಚಿಂತನೆ ಹೃದಯಕ್ಕೆ ಸಂಬಂಧಿಸಿದ್ದಾಗ, ಕಲೆ, ಸಾಹಿತ್ಯ, ಸಂಗೀತ, ಮುಂತಾದ ಸೃಜನಾತ್ಮಕ ನೆಲೆಗಳು ಕೆಲಸ ಮಾಡಿದರೆ ಚಿಂತನೆ ಬುದ್ಧಿಗೆ ಸಂಬಂಧಿಸಿದಗ ವಿಮರ್ಶೆ, ವಿಚಾರಪರತೆ, ಸಂಶೋಧನೆ ವಿಶ್ಲೇಷಣೆಗಳಲ್ಲಿ ತೊಡಗುತ್ತದೆ. ಹೀಗೆ ವಿಚಾರ ಸಾಹಿತ್ಯವು ಬೌದ್ಧಿಕ ನೆಲೆಯಿಂದ ಪ್ರಸ್ತುತವಾಗುವ ಒಂದು ಬರವಣಿಗೆಯ ಶಾಖೆಯಾಗಿದೆ ಎಂದು ಅ.ರಾ.ಮಿತ್ರ ಅವರು ಅಭಿಪ್ರಾಯ ಪಡುತ್ತಾರೆ".[೧] ಒಂದು ವಿಷಯವನ್ನು ಸತ್ಯಾಸತ್ಯತೆಯ ಮೂಲಕ ಎಲ್ಲರನ್ನು ಚಿಂತನೆಗೆ ಒಳಪಡಿಸುವುದು ವಿಚಾರಸಾಹಿತ್ಯದ ಮುಖ್ಯಗುರಿ. ಕನ್ನಡದಲ್ಲಿ ಬಿ.ಎಂ.ಶ್ರೀ, ಆಲೂರು ವೆಂಕಟರಾಯ, ಬೇಂದ್ರೆ, ಕುವೆಂಪು, ಮಾಸ್ತಿ, ಎ.ಆರ್. ಕೃಷ್ಣಶಾಸ್ತ್ರಿ, ಶಾಂತಕವಿ, ಶ್ರೀರಂಗ, ಕಾರಂತ, ಅ.ನ.ಕೃ. ಗೋಪಾಲಕೃಷ್ಣ ಅಡಿಗ, ವಿ.ಜಿ.ಕೃಷ್ಣಮೂರ್ತಿ, ಸಿದ್ದನಹಳ್ಳಿ

೧. ಅ.ರಾ. ಮಿತ್ರ - ಮಿತ್ರಾವಲೋಕನ - ಪು-೨೨೨

ಕೃಷ್ಣಶರ್ಮ, ಅನಂತಮೂರ್ತಿ, ಜಿ.ಎಸ್.ಅಮೂರ, ಗಿರಡ್ಡಿ ಗೋವಿಂದರಾಜು, ಡಿ.ಆರ್.ನಾಗರಾಜು, ಟಿ.ಪಿ.ಅಶೋಕ್, ಲಂಕೇಶ್, ತೇಜಸ್ವಿ, ಹೀಗೆ ಹಲವರು ಈ ಕ್ಷೇತ್ರದಲ್ಲಿ ದುಡಿದಿದ್ದಾರೆ. ಬೆಂಗಳೂರು ವಿಶ್ವವಿದ್ಯಾಲಯ ವಿಚಾರಸಾಹಿತ್ಯದ ಎರಡು ಸಂಪುಟಗಳನ್ನು ಹೊರ ತಂದಿರುವುದನ್ನು ಕಾಣಬಹುದು ಇತ್ತೀಚೆಗೆ ವಿಚಾರ ಸಂಕಿರಣಗಳ ಮೂಲಕ ವಿಚಾರ ಸಾಹಿತ್ಯ ಕ್ಷೇತ್ರ ಮತ್ತಷ್ಟು ಬೆಳವಣಿಗೆ ಹೊಂದುತ್ತಿರುವುದನ್ನು ಕಾಣಬಹುದು.

ಹರಟೆ-ಲಘು ಪ್ರಬಂಧ :

ಲಲಿತ ಪ್ರಬಂಧದ ಒಂದು ಒಳಪ್ರಕಾರವಾದ ಹರಟೆ ಕನ್ನಡ ಸಾಹಿತ್ಯದಲ್ಲಿ ಸಾಕಷ್ಟು ಬೆಳೆದಿದೆ. ಇದೂ ಸಹ ಪ್ರಬಂಧಕಾರನ ವ್ಯಕ್ತಿತ್ವವನ್ನು ಕೇಂದ್ರವಾಗಿರಿಸಿಕೊಂಡರೂ ಮಾತುಗಾರಿಕೆ ಇದರ ಮುಖ್ಯ ಉದ್ದೇಶ. ವಸ್ತುವಿಗಿಂತ ಶೈಲಿ ಮುಖ್ಯ. ಬರಹಗಾರನ ಆಸಕ್ತಿ, ಅಭಿರುಚಿ, ಜ್ಞಾನ, ಅನುಭವ, ಆಲೋಚನೆ ಇವೆಲ್ಲವೂ ಕಾರ್ಯ ಪ್ರವೃತ್ತವಾಗಿದ್ದುಕೊಂಡು ಮೈದುಂಬಿ ಬರುವುದೇ ಲಘು ಪ್ರಬಂಧವಾಗಿದೆ. ಹರಟೆ ಎಂಬ ಪ್ರಕಾರಕ್ಕೆ ಪ್ರಾರಂಭ ಉಂಟು ಅಂತ್ಯವಿಲ್ಲ. ಕೇಂದ್ರವಂತು ಮೊದಲೇ ಇಲ್ಲ. ಅನಿಶ್ಚಿತಗತಿಯೇ ಇದರ ಮುಖ್ಯ ಲಕ್ಷಣ. ಒಂದು ನಿರ್ದಿಷ್ಟ ಕೇಂದ್ರವನ್ನು ಇರಿಸಿಕೊಳ್ಳದೆ ತನ್ನ ಚಿಂತನೆಯನ್ನು ಹರಿಯಬಿಡುತ್ತ ಲಘು ಸಾಹಿತ್ಯ ಹಾಸ್ಯಭರಿತವಾಗಿ ಸಾಗುವ ಹರಟೆಯಲ್ಲಿ ಮನೋರಂಜನೆ ಮುಖ್ಯ. ಚರ್ಚೆಗೆ ಆಯ್ದುಕೊಂಡ ವಿಷಯ ಯಾವುದಾದರೂ ಆಗಬಹುದು. ನೀರಸವಾದ ವಿಷಯವನ್ನು ಆಯ್ದುಕೊಂಡರೂ ಮನಮುಟ್ಟುವಂತೆ ಹೇಳುವುದು ಹರಟೆಗಾರನ ವಾಚಾಳಿತನವನ್ನು ಮನವರಿಕೆ ಮಾಡಿಕೊಡುತ್ತದೆ. ಭಾಷೆಯಲ್ಲಿ ವ್ಯಂಗ್ಯ, ಕುಹುಕ, ಅಣಕಗಳ ಮೂಲಕ ಹರಟೆ ಸಾಗುತ್ತದೆ. ಮುಖ್ಯವಾಗಿ ಕುವೆಂಪುರವರ 'ಮಲೆನಾಡಿನ ಚಿತ್ರಗಳು', ಕಾರಂತರ 'ಮೈಲುಗಲ್ಲಿನೊಡನೆ' ಮಾತುಕತೆಗಳು, ಎ.ಎನ್. ಮೂರ್ತಿರಾಯರ, 'ಚಿತ್ರಗಳು ಪತ್ರಗಳು', ರಾ. ಕುಲಕರ್ಣಿಯವರ 'ಗಾಳಿಪಟ', ವಿ.ಸೀ.ಯವರ 'ಬೆಳದಿಂಗಳು', 'ಸ್ವೀಕರಣೆ' ಮುಂತಾದ ಪ್ರಬಂಧಗಳು ಜನರನ್ನು ಆಕರ್ಷಿಸಿರುವುದನ್ನು ಕಾಣಬಹುದು.

ಲಲಿತ ಪ್ರಬಂಧ :

ಲಲಿತ ಪ್ರಬಂಧವು ಗದ್ಯ ಸಾಹಿತ್ಯದಲ್ಲಿ ಒಂದು ವಿಶಿಷ್ಟಪ್ರಕಾರವಾಗಿದ್ದು ಹೆಚ್ಚು ಜನರನ್ನು ತನ್ನೆಡೆಗೆ ಆಕರ್ಷಿಸಿದೆ. ಓದುಗರನ್ನು ಕೇವಲ ನಗೆಗಡಲಿನಲ್ಲಿ ಮೈಮರೆಸದೆ ಚಿಂತನೆಗೆ ಒಡಪಡಿಸುವುದನ್ನು ಕಾಣಬಹುದು. ಒಂದು ವಿಷಯವನ್ನು ಕೇಂದ್ರವಾಗಿರಿಸಿಕೊಂಡು ಅದರ ಸುತ್ತ ನಮ್ಮ ಆಲೋಚನೆಗಳನ್ನು ಹರಿದುಬಿಡುತ್ತಾ ಸಾಗುವುದು ಲಲಿತ ಪ್ರಬಂಧದ ವೈಶಿಷ್ಟ್ಯವಾಗಿದೆ. ಲಲಿತ ಪ್ರಬಂಧವು ಇತರ ಎಲ್ಲಾ ಗದ್ಯ ಪ್ರಕಾರಗಳಿಂದ ಭಿನ್ನವಾಗಿರುವುದು ಅದರ ಹಾಸ್ಯ ಸಂಗತಿಗಳಿಂದ. ಮನಸ್ಸನ್ನು ಸಂತೋಷಗೊಳಿಸುವುದರ ಜೊತೆಗೆ ನಮ್ಮ ಬದುಕಿನ ಜೀವನ ಮೌಲ್ಯಗಳನ್ನು ವಿಮರ್ಶೆಗೆ ಒಳಪಡಿಸಿ ನಮ್ಮ ವ್ಯಕ್ತಿತ್ವವನ್ನು

ಉತ್ತಮಪಡಿಸಿಕೊಳ್ಳುವಂತೆ ಮಾಡುತ್ತವೆ. ಆದ್ದರಿಂದ ಲಲಿತಪ್ರಬಂಧಗಳು ಇತರ ಗದ್ಯಸಾಹಿತ್ಯ ಪ್ರಕಾರಗಳಿಗಿಂತ ಭಿನ್ನವಾಗಿವೆ.

ಲಲಿತ ಪ್ರಬಂಧ ಅನೇಕ ಸಾಹಿತ್ಯ ಪ್ರಕಾರಗಳಂತೆ ಇಂಗ್ಲೀಷ್‌ನಿಂದ ಬಂದದ್ದು. ಇಂಗ್ಲೀಷ್‌ನ ಎಸ್ಸೆ (Essay) ಎಂಬ ಪದಕ್ಕೆ ಸಂವಾದಿಯಾಗಿ ಕನ್ನಡದಲ್ಲಿ ಲಲಿತ ಪ್ರಬಂಧ ಎಂದು ಕರೆಯುತ್ತೇವೆ. ಎಸ್ಸೆ ಎಂಬ ಪದಕ್ಕೆ ಪ್ರಬಂಧ, ಲಘುಪ್ರಬಂಧ, ಶಿಥಿಲ ಬಂಧ, ಭಾವಪ್ರಬಂಧ, ನಿಬಂಧ, ಗದ್ಯಚಿತ್ರ, ಭಾವನಾಚಿತ್ರ ಪ್ರಸಂಗ ಹರಟೆ ಮೊದಲಾದ ಶಬ್ದಗಳಿವೆ. ಮುಖ್ಯವಾಗಿ ಪ್ರಬಂಧಕಾರನ ಮನಸ್ಥಿತಿಯ ಪ್ರತಿಬಿಂಬದಂತಿರುವ ಇದನ್ನು ಲಲಿತ ಪ್ರಬಂಧ ಎಂದು ಕರೆಯಬಹುದು.

ಮೊದಲು 1603ರಲ್ಲಿ ಮಾನ್‌ತೇನ್‌ನ ಫ್ರೆಂಚ್ ಪ್ರಬಂಧಗಳನ್ನು ಫ್ಲೋರಿಯೋ ಎಂಬಾತ ಇಂಗ್ಲೀಷ್‌ಗೆ ಅನುವಾದಿಸಿ ಪ್ರಕಟಿಸಿದಾಗ ಈ ಬಗೆಯ ವಿಶಿಷ್ಟ ಪ್ರಕಾರ ಆರಂಭವಾಯಿತು. ಮಾನ್‌ತೇನ್‌ಸನನ್ನು ಅನುಸರಿಸಿ ಮುಂದೆ ಹಲವಾರು ಪ್ರಬಂಧಗಳನ್ನು ಬರೆದ ಫ್ರಾನ್ಸಿಸ ಬೇಕನನ್ನು ಈ ಕಲಾ ಪ್ರಕಾರದ ಜನಕ ಎನ್ನಬಹುದು. 1950ರವರೆಗೆ ನಿಧಾನವಾಗಿ ಸಾಗಿ ನಂತರ ಜಾನ್‌ಸನ್, ಗೋಲ್ಡ್‌ಸ್ಮಿತ್, ಹ್ಯಾಸಿಲಿಟ್, ಛಾರಲ್ಸ್‌ಲ್ಯಾಮ್, ಕೋಲ್‌ರಿಚ್, ಅಬ್ರಹಾಂಕೌಲಿ, ಮುಂತಾದವರಿಂದ ಈ ಲಲಿತ ಪ್ರಬಂಧ ಒಂದು ನೆಲೆಯನ್ನು ಕಂಡುಕೊಂಡು ಬೆಳವಣಿಗೆ ಹೊಂದಿತು. ಮುಂದೆ ಇದು ಕನ್ನಡಕ್ಕೆ ಪರಿಚಯವಾಗಿ ಕನ್ನಡದಲ್ಲೂ ಲಲಿತ ಪ್ರಬಂಧ ಬೆಳೆಯತೊಡಗಿತು.

ವ್ಯಾಖ್ಯಾನ :

ಜಾನ್ಸನ್ :

ಮನಸ್ಸಿನ ಸ್ವಚ್ಛಂದಲಹರಿ ಕ್ರಮರಹಿತವಾದ ಮತ್ತು ಚಿಂತನೆಗೊಳಗಾದ ಸಣ್ಣಕೃತಿ, ನಿಯತವಾದ ಕ್ರಮಬದ್ಧ ರಚನೆಯಲ್ಲ.[೧]

ಮರೆಯು :

ಯಾವುದೇ ಒಂದು ವಿಷಯವನ್ನು ಅಥವಾ ವಿಷಯ ಶಾಖೆಯನ್ನು ಕುರಿತ, ಮಿತವಾದ ರಚನೆ ಅದು ಮುಕ್ತಾಯದ ಅಭಾವವನ್ನು ಸೂಚಿಸುತ್ತದೆ. ಆದರೆ ವ್ಯಾಪ್ತಿಯಲ್ಲಿ ಮಿತಿ ಇದ್ದರೂ ವಿವರ ಪೂರ್ಣವಾದ ಶೈಲಿಯುಳ್ಳ ರಚನೆ ಎಂಬ ವ್ಯಾಖ್ಯಾನವು ಹೊಂದಿಕೊಳ್ಳಬಹುದು.[೨]

ತಿ.ನಂ.ಶ್ರೀ :

'ಮಂದ ಶ್ರುತಿಯ ಭಾವಗೀತೆಗಳು ಎಂದಿದ್ದಾರೆ'.[೩]

೧-೨. ಸಿ.ಚಿ.ನಿಂಗಣ್ಣ-ಕನ್ನಡ ಸಂಸ್ಕೃತಿ ಕೋಶ ಪು-೯೧, ೩ ಅ.ರಾ.ಮಿತ್ರ-ಮಿತ್ರಾವಲೋಕನ, ಪು-೧೨೪

ಅ.ರಾ.ಮಿತ್ರ :

ಲಲಿತ ಪ್ರಬಂಧವು ಸಂಕ್ಷೇಪಾಪೇಕ್ಷೆಯಾದ. ಕಲಾತ್ಮಕವಲ್ಲದ ಗದ್ಯಖಂಡ. ಸಂಪೂರ್ಣ ಅಭಾವವನ್ನು ಹೊಂದಿರುವ ರಚನೆಯನ್ನು ಲಲಿತ ಪ್ರಬಂಧ ಎನ್ನಬಹುದು.[೧]

ಗೊರೂರು ರಾಮಸ್ವಾಮಿ ಐಯ್ಯಂಗಾರ್ :

'ಲೇಖಕನು ವಾಚಕನೊಂದಿಗೆ ನಿಸ್ಸಂಕೋಚವಾಗಿ ಆತ್ಮೀಯಭಾವದಿಂದ ನಡೆಸುವ ಬರಹ ರೂಪದ ಸಂಭಾಷಣೆ ಎಂದಿದ್ದಾರೆ'.[೨]

ಎ.ಎನ್. ಮೂರ್ತಿರಾವ್ :

'ಪ್ರಬಂಧ ಕೋಲ್ಮಿಂಚಲ್ಲ ಮಿನುಗು ಮಿಂಚು'.[೩]

ವಿ.ಸೀ. :

'ಪ್ರಬಂಧ ರಚನೆ ಮನಸ್ಸಿನ ಒಲವು, ಓಟ ಆಕಾಂಕ್ಷೆಗಳನ್ನು ನೇಯುವ ಒಂದು ಕ್ರಮ'.[೪]

ಲಲಿತ ಪ್ರಬಂಧದ ಲಕ್ಷಣಗಳು :

- ವಿಷಯ ನಿರೂಪಣೆಯಲ್ಲಿ ಸ್ಪಷ್ಟತೆ.
- ಕೃತಕತೆ ಇಲ್ಲದ ಚಮತ್ಕಾರ.
- ಸರಳತೆ ಸಜ್ಜನಿಕೆಯನ್ನು ಒಳಗೊಂಡಿರುತ್ತದೆ.
- ಮರ್ಯಾದೆ ಮೀರಿದ ಹಾಸ್ಯವಿರುತ್ತದೆ.
- ವಸ್ತುವಿಗಿಂತ ನಿರೂಪಣೆಗೆ ಹೆಚ್ಚು ಪ್ರಾಮುಖ್ಯ ಕೊಡಲಾಗುತ್ತದೆ.
- ಏಕಕಾಲದಲ್ಲಿ ಜ್ಞಾನ ಮತ್ತು ಸಂತೋಷವನ್ನು ನೀಡುವಂತಿರುತ್ತದೆ.
- ಪುಟಗಳ ಮಿತಿಯನ್ನು ಒಳಗೊಂಡಿದ್ದು ಎರಡರಿಂದ ಇಪ್ಪತ್ತು ಇಪ್ಪತ್ತೈದು ಪುಟ ಮೀರದಂತಿದ್ದು ಸುಂದರವಾದ ಮುಕ್ತಾಯ ಹೊಂದಿರುತ್ತದೆ.
- ವಿಡಂಬನೆ, ವಕ್ರೋಕ್ತಿಯ ಮೂಲಕ ಲೇಖಕ ತನ್ನ ಅನಿಸಿಕೆಗಳನ್ನು ಹೊರಹಾಕುತ್ತಾನೆ.
- ಗಂಭೀರವಾದ ವಿಷಯ ಇಲ್ಲಿ ಮುಖ್ಯವಾಗಿರುವುದಿಲ್ಲ.

ಹೀಗೆ ಲಲಿತ ಪ್ರಬಂಧವು ತನ್ನದೆ ಆದ ಲಕ್ಷಣವನ್ನು ಹೊಂದಿದ್ದು ಕನ್ನಡದಲ್ಲಿ ಬೆಳವಣಿಗೆ ಹೊಂದ ತೊಡಗಿತು.

೧. ಅ.ರಾ. ಮಿತ್ರ-ಮಿತ್ರಾವಲೋಕನ – ಪು-೨೩೪.
೨-೩-೪. ಸಂ:ಶ್ರೀನಿವಾಸನ್ ಮತ್ತು ಅಬ್ದುಲ್ ಬಶೀರ್-ಬಂಧ ಪ್ರಬಂಧ, ಪ್ರಸ್ತಾವನೆ-ಪು. ೩

ಕನ್ನಡದಲ್ಲಿ ಲಲಿತ ಪ್ರಬಂಧ ಮೊದಲು ಅನುವಾದದ ಮೂಲಕ ಆರಂಭವಾಯಿತು. ಬಂಗಾಳಿ ಬಂಕಿಮ ಚಂದ್ರರ ಲೋಕರಹಸ್ಯವನ್ನು ಬಿ.ವೆಂಕಟಾಚಾರ್ಯರು ಅನುವಾದ ಮಾಡಿದ್ದು ಇದು ಕನ್ನಡದ ಮೊದಲ ಲಲಿತಪ್ರಬಂಧವಾಗಿದೆ. ಮುದ್ದಣ ಮತ್ತು ಪಂಜೆಯವರ ಸಾಹಿತ್ಯದಲ್ಲಿ ಪ್ರಬಂಧದ ಲಕ್ಷಣವನ್ನು ಕಾಣಬಹುದಾದರೂ ಇದು ಯಾರಿಂದ ಆರಂಭವಾಯಿತು ಎಂದು ಹೇಳುವುದು ಕಷ್ಟ. ವಿದ್ವಾಂಸರಲ್ಲೇ ಭಿನ್ನಾಭಿಪ್ರಾಯಗಳಿವೆ. ಪಂಜೆಯವರಿಂದ ಆರಂಭವಾಯಿತು ಎಂದು ಕೆಲವರು ಹೇಳಿದರೆ ಮತ್ತೆ ಕೆಲವರು ಹೊನ್ನಾಪುರ 'ಮಠದ ವೆಂಕಟೇಶಯ್ಯ', 'ಧಾರವಾಡ ಗೆಳೆಯರ ಬಳಗ' ಮಿರ್ಚಿ ಕ್ಲಬ್ ಎನ್ನುತ್ತಾರೆ.

ಪಂಜೆಯವರು ಬರೆದದ್ದು ಸ್ವಾತಂತ್ರ ಪೂರ್ವದಲ್ಲಿ ಉದಾ: 'ವೈದ್ಯನ ಒಗ್ಗರಣೆ', 'ನನ್ನ ಚಿಕ್ಕತಾಯಿ', 'ಚಿಕ್ಕತಂದೆಯವರ ಉಯಿಲು', 'ಹರಟೆಮಲ್ಲ' ಇವು ಪ್ರಬಂಧದ ಲಕ್ಷಣವನ್ನು ಒಳಗೊಂಡಿವೆ. ಗೆಳೆಯರ ಗುಂಪಿನ ಹರಟೆಗಳು, ಎಂ.ಜಿ. ವೆಂಕಟೇಶಯ್ಯನವರ ಪುಲ್ಲಯ್ಯ ಪ್ರಬಂಧ, ಪು.ತಿ.ನ.ರವರ ರಾಮಚಾರಿಯ ನೆನಪುಗಳು. ಇವು ಪ್ರಬಂಧ ಸಾಹಿತ್ಯದಲ್ಲಿ ಮೊದಲು ಬಂದವುಗಳೆಂದು ಎಚ್ಚಸ್ಕೆ ಗುರುತಿಸಿದ್ದಾರೆ. ಇವು ಮೊದಲು ಅಲ್ಲೊಂದು ಇಲ್ಲೊಂದು ಬಿಡಿ ಬಿಡಿಯಾಗಿ ಕಾಣಿಸಿಕೊಂಡವು. ಎಂ.ವಿ.ಸೀತಾರಾಮಯ್ಯನವರು 1926ರ ವೇಳೆಯಲ್ಲಿ ದೇಶೀಯಾ ವಿದ್ಯಾಶಾಲಾ ಪತ್ರಿಕೆಯಲ್ಲಿ 'ಮೈಸೂರು ಕಾಯಿದೆಗಳನ್ನು'ಬರೆದರು. 1932ರ ಅನಂತರ ಪ್ರಬಂಧ ಪ್ರಕಾರಕ್ಕೆ ಹೊಸದಿಕ್ಕು ದೊರೆಯಿತು. ಎಂ.ಎಸ್.ಪುಟ್ಟಣ್ಣ, ಮಾಸ್ತಿ, ಕಾರಂತ, ಬೇಂದ್ರೆ, ಶಂಭಾಜೋಷಿ, ಗೊರೂರು, ಬೀಚಿ, ರಾವ್ ಬಹದ್ದೂರ್, ರಾಕು.. ಹೀಗೆ ಮೊದಲನೆ ತಲೆಮಾರಿನಿಂದ ಒಂದು ರೂಪು ಪಡೆದುಕೊಂಡು ಲಲಿತ ಪ್ರಬಂಧ ಮುಂದೆ ವಿಶಿಷ್ಟ ಪ್ರಕಾರವಾಗಿ ಬೆಳೆಯಿತು.

ಲಲಿತ ಪ್ರಬಂಧಗಳಲ್ಲಿ ಬರಹಗಾರನ ವ್ಯಕ್ತಿತ್ವ ಅನಾವರಣಗೊಂಡಿರುತ್ತದೆ. ಅವನ ಅನಿಸಿಕೆ, ಆಲೋಚನೆ, ಚಿಂತನೆ, ಅಭಿಪ್ರಾಯಗಳು ಪ್ರಬಂಧಗಳಲ್ಲಿ ಮೈದಳೆದಿರುತ್ತವೆ. ಪ್ರಬಂಧಕಾರ ವಿವರಣಾಕಾರನಲ್ಲ ಆತ ತತ್ವ ಚಿಂತಕ ತಾನು ಹೇಳ ಹೊರಟಿರುವ ವಿಷಯವನ್ನು ಆಯ್ಕೆ ಮಾಡಿಕೊಂಡ ವಸ್ತುವಿನ ಮೂಲಕ ವಿಡಂಬನೆ ಹಾಗೂ ಹಾಸ್ಯದ ಪ್ರಜ್ಞೆಯಲ್ಲಿ ಹೇಳುತ್ತಿರುತ್ತಾನೆ. ಇದು ಕೆಲವು ಕಡೆ ಗೋಚರವಾಗಬಹುದು ಅಥವಾ ಇಲ್ಲದಿರಬಹುದು. ಆದರೆ ವಿಷಯ ಪ್ರಸ್ತಾಪನೆಯಲ್ಲಿ ಒಂದು ತತ್ವವಿರುತ್ತದೆ. ಚಿಂತನೆ, ಆಶಯಗಳು ಪ್ರಬಂಧದ ಮೂಲಕ ಮೂರ್ತರೂಪು ಪಡೆದಿವೆ.

ಓದುಗರೊಂದಿಗೆ ಸಂಭಾಷಣೆ ನಡೆಸುತ್ತಾ ಹರಟುತ್ತಾ ವ್ಯಂಗ್ಯ, ಕುಹಕು, ಕಿಟಕಿಗಳ ಮೂಲಕ ಓದುಗರನ್ನು ಆಕರ್ಷಿಸುತ್ತಾ ಪ್ರಬಂಧ ಸಾಗುತ್ತದೆ. ಇಲ್ಲಿ ಬಳಸುವ ಭಾಷೆ ಸಂಕ್ಷಿಪ್ತವಾಗಿದ್ದು ಕಿರಿದರಲ್ಲಿ ಹಿರಿದರ್ಥವ ಹೇಳುವಂತಿರುತ್ತದೆ. ಏಕೆಂದರೆ ಪ್ರಬಂಧಕಾರ ವಿವರಣಾಕಾರನಾಗಿರುವುದಿಲ್ಲ. ಹೇಳಬೇಕಾದ ವಿಷಯವನ್ನು ಸ್ಫುಟವಾಗಿ ಹೇಳುವವನಾಗಿರುತ್ತಾನೆ. ವಸ್ತುವಿನ ವಿಷಯ ಬೆಳೆಸುವಾಗ ಗಾದೆ ಮಾತುಗಳು, ಪುರಾಣ

ಘಟನೆಗಳು, ವ್ಯಕ್ತಿಗಳು, ವಚನ, ಕೀರ್ತನೆ, ಜಾನಪದ ಸೂಕ್ತಿಗಳನ್ನು ಸಂದರ್ಭಕ್ಕನುಸಾರವಾಗಿ ಉಲ್ಲೇಖಿಸುತ್ತಾ ಭಾಷೆಯ ಮೇಲೆ ಹಿಡಿತ ಸಾಧಿಸಿ ಮುಂದುವರೆಯುತ್ತಾನೆ.

ಪ್ರಬಂಧದ ವಸ್ತು ಇಂತದ್ದೇ ಆಗಬೇಕೆಂದೇನಿಲ್ಲ. ಜಡ, ಭೌತ ವಸ್ತುವಿನಿಂದ ಹಿಡಿದು ತನ್ನ ಸುತ್ತಮುತ್ತಲಿನ ಪರಿಸರದ ಸಾಮಾನ್ಯ ಸಂಗತಿಗಳು ಯಾವುದಾದರೂ ಆಗಬಹುದು. ಒಟ್ಟಿನಲ್ಲಿ ಆಯ್ಕೆ ಮಾಡಿಕೊಂಡ ವಸ್ತುವಿನ ಸುತ್ತ ಘಟನೆಗಳನ್ನು ಹೆಣೆಯುತ್ತಾ ಸನ್ನಿವೇಶಗಳನ್ನು ನಿರ್ಮಿಸುತ್ತಾ ವಿಷಯವನ್ನು ಬೆಳೆಸುತ್ತಾ ಸಾಗುತ್ತಾನೆ. ವಸ್ತುವಿಗೆ ಆರಂಭವಿರುತ್ತೇ ಹೊರತು ಪೂರ್ಣತೆ ಇರುವುದಿಲ್ಲ. ಅಂತ್ಯವಂತು ಮೊದಲೇ ಇರುವುದಿಲ್ಲ. ಓದುಗರು ಆತ್ಮೀಯತೆಯಿಂದ ತನ್ಮಯಭಾವದಿಂದ ತನ್ನನ್ನು ತೊಡಗಿಸಿಕೊಳ್ಳುವಂತೆ ಲಲಿತ ಪ್ರಬಂಧಗಳು ಸಾಗುತ್ತವೆ. ಹೀಗೆ ಪ್ರಬಂಧಕಾರನ ಸೂಕ್ಷ್ಮ ಆಲೋಚನೆಗಳನ್ನು ಸಮಾಜ ಅರ್ಥಮಾಡಿಕೊಂಡು ಬದುಕಿನ ಮೌಲ್ಯಗಳನ್ನು ಅಳವಡಿಸಿಕೊಂಡು ಉತ್ತಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಲಲಿತ ಪ್ರಬಂಧಗಳು ಸಹೃದಯರಿಗೆ ತೆರೆದ ಕಿಟಕಿಗಳಾಗಿವೆ.

ಹೀಗೆ ಕನ್ನಡ ಲಲಿತ ಪ್ರಬಂಧ ರಚನೆಯಲ್ಲಿ ಕೆಲವರು ತಮ್ಮನ್ನು ತೊಡಗಿಸಿಕೊಂಡು ಹಲವು ಪ್ರಬಂಧಗಳನ್ನು ರಚಿಸಿದ್ದಾರೆ ಅವರುಗಳಲ್ಲಿ ಪ್ರಮುಖರೆಂದರೆ ಎ.ಎನ್. ಮೂರ್ತಿರಾಯರು ಒಬ್ಬರು. 'ಹಗಲುಗನಸುಗಳು', 'ಅಲೆಯುವ ಮನ', 'ಮಿನುಗು', 'ಮಿಂಚುಗಳು' ಇವು ಪ್ರಮುಖ ಲಲಿತ ಪ್ರಬಂಧಗಳು. ಆದ್ದರಿಂದ ಇವರನ್ನು ಲಲಿತ ಪ್ರಬಂಧಗಳಿಗೆ ಆಚಾರ್ಯ ಎನ್ನುತ್ತಾರೆ. ಇವರ ಬರವಣಿಗೆಯಲ್ಲಿ ಕಂಡುಬರುವ ಹಾಸ್ಯ, ಮನೋವ್ಯಾಪಾರದ ಸೂಕ್ಷ್ಮ ವಿಶ್ಲೇಷಣೆ, ಗಂಭೀರ ವಿಷಯವನ್ನು ತೆಗೆದುಕೊಂಡರೂ ಸುಲಭ ಶೈಲಿಯಲ್ಲಿ ನಡೆಸುವ ಸಂಭಾಷಣೆ, ವಿಷಯದ ಬೆಳವಣಿಗೆ, ಮುಂತಾದವು ಇವರ ಪ್ರಬಂಧಗಳಿಗೆ ವೈಶಿಷ್ಟ್ಯ ತಂದುಕೊಟ್ಟಿವೆ.

ಹೀಗೆ ಹಲವು ಸಾಹಿತಿಗಳು ಲಲಿತ ಪ್ರಬಂಧ ರಚನೆಯಲ್ಲಿ ತೊಡಗಿಸಿಕೊಂಡವರಲ್ಲಿ ಪ್ರಮುಖರೆಂದರೆ.. ವಿ.ಸೀ. ಬೆಳದಿಂಗಳು ಪ್ರಬಂಧಗಳು, ಪು.ತಿ.ನ.ರವರ 'ಈಚಲಮರದ ಕೆಳಗೆ', 'ದೇನುಕ ಪುರಾಣ', ತಿ.ನಂ.ಶ್ರೀರವರ 'ನೆಗಡಿ', 'ನಂಟರು', 'ತಿಗಣೆ', ಬೇಂದ್ರೆ 'ಸಾವಿನಕೂಡ ಸರಸ', ಗೊರೂರು 'ನಮ್ಮ ಎಮ್ಮೆಗೆ ಮಾತು ತಿಳಿಯುವುದೆ' ಚಮ್ಮಾರ ವೀರಭದ್ರಾಚಾರಿ ಜೋಯಿಸನಾದುದು, ಲಾಂಗೋಲಾಚಾರ್, ರಾಕು, ನಾ.ಕಸ್ತೂರಿ, ಶಿವರಾಮಕಾರಂತ, ಕುವೆಂಪು, ಬೀಚಿ, ರಾವ್‌ಬಹದ್ದೂರ್, ಡಿ.ವಿ.ಜಿ, ಮಾಸ್ತಿ, ಎಂ.ಎಸ್. ಪುಟ್ಟಣ್ಣ, ಕೃಷ್ಣಮೂರ್ತಿ ಆಲೂರು, ಜಿ.ಪಿ.ರಾಜರತ್ನಂ, ಅ.ರಾ.ಮಿತ್ರ, ಚಂದ್ರಶೇಖರ ಆಲೂರು.. ಹೀಗೆ ಹಲವು ಜನ ತಮ್ಮನ್ನು ಲಲಿತ ಪ್ರಬಂಧ ರಚನೆಯಲ್ಲಿ ತೊಡಗಿಸಿಕೊಂಡು ಸಾಹಿತ್ಯ ಕ್ಷೇತ್ರಕ್ಕೆ ವಿಶೇಷ ಕೊಡುಗೆ ನೀಡಿದ್ದಾರೆ.

ಅಧ್ಯಾಯ – 3

ಅ.ರಾ.ಮಿತ್ರರವರ ಜೀವನ ಮತ್ತು ಬರಹ

ಅ.ರಾ.ಮಿತ್ರರವರ ಬಾಲ್ಯ ಜೀವನ ಮತ್ತು ವಿದ್ಯಾಭ್ಯಾಸ :

ಕನ್ನಡ ಲಲಿತ ಪ್ರಬಂಧ ರನಚೆಯಲ್ಲಿ ವಿಶಿಷ್ಟ ಸ್ಥಾನಗಳಿಸಿರುವ ಅ.ರಾ. ಮಿತ್ರರವರ ಪೂರ್ವಿಕರ ಊರು ಅಕ್ಕಿ ಹೆಬ್ಬಾಳು. ಹುಟ್ಟಿದ್ದು ಹಾಸನ ಜಿಲ್ಲೆಯ ಬೇಲೂರಿನಲ್ಲಿ ತಮ್ಮ ಪ್ರಾಥಮಿಕ ಶಿಕ್ಷಣವನ್ನು ಅರಸೀಕರೆಯಲ್ಲಿ ಮುಗಿಸಿ ಮುಂದಿನ ವಿದ್ಯಾಭ್ಯಾಸವನ್ನು ಕೋಲಾರ ಹಾಗೂ ಮೈಸೂರಿನಲ್ಲಿ ಮಾಡಿ ಮಡಿಕೇರಿ, ಬೆಂಗಳೂರಿನಲ್ಲಿ ಅಧ್ಯಾಪಕರಾಗಿ ಸೇವೆ ಸಲ್ಲಿಸಿದರು. ಮಂಡ್ಯ ಜಿಲ್ಲೆಯ ಅಕ್ಕಿಹೆಬ್ಬಾಳಿನ ತಿಮ್ಮಪ್ಪಯ್ಯನವರ ಮಗನಾದ ರಾಮಣ್ಣ ಹಾಗೂ ಜಯಲಕ್ಷ್ಮಿಯವರ ಮೂರನೇ ಮಗನಾಗಿ 25 ಫೆಬ್ರವರಿ 1935ರಲ್ಲಿ ಜನಿಸಿದರು. ಮೊದಲನೆಯವರು ಸುಬ್ಬಕೃಷ್ಣ. ಪೋಲೀಸ್ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರು. ಕೇಶವ ಅವರು ಆಹಾರ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರು. ತಮ್ಮಂದಿರು ಆನಂದ ಮತ್ತು ಸೋಮಸುಂದರ, ಸಹೋದರಿಯರು ಸರೋಜ. ಇಂದಿರಾ ಮತ್ತು ಕಮಲ ಹೀಗೆ ತುಂಬು ಕುಟುಂಬದಲ್ಲಿ ಬೆಳೆದರು. ರಾಮಣ್ಣನವರ 4 ಗಂಡು ಮಕ್ಕಳಲ್ಲಿ ಸುಬ್ಬಕೃಷ್ಣ ಹಾಗೂ ಸರೋಜ ಮೊದಲನೆಯ ಹೆಂಡತಿಯ ಮಕ್ಕಳು. ಸಾಹಿತ್ಯ ಪರಿಷತ್ತಿನಲ್ಲಿ ಬೆರಳಚ್ಚುಗಾರರಾಗಿ ಕೆಲಸ ನಿರ್ವಹಿಸುತ್ತಿದ್ದ ಆನಂದ ಅವರು ಕನ್ನಡ ಪ್ರಭ ಪತ್ರಿಕೆಯಲ್ಲಿ ಕ್ರೀಡಾ ವರದಿಗಾರರಾಗಿ ಸೇವೆ ಸಲ್ಲಿಸುತ್ತಿದ್ದರು. ಮಿತ್ರರವರ ಅಕ್ಕ ಸರೋಜ ಅವರ ಪತಿ ಬಿ.ಎಸ್.ತಮ್ಮಯ್ಯ ತಾಯಿನಾಡು ಪತ್ರಿಕೆಯಲ್ಲಿದ್ದರು. ತಂಗಿ ಇಂದಿರಾರವರ ಪತಿ ರೈತರಾಗಿದ್ದರು. ಕಮಲ ಅವರ ಗಂಡ ಎಂ.ವಿ. ಸುಬ್ಬಣ್ಣ ಪ್ರಸಿದ್ಧ ನಾಟಕಕಾರರಾಗಿದ್ದರು.

ಓದಿನಲ್ಲಿ ಅಷ್ಟೇನೂ ಆಸಕ್ತಿ ಇಲ್ಲದ ಮಿತ್ರ ಎಸ್.ಎಸ್.ಎಲ್.ಸಿ. ಯಲ್ಲಿ ಫೇಲಾಗಿದ್ದರು. ಕೆಲವು ಕಾಲ ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಿದರು. ಆದರೆ ತಂದೆಗೆ ಇದು ಇಷ್ಟವಿರಲಿಲ್ಲ ತನ್ನ ಕುಟುಂಬದ ನಿರ್ವಹಣೆ ಕಷ್ಟಕರವಾಗಿದ್ದು ಗುಮಾಸ್ತರಾಗಿದ್ದ ರಾಮಣ್ಣನವರಿಗೆ ಬರುತ್ತಿದ್ದ ಸಂಬಳ ಸಾಕಾಗುತ್ತಿರಲಿಲ್ಲ. ಆದರೂ ಮಿತ್ರ ಅವರು ಓದುವುದನ್ನು ಬಿಟ್ಟು ಬಟ್ಟೆ ಅಂಗಡಿಗೆ ಕೆಲಸಕ್ಕೆ ಸೇರಿದ್ದು ಇಷ್ಟವಾಗಲಿಲ್ಲ. ಬಟ್ಟೆ ಅಂಗಡಿಯಿಂದ ಬಂದ ಹಣ ತಂದೆಯವರಿಗೆ ಬೇಕಾಗಲಿಲ್ಲ. ಮತ್ತೆ ವಿದ್ಯಾಭ್ಯಾಸವನ್ನು ಮುಂದುವರಿಸಲು ಮಿತ್ರರವರಿಗೆ ಒತ್ತಾಯ ಮಾಡಿದರು. ಆಗ ಮುಳುಬಾಗಿಲಿಗೆ ವರ್ಗವಾಗಿ ಬಂದ 'ಅಮ್ಲದಾರ್ ರಂಗಪ್ಪ' ಮಿತ್ರರ ಮನೆಗೆ ಊಟಕ್ಕೆ ಬರುತ್ತಿದ್ದರಂತೆ ಮಿತ್ರರನ್ನು ನೋಡಿ 'ನೀನು ಬುದ್ಧಿವಂತನಂತೆ ಕಾಣುತ್ತೀಯ ಕೆಲಸ ಬಿಟ್ಟು ಓದು ಮುಂದುವರಿಸು ನಿನಗೆ ಒಳ್ಳೆ ಭವಿಷ್ಯ ಇದೆ'. ಬೇಕಾದರೆ ನಾನು ಪಾಠ ಹೇಳಿಕೊಡುತ್ತೇನೆ ಎಂದರಂತೆ. ಅದರ ಪ್ರತಿಫಲವಾಗಿ 73% ತೆಗೆದುಕೊಂಡು ಉತ್ತೀರ್ಣರಾದರು ಈ ಘಟನೆ ಮಿತ್ರರವರ ಜೀವನಕ್ಕೆ ಹೊಸ ತಿರುವು ನೀಡಿತು.

ಮುಂದೆ ಕೋಲಾರದಲ್ಲಿ ಬ್ರಾಹ್ಮಣರ ಮನೆಯಲ್ಲಿ ವಾರಾನ್ನ ಮಾಡಿಕೊಂಡು ಇಂಟರ್ ಮೀಡಿಯಾ ಓದಿದರು. ಅಲ್ಲಿ ಗುರುಗಳಾಗಿದ್ದ ಪ್ರಭುಶಂಕರ ಚಿದಾನಂದ ಮೂರ್ತಿ. ಬಿ.ಎನ್.ಶಾಸ್ತ್ರಿ, ಅಂಬಳೆ ವೆಂಕಟರಾಂ ಮುಂತಾದ ಮಹಾನ್ ವ್ಯಕ್ತಿಗಳ ಪ್ರಭಾವದಿಂದ ಕನ್ನಡದಲ್ಲಿ ಹೆಚ್ಚು ಅಂಕ ಪಡೆದು ಸ್ಕಾಲರ್‌ಶಿಪ್‌ಗಳಿಸಿದರು. ಗಣಿತದಲ್ಲಿ ಒಳ್ಳೆ ಅಂಕ ಗಳಿಸಿದ್ದರೂ ವಿಜ್ಞಾನ ತೆಗೆದುಕೊಳ್ಳದೆ ಕನ್ನಡವನ್ನು ಆಯ್ಕೆ ಮಾಡಿಕೊಂಡರು. ಹಳೆಗನ್ನಡ ಕಾವ್ಯದ ಬಗ್ಗೆ ಹೆಚ್ಚು ಆಸಕ್ತಿಯಿದ್ದ ಮಿತ್ರರು ನಾಗವರ್ಮನ 'ಕರ್ನಾಟಕ ಕಾದಂಬರಿ' ಮತ್ತು ಹರಿಹರನ 'ಗಿರಿಜ ಕಲ್ಯಾಣ' ಕಾವ್ಯಗಳನ್ನು ಕಂಠಪಾಠ ಮಾಡಿ ಪೂರ್ತಿ ಹೇಳುತ್ತಿದ್ದರಂತೆ. ಕೋಲಾರದಲ್ಲಿ ಪ್ರಭಾವಬೀರಿದ ಮತ್ತೊಬ್ಬ ಅಧ್ಯಾಪಕರೆಂದರೆ ಬಿ.ಎನ್.ವೆಲ್ಲಿ.

ಮೂರು ವರ್ಷದ ಬಿ.ಎ. ಆನರ್ಸ್ ಹಾಗೂ ಒಂದು ವರ್ಷದ ಎಂ.ಎ. ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಓದಿದರು. ಅಲ್ಲಿ ಒಳ್ಳೆಯ ಗುರುಗಳು ಹಾಗೂ ಸಹಪಾಠಿಗಳು ದೊರೆತರು. ಅಧ್ಯಾಪಕರಾಗಿ ಕುವೆಂಪು, ಡಿ.ಎಲ್.ಎನ್., ಎಸ್.ವಿ. ಪರಮೇಶ್ವರಭಟ್ಟ, ಜಿ.ವರದರಾಜ್‌ರಾವ್, ಶ್ರೀಕಂಠಶಾಸ್ತ್ರಿ, ತ.ಸು.ಶಾಮರಾಯರು, ಸಿ.ಡಿ. ನರಸಿಂಹಯ್ಯ, ಕೆ.ವೆಂಕಟರಾಮಪ್ಪ, ಸಿ.ಡಿ.ಗೋವಿಂದರಾಯರು, ಅ.ರಾ.ಮಿತ್ರರವರ ನೆಚ್ಚಿನ ಸಹಪಾಠಿಗಳೆಂದರೆ ಹಂಪನಾ, ಕಮಲ ಹಂಪನಾ, ಎಂ.ಹೆಚ್.ಕೃಷ್ಣಯ್ಯ, ಎನ್.ಎಸ್. ಲಕ್ಷ್ಮೀನಾರಾಯಣಭಟ್ಟ, ಸಣ್ಣಗುಂಡಯ್ಯ ಹಾಗೂ ಪಾ.ಶ. ಶ್ರೀನಿವಾಸ್‌ರು. ರಾಮಣ್ಣನವರು ನಿವೃತ್ತರಾದ ಮೇಲೆ ಮುಳುಬಾಗಿಲಿನಿಂದ ಮೈಸೂರಿಗೆ ಬಂದು ನೆಲೆಸಲು ತೀರ್ಮಾನಿಸಿದರು. ಮಿತ್ರ ಅವರು ಮೈಸೂರಿನಲ್ಲಿ ಓದುತ್ತಿದ್ದರಿಂದ ಮೈಸೂರಿಗೆ ಬಂದು ನೆಲೆಸಲು ತೀರ್ಮಾನಿಸಿದರು. ಮೈಸೂರಿನಲ್ಲಿ ನೆಲೆಯೂರಲು ತೊಂದರೆಗಳು ಎದುರಾದವು ಉಳಿದುಕೊಳ್ಳುವ ಸನ್ನಿವೇಶ ಎದುರಾದಾಗ ಮೈಸೂರಿನ ಕೆಲವು ಧರ್ಮಛತ್ರಗಳ ಆಶ್ರಯ ಪಡೆಯಬೇಕಾಯಿತು. ಆದರೆ ಅಲ್ಲಿ ಹೆಚ್ಚು ದಿನ ಉಳಿಯಲು ಅವಕಾಶವಿಲ್ಲದಿದ್ದರಿಂದ ಸೀತೆವಿಲಾಸ ಛತ್ರದಲ್ಲಿ ನಾಲ್ಕುದಿನ ಕಳೆದ ಮೇಲೆ ಉಳಿಯಲು ಅವಕಾಶವಿರಲಿಲ್ಲ. ಮೇಲ್ವಿಚಾರಕರ ಉದಾರತೆಯಿಂದ ಒಂದು ತಿಂಗಳು ಕಳೆದ ಮೇಲೆ ಬೇರೊಂದು ನಂಜರಾಜ್ ಬಹದ್ದೂರ್ ಛತ್ರಕ್ಕೆ ಹೋಗುವ ಆಲೋಚನೆಯಲ್ಲಿದ್ದರು ಅಷ್ಟರಲ್ಲಿ ಚಾಮರಾಜಪುರಂನ ಬಜ್ಜಣ್ಣ ರಸ್ತೆಯಲ್ಲಿ ಬಾಡಿಗೆಗೆ ಒಂದು ಮನೆ ದೊರೆಯಿತು.

ಎಂ.ಎ. ಪರೀಕ್ಷೆ ಕಟ್ಟಬೇಕಾದಾಗ ಹಣದ ಕೊರತೆ ಎದುರಾಯಿತು. 100 ರೂ. ಹೊಂದಿಸಲು ಬಹಳ ಕಷ್ಟದ ಸಮಯದಲ್ಲಿದ್ದಾಗ ಜಿ.ಎಸ್. ಶಿವರುದ್ರಪ್ಪ, ಪ್ರಭುಶಂಕರ್, ತ.ಸು. ರಾಮರಾಯ ಮತ್ತಿತರು ಸೇರಿ 30 ರೂ.ಗಳನ್ನು ನೀಡಿದರು ಉಳಿದ ಹಣವನ್ನು ಡಿ.ಎಲ್.ಎನ್. ಕೊಟ್ಟರಂತೆ.

ಎಂ.ಎ. ಮುಗಿಸಿದ ನಂತರ ಬೆಂಗಳೂರಿನಲ್ಲಿ ಯಾವುದೇ ಕಾಲಾಜಿನಲ್ಲಿ ಕೆಲಸ ಸಿಗದಿದ್ದಾಗ ರೇಸ್‌ಕೋರ್ಸ್‌ನಲ್ಲಿ ಕೆಲಸ ಮಾಡಬೇಕಾಗಿ ಬಂದಿತು. 1959ರಲ್ಲಿ ಸೆಂಟ್ ಜೋಸೆಫ್ ಕಾಲೇಜಿನಲ್ಲಿ ಕೆಲಸ ಸಿಕ್ಕಿತು. ಟರ್ಫ್‌ಕ್ಲಬ್‌ನ ಅಧಿಕಾರಿ ಶನಿವಾರ ಭಾನುವಾರ

ಬಂದು ಕೆಲಸ ಮುಂದುವರಿಸಬಹುದೆಂದು ಹೇಳಿದರು. ಆಗ ಕಾಲೇಜಿನಲ್ಲಿ ಪಾದರ್ ಒಬ್ಬರು 'ಯಾವುದಾದರೂ ಒಂದನ್ನು ಆರಿಸಿಕೊ' ಎಂದಾಗ ಮಿತ್ರರವರು ಅಧ್ಯಾಪಕ ವೃತ್ತಿಯನ್ನು ಆರಿಸಿಕೊಂಡರು. '1978ರವರೆಗೆ ಸೆಂಟ್ ಜೋಸೆಫ್ ಕಾಲೇಜಿನಲ್ಲಿ ಇದ್ದು ನಂತರ ಸರ್ಕಾರಿ ಕಾಲೇಜು ಶಿಕ್ಷಣ ಇಲಾಖೆಗಳಲ್ಲಿ ಪ್ರವಚಕರಾಗಿ ನೇಮಕಗೊಂಡು ಮಡಿಕೇರಿ, ತುಮಕೂರು, ಬೆಂಗಳೂರಿನ ಸರಕಾರೀ ಕಾಲೇಜು ಶಿಕ್ಷಣ ಇಲಾಖೆಗಳಲ್ಲಿ ಅವರು ಕೆಲಸ ಮಾಡಿದರು, ಪ್ರಾಧ್ಯಾಪಕರಾದರು. ಈ ಮಧ್ಯೆ 'American Peace Corps' ನಲ್ಲಿ ಕನ್ನಡ ಶಿಕ್ಷಕರೂ ಆಗಿದ್ದರು. ಕೊನೆಗೆ ಬೆಂಗಳೂರಿನ ಮಹಾರಾಣಿ ಕಾಲೇಜಿನ ಪ್ರಾಂಶುಪಾಲರಾಗಿ ನಿವೃತ್ತರಾದರು'.[೧]

ಅ.ರಾ.ಮಿತ್ರರವರು ಒಬ್ಬ ಒಳ್ಳೆಯ ಸಂಘಟಕರಾಗಿದ್ದರು. ಹೆಚ್ಚಾಗಿ ಸಾಹಿತಿಗಳ ಸಂಪರ್ಕವಿದ್ದರಿಂದ ಬಸವರಾಧ್ಯಾರವರು ಪರಿಷತ್ತಿನಲ್ಲಿ ಕೆಲಸಕ್ಕೆ ಸೇರಿಸಿದರು. ಕಾಲೇಜು ಕೆಲಸ ಮುಗಿದ ಮೇಲೆ ಅಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಳ್ಳುತ್ತಿದ್ದರು. ಮುಂದೆ ಕನ್ನಡ ನುಡಿ ಸಾಹಿತ್ಯ ಪತ್ರಿಕೆಯ ಸಂಪಾದಕರಾಗಿ, ಕೆಲವು ಕಾಲ ಕಾರ್ಯದರ್ಶಿಯಾಗಿಯೂ ಸೇವೆ ಸಲ್ಲಿಸಿದರು.

'ವಿನೋದ' ಪತ್ರಿಕೆಯಲ್ಲಿ ಉಪಸಂಪಾದಕರಾಗಿ ಸೇವೆ ಸಲ್ಲಿಸಿದರು. ಉದಯ ಟಿ.ವಿ.ಯಲ್ಲಿ ಅತ್ಯಂತ ಜನಪ್ರಿಯ ಹರಟೆ ಕಾರ್ಯಕ್ರಮದಲ್ಲಿ ಮೊದಲು ಉಸ್ತುವಾರಿ ಜವಾಬ್ದಾರಿ ಹೊತ್ತಿದ್ದರು. 1954ರಿಂದಲೂ ಆಕಾಶವಾಣಿಯೊಂದಿಗೆ ಸಂಬಂಧವನ್ನು ಉಳಿಸಿಕೊಂಡಿದ್ದಾರೆ. ವಿವಿಧಭಾರತಿ ಬಾನುಲಿಯಲ್ಲಿ ನವರಾತ್ರಿ ಹಬ್ಬಕ್ಕೆ ಮಾಡಿದ ವಿಶೇಷ ಕಾರ್ಯಕ್ರಮದಲ್ಲಿ ಒಂಭತ್ತು ದಿನವೂ ಒಳ್ಳೆಯ ಕಾರ್ಯಕ್ರಮವನ್ನು ನಡೆಸಿಕೊಟ್ಟರು.

ವ್ಯಕ್ತಿತ್ವ :

ಅ.ರಾ. ಮಿತ್ರರವರು ವಯಸ್ಸಿಗಿಂತ ವ್ಯಕ್ತಿತ್ವ ಮುಖ್ಯ ಎನ್ನುವ ಮನೋಭಾವದವರು. ಪ್ರತಿ ಸಭೆ ಸಮಾರಂಭಗಳಿಗೂ ಹೋಗುವ ಮುನ್ನ ತಯಾರಿ ಮಾಡಿಕೊಂಡು ಹೋಗುವ ಇವರು. ಗಂಭೀರವಾದ ಸಮಯದಲ್ಲಿ ಹಾಸ್ಯದ ಮೂಲಕ ತಿಳಿಗೊಳಿಸುತ್ತಾರೆ. ಒಮ್ಮೆ ಹೀಗೆ ಸಮಾರಂಭಕ್ಕೆ ಹೋದ ಸಂದರ್ಭದಲ್ಲಿ ಅ.ರಾ.ಮಿತ್ರ ವೇದಿಕೆ ಮೇಲಿದ್ದಾಗ ಸಭೆಯಲ್ಲಿ ಹಿಂದೆ ಗಲಾಟೆ ಗದ್ದಲಗಳು ಹೆಚ್ಚಾದಾಗ ಭಾಷಣ ಮುಂದುವರೆಸುವುದು ಕಷ್ಟವಾಯಿತು. ಜಗಳ ನಿಲ್ಲದಿದ್ದಾಗ ಅ.ರಾ. ಮಿತ್ರ ಮೈಕ್ ಕೈಗೆ ತೆಗೆದುಕೊಂಡು 'ನೋಡಿ ಗಲಾಟೆ ಮಾಡಬೇಡಿ ಗಲಾಟೆ ಮಾಡಿದರೆ ಪೋಲೀಸರಿಗೆ ಹಿಡಿದು ಕೊಡುತ್ತೇನೆ. ಒಂದು ವೇಳೆ ಪೋಲೀಸರೇ ಗಲಾಟೆ ಮಾಡುತ್ತಿರದ್ದರೆ ಅವರನ್ನು ಅವರ ಹೆಂಡತಿಗೆ ಹಿಡಿದು ಕೊಡಲಾಗುತ್ತದೆ ಎಂದರಂತೆ'[೧]. ಆಗ ಸಭೆ ನಗೆಗಡಲಿನಲ್ಲಿ ಮುಳುಗಿದ ಸಂದರ್ಭವನ್ನು ನೋಡಿದಾಗ ಮಿತ್ರರವರ ವಾಗ್ ವೈಖರಿ ತಿಳಿಯುತ್ತದೆ. ಭಾಷಾ ಬಳಕೆಯಲ್ಲಿ ತುಂಬ ನಿಷ್ಣಾತರಾದ ಮಿತ್ರರು ಪದಗಳೊಡನೆ ಆಟವಾಡುತ್ತಾ

೧ ಸಂ. ಹೆಚ್.ಕೆ. ನಂಜುಂಡಸ್ವಾಮಿ ಮತ್ತು ವೈ ರಾಜಗೋಪಾಲ್ - ಸಿರಿಗನ್ನಡಂ ಗೆಲ್ಗೆ, ಪು-೨೨೪

ಪದಗಳನ್ನು ಹಿಂದು ಮುಂದು ಬದಲಿಸುತ್ತ ಹಾಸ್ಯವನ್ನು ಉಕ್ಕಿಸುತ್ತಾರೆ. ಹೆತ್ತ worry ಗೆ ಹೆಗ್ಗಣ ಮುದ್ದು ಪುರಂದರದಾಸರ 'ಕಲ್ಲು ಸಕ್ಕರೆ ಕೊಳ್ಳಿರೊ' ಎಂಬುದನ್ನು 'ಕಲ್ಲುಸಿಕ್ಕರೆ ಕೊಳ್ಳಿರೊ' ಎಂದು ಬಳಸುವ ಅವರ ಹಾಸ್ಯ ಪ್ರಜ್ಞೆಯನ್ನು ನೋಡಬಹುದು. ಹೀಗೆ ಅ.ರಾ. ಮಿತ್ರರು ಉತ್ತಮ ವ್ಯಕ್ತಿತ್ವವನ್ನು ಹೊಂದಿದ್ದರು. ಯುವಕರನ್ನ ಹುರಿದುಂಬಿಸುತ್ತಾ ಎಲ್ಲರಿಗೂ ಬೇಕಾಗಿದ್ದವರಾಗಿದ್ದಾರೆ. ಯಾರಾದರೂ ತಮ್ಮ ಕವನ ಸಂಕಲನಗಳಿಗೆ ಮುನ್ನುಡಿ ಬರೆಯಲು ಕೇಳಿಕೊಂಡರೆ ತುಂಬು ಹೃದಯದಿಂದ ಒಪ್ಪಿಕೊಂಡು, ಕಾಟಾಚಾರಕ್ಕೆ ಓದಿ ಮುನ್ನುಡಿಯನನು ಬರೆಯದೆ ತುಂಬ ಅಚ್ಚುಕಟ್ಟಾಗಿ ಬರೆದು ಕೊಡುತ್ತಾರೆ. ಒಂದು ವೇಳೆ ತಪ್ಪುಗಳೇನಾದರೂ ಕಂಡು ಬಂದರೆ ಅದನ್ನು ನಿರ್ದಾಕ್ಷಿಣ್ಯವಾಗಿ ಹೇಳಿ ಖಂಡಿಸುವ ಸ್ವಭಾವದ ಮಿತ್ರ. ಸಾಹಿತ್ಯ ಕ್ಷೇತ್ರದಲ್ಲಿ ಎಲ್ಲರೊಂದಿಗೆ ಮಿತ್ರುತ್ವವನ್ನು ಉಳಿಸಿಕೊಂಡಿದ್ದಾರೆ.

ಒಮ್ಮೆ ಮೈಸೂರಿನಲ್ಲಿ ನಡೆಯುವ ಯುವ ಮೇಳಕ್ಕೆ ವಿ.ಸೀತಾರಾಮಯ್ಯನವರನ್ನ ಒಪ್ಪಿಸಲು ವಿ.ಕೆ.ಸುಬ್ಬರಾಯರವರಿಗೆ ಸಾಧ್ಯವಾಗದಿದ್ದಾಗ ಅ.ರಾ.ಮಿತ್ರರವರು ವಿ.ಸೀ.ಯವರ ಬಳಿ ಹೋಗಿ ಅವರನ್ನು ಯುವ ಮೇಳಕ್ಕೆ ಆಹ್ವಾನಿಸಿದಾಗ ವಿ.ಸೀ.ರವರು ನನ್ನ ಹತ್ತಿರ ಬರುವುದಕ್ಕೆ ಮುಂಚೆ ಬೇರೆಯಾರಾದರೂ ಹತ್ತಿರ ಹೋಗಿದ್ದಿರ ? ಎಂದಾಗ ಜಿ.ಪಿ.ರಾಜ ರತ್ನಂ ಬರಲು ಒಪ್ಪದಿರುವ ವಿಷಯವನ್ನು ಮರೆಮಾಚಿ ಇಲ್ಲ ಸಾರ್ ನಿಮ್ಮ ಹತ್ತಿರವೇ ಮೊದಲು ಬಂದದ್ದು ಎಂದು ಸುಳ್ಳು ಹೇಳಿ ಒಪ್ಪಿಸಿ ಅವರನ್ನು ಸಮಾರಂಭಕ್ಕೆ ಕರೆತಂದರಂತೆ. ಜಿ.ಪಿ.ರಾಜರತ್ನಂ ಮತ್ತು ವಿ.ಸೀ.ಯವರು ತುಂಬ ಸ್ನೇಹಿತರಾಗಿದ್ದರಿಂದ ಮುಂದೆ ವಿಷಯ ತಿಳಿದರೆ ಏನು ಗತಿ ಎಂದು ಆಲೋಚಿಸಿ ವಿ.ಸಿ.ರವರ ಮನೆಗೆ ಹೋಗಿ ನಡೆದ ವಿಷಯವನ್ನು ಹೇಳಿ ಮುಂದೇನಾಗುವುದು ಎಂದು ಕೊಳ್ಳೂತ್ತಿದ್ದಾಗ ವಿ.ಸೀ. ಜೋರಾಗಿ ನಕ್ಕರಂತೆ ನಾನು ಕಾರ್ಯಕರ್ತನಾಗಿ ಅನೇಕ ಸಮಾರಂಭಗಳನ್ನು ಏರ್ಪಡಿಸಿದ್ದೇನೆ ಅದರ ಕಷ್ಟ ನನಗೆ ಗೊತ್ತು ಎಂದರಂತೆ. ಅವಾಗಿನಿಂದ ಇನ್ನು ಮುಂದೆ ಸುಳ್ಳು ಹೇಳುವುದಿಲ್ಲ ಎಂದು ಹೇಳಿ ಪ್ರಮಾಣ ಮಾಡಿದರಂತೆ.

ಮಿತ್ರರವರು ಉತ್ತಮ ವಾಗ್ಮಿಗಳಾಗಿದ್ದು ಅವರ ಜ್ಞಾನ ಸಂಪತ್ತು ಮೆಚ್ಚುವಂತದು ಅವರ ಸತತ ಅಭ್ಯಾಸದಿಂದ ಜ್ಞಾನವನ್ನು ತಮ್ಮದಾಗಿಸಿಕೊಂಡಿದ್ದಾರೆ. ಸಮಯ, ಸಂದರ್ಭಕ್ಕೆ ಅನುಗುಣವಾಗಿ ಹಾಸ್ಯ ಚಟಾಕಿಗಳನ್ನು ಹಾರಿಸುತ್ತಾರೆ. ಕವಿಗಳ ಪದ್ಯವನ್ನು ಉದಾರಿಸುತ್ತ ಅಲ್ಪಸ್ವಲ್ಪ ಬದಲಾವಣೆ ಮಾಡಿ ಹಾಸ್ಯದ ಹೊಳೆಯನ್ನು ಹರಿಸುತ್ತಾರೆ. ಉತ್ತಮ ಭಾಷಣಕಾರರು ಆಗಿರುವ ಮಿತ್ರರು ವೇದಿಕೆಯ ಮೇಲೆ ಇದ್ದರೆ ಸಭೆ ನಗೆ ಗಡಲಿನಲ್ಲಿ ತೇಲುತ್ತದೆ. ಇಂತಹ ಮಿತ್ರರು ಸಾರ್ವಜನಿಕರೊಂದಿಗೂ ಉತ್ತಮ ಸಂಬಂಧವನ್ನು ಹೊಂದಿದ್ದು ಎಲ್ಲರೊಂದಿಗೂ ಸ್ನೇಹಮಯವಾಗಿ ವರ್ತಿಸುತ್ತಾರೆ. ಅದರಲ್ಲೂ ವಿದ್ಯಾರ್ಥಿಗಳಿಗೆ ಅವರು ಮಿತ್ರರೆ ಆಗಿಬಿಡುತ್ತಾರೆ. ಯುವ ಕವಿ ಸಮುದಾಯಗಳಿಗೆ ಪ್ರೋತ್ಸಾಹಿಸುತ್ತ ಅವರ ಅಭಿಪ್ರಾಯಗಳಿಗೆ ಇವರು ಮನ್ನಣೆಯನ್ನು ನೀಡುತ್ತಾರೆ.

ಅ.ರಾ.ಮಿತ್ರರವರ ಸಾಹಿತ್ಯ ಬರಹ :

ಕೋಲಾರದಲ್ಲಿ ಇಂಟರ್ ಮೀಡಿಯೇಟ್ ಓದುತ್ತಿರುವಾಗಲೇ ಕನ್ನಡ ಸಾಹಿತ್ಯದ ಬಗ್ಗೆ ವಿಶೇಷ ಆಸಕ್ತಿ ಹೊಂದಿದ್ದರು. ಚಂದನ ಎಂಬ ಕೈ ಬರಹದ ಪತ್ರಿಕೆಯನ್ನು ಹುಟ್ಟು ಹಾಕಿದರು. ವಿಶ್ವಕರ್ನಾಟಕ ಸಂಪಾದಕ ಅರ್ಚಕ ವೆಂಕಟೇಶ ಪ್ರೇರಣೆಯಿಂದ ಲೇಖನಗಳನ್ನು ಬರೆಯ ತೊಡಗಿದರು. ವರ್ಡ್ಸ್‌ವರ್ತ್, ಠಾಗೊರ್, ಬಂಕಿಮಚಂದ್ರ ಚಟರ್ಜಿ, ವಿವೇಕಾನಂದ ಮುಂತಾದವರ ಬಗ್ಗೆ ಲೇಖನಗಳನ್ನು ಬರೆಯುತ್ತಿದ್ದರು. ಇವರ ಮೊದಲ ಪ್ರಬಂಧ 'ಪಂಡಿತನ ಸಂಕಟ'. ಒಮ್ಮೆ ಕೃಷ್ಣರಾಯ ನಾಡಿಗೇರ್ ಕೃಷ್ಣರಾಯರ ಬಳಿಗೆ ಷೇಕ್ಸ್‌ಫಿಯರ್ ಬಗ್ಗೆ ಒಂದು ಲೇಖನ ಬರೆದು ತೆಗೆದುಕೊಂಡು ಹೋಗಿ ಕೊಟ್ಟಾಗ ಶೇಕ್ಸ್‌ಫಿಯರ್ ಬಗ್ಗೆ ಬರೆಯಲು ಬೇರೆಯವರಿದ್ದಾರೆ ನೀನು ಹಾಸ್ಯ ಬರಿ ಎಂದರಂತೆ ಅದಕ್ಕೆ ಕೋಪಗೊಂಡು ಪಂಡಿತನ ಸಂಕಟ ಬರೆದರಂತೆ. ಮಿತ್ರರವರಿಗೆ ಮೆಚ್ಚಿನ ಕವಿ ಕುಮಾರವ್ಯಾಸ. ಚಿಕ್ಕಂದಿನಿಂದಲೂ ಶ್ರೀರಂಗಪಟ್ಟಣದ ರಾಮು ಮಾವ ಅವರು ಕುಮಾರವ್ಯಾಸ ಭಾರತ ವಾಚನ ಮಾಡುತ್ತಿದ್ದುದು ಅವರ ಮೇಲೆ ಪ್ರಭಾವ ಬೀರಿತು. ಮುಂದೆ ಕುಮಾರವ್ಯಾಸ ಕರ್ನಾಟ ಭಾರತ ಕಥಾಮಂಜರಿಯನ್ನು ಸರಳ ಗದ್ಯದಲ್ಲಿ ಬರೆದರು. ಮೊದಲು ಇದು ಪ್ರಸಿದ್ಧ 'ಸುಧಾ' ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಮೂಡಿ ಬರುತ್ತಿತ್ತು. ವ್ಯಾಸ ಭಾರತದಲ್ಲಿ ಬರುವ ಸುಮಾರು 285 ಪಾತ್ರಗಳನ್ನು ಆರಿಸಿಕೊಂಡ ಸತತ 6 ವರ್ಷಗಳ ಅಧ್ಯಯನ ನಡೆಸಿ 'ಮಹಾಭಾರತದ ಪಾತ್ರ ಸಂಗತಿಗಳು' ಎಂಬ ಪುಸ್ತಕವನ್ನು ಹೊರತಂದರು ಜನಸಾಮಾನ್ಯರಿಗೂ ಛಂದಸ್ಸು ಅರ್ಥವಾಗುವಂತೆ ಜನರಾಡುವ ಸಾಮಾನ್ಯ ಕನ್ನಡದಲ್ಲಿ 'ಛಂದೋಮಿತ್ರ' ಹೊರತಂದರು. ಮಿತ್ರರವರ 'ಒಳನೋಟಗಳು' ಕೃತಿಯಲ್ಲಿ ಕುಮಾರವ್ಯಾಸನ ಕಾವ್ಯದ ಸೂಕ್ಷ್ಮಗಳನ್ನು ಗುರುತಿಸಿದ್ದಾರೆ. ಕುಮಾರವ್ಯಾಸನ ಮೇಲೆ ಆಗಿರುವ ಪ್ರಭಾವ ಮತ್ತು ಭಾಷಾ ಅಂಶಗಳನ್ನು, ಪಂಪ, ಕವಿರಾಜಮಾರ್ಗ, ಜನ್ನ, ಬಸವಣ್ಣನವರ ಪ್ರಭಾವ ಬೀರುವ ಅಂಶಗಳನ್ನು ಗುರುತಿಸಿದ್ದಾರೆ. ಕುಮಾರವ್ಯಾಸ ಕಥೆ ಕಟ್ಟುವ ಪರಿ, ಪದಬಳಕೆ, ಕೋಪರೋಷ ವ್ಯಕ್ತಪಡಿಸಲು ಮಹಾಪ್ರಾಣಗಳ ಬಳಕೆಯ ಪ್ರಯೋಗ, ಮುಂತಾದ ಹಲವು ಅಂಶಗಳನ್ನು ಗುರುತಿಸಿದ್ದಾರೆ. ಹಾಗೆಯೇ ಲಕ್ಷ್ಮೀಶನ ಶೈಲಿಯಲ್ಲಿ ಹರಿದಾಸರ ಕೀರ್ತನೆಯ ಗೇಯ ಗುಣವನ್ನು ಕಂಡಿದ್ದಾರೆ. ನಾಟ್ಯಶೈಲಿಯನ್ನು ಗುರುತಿಸಿ ಹರಿದಾಸ ಯಕ್ಷಗಾನ ಪ್ರಭಾವ ಅಂಶಗಳನ್ನು ಹೇಳುತ್ತಾರೆ. ಲಕ್ಷ್ಮೀಶನ ಕೃತಿಯ ಪ್ರಾಧಾನ್ಯತೆ ಕಡಿಮೆಗೆ ಕಾರಣವಾದ ಅವನ ಉಕ್ತಿ ಚಮತ್ಕಾರವನ್ನು ಗುರುತಿಸಿದ್ದಾರೆ. ಪುರಂದರದಾಸರ ಪದ್ಯಗಳಲ್ಲಿ ಆಡುಮಾತಿನ ಬಳಕೆ, ವಚನದ ಪ್ರಭಾವ, ಕೀರ್ತನೆಗಳಲ್ಲಿ ಛಂದಸ್ಸು, ಪ್ರತಿಮೆಗಳು ಮುಂತಾದ ಹಲವು ಅಂಶಗಳನ್ನು ಗುರುತಿಸಿದ್ದಾರೆ. 'ವಚನ ವಿನೋದ' ಕೃತಿಯಲ್ಲಿ ವಚನಗಳಲ್ಲಿ ಕಂಡು ಬರುವ ಹಾಸ್ಯವನ್ನು ಗುರುತಿಸಿದ್ದಾರೆ.

ಚಿಕಾಗೊ ನಗರದಲ್ಲಿ ಕಾವೇರಿ ಕನ್ನಡ ಸಂಘದ ಸಭೆಯಲ್ಲಿ ಮಾಡಿದ 'ಕನ್ನಡ ಸಾಹಿತ್ಯದಲ್ಲಿ ಹಾಸ್ಯಶೀಲತೆ' ಎಂಬ ಉಪನ್ಯಾಸ ಮಿತ್ರರವರ ಹಾಸ್ಯ ಸಾಹಿತ್ಯದಲ್ಲಿ

ಪ್ರಮುಖವಾದದ್ದು. ಸುಮಾರು 2000 ವರ್ಷಗಳ ಇತಿಹಾಸವಿರುವ ಕನ್ನಡ ಸಾಹಿತ್ಯದಲ್ಲಿ ಕಾಣಿಸಿಕೊಳ್ಳುವ ಹಾಸ್ಯ ಸನ್ನಿವೇಶಗಳನ್ನು ಗುರುತಿಸಿದ್ದಾರೆ. ಜನಪದ, ಗಾದೆ, ಕವಿವಾಣಿ, ಹನಿಗವನ ಮುಂತಾದವುಗಳಲ್ಲಿ ಕಂಡು ಬರುವ ಹಾಸ್ಯ ಪ್ರಸಂಗವನ್ನು ಈ ಲೇಖನದಲ್ಲಿ ಕಟ್ಟಿಕೊಟ್ಟಿದ್ದಾರೆ. ಉದಾ :

'ಗಂಡಸತ್ತರೆ ಹೆಂಡತಿ ಆಗುವಳು ವಿಧವೆ'

'ಹೆಂಡತಿ ಸತ್ತರೆ ಗಂಡ ಆಗುವನು ಮದುವೆ'

'ಸುಂದರಿ ಸುಮಧುರ ಶಿಕ್ಷಿತೆ ಸಂಪನ್ನೆ'

'ಎಂದರೆ ಅವಳೆ ಪರಪತ್ನಿ'

'ನೇಣುಹಾಕಿ ಕೊಳ್ಳುವವನ ಬಳಿ ನಶ್ಯ ಕೇಳಿದರಂತೆ'

'ದುಡ್ಡಿನಾಚೆಗೆ ಬೆಲ್ಲ ಮಾರಿ ಗೋಣಿಚೀಲ ನೆಕ್ಕಿದ'

ಹೀಗೆ ಇಂಗ್ಲೇಂಡ್, ಅಮೇರಿಕಾದ ಫ್ಲಾರಿಡಾ, ನ್ಯೂಜರ್ಸಿ, ಪೋರ್ಟ್‌ಲ್ಯಾಂಡ್‌ಗಳಲ್ಲಿ ಅನೇಕ ಉಪನ್ಯಾಸಗಳನ್ನು ನೀಡಿ ಸಾಹಿತ್ಯದಲ್ಲಿ ಕೃಷಿ ನಡೆಸಿದ ಅ.ರಾ.ಮಿತ್ರರು ಹಲವು ಕೃತಿಗಳನ್ನು ರಚಿಸಿದ್ದಾರೆ ಅವುಗಳೆಂದರೆ..

ಕೃತಿಗಳು :

- ಸ್ಮರಣೀಯರು
- ಒಳನೋಟಗಳು (ವಿಮರ್ಶನ ಗ್ರಂಥ)
- ಪ್ರೇಮನದಿಯ ದಡಗಳಲ್ಲಿ (ಜಗತ್ತಿನ ಪ್ರೇಮ ಕಥೆಗಳ ಸಂಕಲನ)
- ಆರತಕ್ಷತೆ
- ನಾನೇಕೆ ಕೊರೆಯುತ್ತೇನೆ
- ಮಿತ್ರಾವಲೋಕನ
- ಕವಿಗಳ ಬೆನ್ನೇರಿ (ಪದ್ಯಗಳ ಪ್ರಾಯೋಗಿಕ ವಿಮರ್ಶೆ)
- ಮೇಘಧೂತ (ಭಾಮಿನೀ ಷಟ್ಪದಿಯಲ್ಲಿ)
- ಸಮಗ್ರ ಲಲಿತ ಪ್ರಬಂಧಗಳು
- ಮಹಾಭಾರತ ಪಾತ್ರ ಸಂಗತಿಗಳು (ಐದು ಮುದ್ರಣವಾಗಿದೆ)

- ಡಾ॥ ವಸಂತಶ್ರೀಯವರು ಇಂಗ್ಲಿಷ್‌ಗೆ ಅನುವಾದಿಸಿದ್ದಾರೆ.

  Sketches on the extraordinary from the Mahabaratha
- ಛಂದೋಮಿತ್ರ (ಮೂರನೇ ಮುದ್ರಣವಾಗಿದೆ)
- ವಚನಕಾರರು ಮತ್ತು ಶಬ್ದ ಕಲ್ಪ (ಎರಡನೇ ಮುದ್ರಣವಾಗಿದೆ)
- ವಚನ ವಿನೋದ
- ಜೇಡರ ದಾಸಿಮಯ್ಯ
- ಕುಮಾರವ್ಯಾಸ ಭಾರತ ಕಥಾಮಿತ್ರ (ಹಲವು ಮುದ್ರಣವಾಗಿದೆ)
- ಜೀವನ ಚರಿತ್ರೆಗಳು
- ಕೈಲಾಸಂ (ಎರಡು ಮುದ್ರಣವಾಗಿದೆ)
- ಹಿರಿಯಣ್ಣ ರಾಮರಾಯ ಮಲ್ಯ
- ಚಂದ್ರಗುಪ್ತ ಮೌರ್ಯ
- ಅನುವಾದಗಳು (ಇತರರೊಡನೆ)
- ಕಾಲಿಗುಲ ಮತ್ತು ತಪ್ಪಿದ ಎಳೆ
- ಜರ್ಮನ್ ಸಂಪ್ರದಾಯ ದರ್ಪಣ
- 'ಇಸ್ಕಾನ್'ಗಾಗಿ ಹಲವಾರು ಅನುವಾದಗಳು
- ಮಂತ್ರವಿದ್ಯೆ (ತಮಿಳಿನಿಂದ)
- ಸಂಪಾದಿಸಿದ ಕೃತಿಗಳು (ಇತರರೊಡನೆ)
- ಅಜಿತ ಪುರಾಣ ಸಂಗ್ರಹ
- ಪಂಪ ಭಾರತ ಸಂಗ್ರಹ
- ಪುರಂದರ ಸಾಹಿತ್ಯ ದರ್ಶನ (ನಾಲ್ಕು ಸಂಪುಟಗಳು)
- ಪಾ.ವೆಂ.ರವರ ಆಯ್ದ ನಗೆಬರಹಗಳು
- ಟಿ.ಎನ್. ಮಹದೇವಯ್ಯನವರ ಆಯ್ದ ಕವಿತೆಗಳು

ಪ್ರಶಸ್ತಿಗಳು

- ಅ.ನ.ಕೃ. ನಿರ್ಮಾಣ್ ಪ್ರಶಸ್ತಿ
- ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ
- ಕಾವ್ಯನಂದ ಪ್ರಶಸ್ತಿ
- ಟಿ.ವಿ. ವೆಂಕಟಾಚಲಶಾಸ್ತ್ರಿ ವಿದ್ವತ್ ಪ್ರಶಸ್ತಿ
- ಸಂದೇಶ ಪ್ರಶಸ್ತಿ
- ಗೊರೂರು ಪ್ರಶಸ್ತಿ
- ನಗೆರಾಜ ಪ್ರಶಸ್ತಿ
- ಆಳ್ವನುಡಿಸಿರಿ ಪ್ರಶಸ್ತಿ
- ಶಿವರಾಮ ಕಾರಂತ ಪ್ರಶಸ್ತಿ
- ನವರತ್ನ ರಾಮ್ ಪ್ರಶಸ್ತಿ[೧]

೧. ಲೇ: ಕೃಷ್ಣಸುಬ್ಬರಾವ್ ಛಂದೋಮಿತ್ರ ಖ್ಯಾತಿಯ ಅ.ರಾ. ಮಿತ್ರ, ಪು–೫೦

ಅಧ್ಯಾಯ – 4

ಪ್ರಬಂಧದಲ್ಲಿ ಕಂಡು ಬರುವ

4.1 ಸಾಮಾಜಿಕ ವಿಡಂಬನೆ :

ಮಾನವ ಸಂಘ ಜೀವಿಯಾಗಿದ್ದು ಸಮಾಜವನ್ನು ಬಿಟ್ಟು ಬದುಕಲಾರ. ಸಮಾಜದಲ್ಲಿ ಜೀವನ ನಡೆಸಬೇಕಾದರೆ ಹೊಂದಾಣಿಕೆ ಮುಖ್ಯ. ತನ್ನ ಸುತ್ತಮುತ್ತಲಿನವರೊಂದಿಗೆ ಹೊಂದಿಕೊಂಡು ಸಾಮರಸ್ಯ ಜೀವನವನ್ನು ನಡೆಸಿದಾಗ ಮಾತ್ರ ಉತ್ತಮ ಸಮಾಜ ನಿರ್ಮಾಣ ಸಾಧ್ಯ. ಆದರೆ ಇಂದು ಸಮಾಜದಲ್ಲಿ ತನ್ನ ಪ್ರತಿಷ್ಠೆಯನ್ನು ಉಳಿಸಿಕೊಳ್ಳುವ ಸಲುವಾಗಿ ತನ್ನ ನೆರೆಹೊರೆಯವರೊಂದಿಗೆ ಸ್ಪರ್ಧೆಗಿಳಿದು ತನ್ನ ಸ್ಥಾನಮಾನ ಉಳಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾನೆ. ಇವನ ಇಂಥಹ ಪ್ರಯತ್ನದಿಂದ ಸಮಾಜ ಅಧಃಪತನದ ಕಡೆ ಸಾಗುತ್ತಿದೆ. ನಿಜವಾದ ಜೀವನ ಮೌಲ್ಯಗಳು ತಮ್ಮ ಅರ್ಥವನ್ನು ಕಳೆದುಕೊಳ್ಳುತ್ತಿದ್ದು ಇದಕ್ಕೆ ಕಾರಣವಾಗುವ ಅಂಶಗಳನ್ನು ಅ.ರಾ.ಮಿತ್ರರವರು ತಮ್ಮ ಪ್ರಬಂಧಗಳಲ್ಲಿ ಕಟ್ಟಿಕೊಡುತ್ತಾರೆ. ಮನುಷ್ಯನ ಯಾವೆಲ್ಲಾ ಆಲೋಚನೆಗಳು ಇದಕ್ಕೆ ಕಾರಣವಾಗಿವೆ ಎಂಬ ಅಂಶಗಳನ್ನು ತಮ್ಮ ಕೆಲವು ಪ್ರಬಂಧಗಳಲ್ಲಿ ವಿಡಂಬಿಸುತ್ತಾರೆ. ಮನುಷ್ಯನ ಗುಣ. ಸ್ವಭಾವ, ಜೀವನಶೈಲಿ, ಆಲೋಚನ ಕ್ರಮಗಳು ಆಚರಣೆ. ನಂಬಿಕೆಗಳು ಆರೋಗ್ಯಕರ ಸಮಾಜದ ಮೇಲೆ ಪ್ರಭಾವ ಬೀರುತ್ತವೆ.

ಆರೋಗ್ಯಕರ ಸಮಾಜದ ಮೇಲೆ ಪರಿಣಾಮಬೀರುವ ಅಂಶಗಳೆಂದರೆ :

4.1.1 ಮನುಷ್ಯನ ಗುಣ ಸ್ವಭಾವ.

4.1.2 ಸರ್ಕಾರ ಮತ್ತು ಆಡಳಿತ ವ್ಯವಸ್ಥೆ

4.1.3 ಆಚರಣೆ ಮತ್ತು ನಂಬಿಕೆ

4.1.4 ಜೀವನ ಶೈಲಿ

ಮುಂತಾದ ಅಂಶಗಳು ಸಾಮಾಜಿಕ ಜೀವನದ ಮೇಲೆ ಯಾವ ರೀತಿಯ ಪರಿಣಾಮ ಬೀರುತ್ತವೆ ಅದಕ್ಕೆ ಕಾರಣವಾಗುವ ಅಂಶಗಳಾವುವು ಎಂಬುದನ್ನು ಇವರು ತಮ್ಮ ಪ್ರಬಂಧಗಳಲ್ಲಿ ಕಟ್ಟಿಕೊಟ್ಟಿದ್ದಾರೆ. ಅಂತಹ ಅಂಶಗಳನ್ನು ಕೆಲವು ಪ್ರಬಂಧಗಳ ಮೂಲಕ ತಿಳಿಯಬಹುದು.

4.1.1 ಮನುಷ್ಯನ ಗುಣ ಸ್ವಭಾವ :

ಒಬ್ಬರ ಆಲೋಚನ ಕ್ರಮಗಳು ಮತ್ತೊಬ್ಬರ ಹಾಗಿರುವುದಿಲ್ಲ ಇದಕ್ಕೆ ಮನುಷ್ಯನ ಬಿನ್ನ ಗುಣ ಸ್ವಭಾವಗಳು ಕಾರಣವಾಗಿರುತ್ತವೆ. ಇವು ಸಮಾಜದ ಮೇಲೆ ಯಾವ ರೀತಿಯ ಪರಿಣಾಮವನ್ನು ಬೀರುತ್ತವೆ ಎಂಬುದನ್ನು ಇವರ ಉತ್ತರಕುಮಾರರು ನಮ್ಮ ಸುತ್ತಮುತ್ತ. 'ಹೊಟ್ಟೆಕಿಚ್ಚು'. 'ಹೀನಸುಳಿ'. 'ನೆಡೆವರೆಡಹದೆ'. 'ಬೆಳಗಿನ ಜಾವ'. 'ಹೊಸವರ್ಷದ ಸಂಕಲ್ಪ'

'ಗೊರಕೆ', 'ಹುತ್ತದಲ್ಲಿ ಹುತ್ತ' ಮುಂತಾದ ಪ್ರಬಂಧಗಳಲ್ಲಿ ನೋಡಬಹುದು. ಸಮಾಜ ನಿರ್ಮಾಣದಲ್ಲಿ ವ್ಯಕ್ತಿ ಪಾತ್ರ ಗುರುತರವಾದದ್ದು. ತನ್ನ ಸುತ್ತಮುತ್ತಲಿನ ಸನ್ನಿವೇಶಗಳನ್ನು, ನೈಜತೆಯನ್ನು ಅರಿಯುವ ಅಗತ್ಯವಿದೆ. ಇದರ ಪರಿವೇ ಇಲ್ಲದೇ ಕೇವಲ ಕಲ್ಪನೆಯಲ್ಲೇ ವಿಹರಿಸುವ, ವಾಸ್ತವ ಜಗತ್ತಿಗೆ ವಿಮುಖವಾಗಿರುವ ಸ್ವಭಾವದವರು 'ಉತ್ತರಕುಮಾರರು ನಮ್ಮ ಸುತ್ತಮುತ್ತ' ಪ್ರಬಂಧದಲ್ಲಿ ಕಾಣಿಸಿಕೊಳ್ಳುತ್ತಾರೆ. ಒಬ್ಬ ವ್ಯಕ್ತಿಯ ಒಡಕುಮುಖ ಹೇಗೆ ಕಾಣಿಸಿಕೊಳ್ಳುತ್ತದೆ ಎಂಬುದನ್ನು ಈ ಪ್ರಬಂಧ ತೆರೆದಿಡುತ್ತದೆ. ಪುರಾಣ ಕಾಲದ ಉತ್ತರ ಕುಮಾರ ಹೆಂಗಳೆಯರ ಮುಂದೆ ಬೆಳೆದು ಯುದ್ಧ ಭೂಮಿಯನ್ನೇ ಕಂಡಿರದವನು ಜಂಬ ಕೊಚ್ಚಿಕೊಳ್ಳುತ್ತಾನೆ. ಆದರೆ ಅವನಿಗೆ ವಾಸ್ತವ ಸ್ಥಿತಿಯನ್ನು ಅರಿವು ಮೂಡಿಸಲು ಅರ್ಜುನನೆ ಬರಬೇಕಾಗುತ್ತದೆ ಎಂಬ ಸಂಗತಿಯನ್ನು ಮಿತ್ರ ಸೂಚಿಸುತ್ತಾರೆ. ಈ ಪುರಾಣ ಕಾಲದ ಉತ್ತರಕುಮಾರ ನಂತರು ಇಂದು ಹೆಚ್ಚಿನ ಸಂಖ್ಯೆಯಲ್ಲಿ ಕಾಣಿಸಿಕೊಳ್ಳುತ್ತಿರುವ ಅಪಾಯವನ್ನು ಸೂಚಿಸುತ್ತ ಇಂಥ ಉತ್ತರಕುಮಾರರನ್ನು ವಾಸ್ತವ ಜಗತ್ತಿನ ದರ್ಶನ ಮಾಡಿಸುವಂತ ಅರ್ಜುನರು ಇಲ್ಲವಾಗಿದ್ದಾರೆ ಎಂಬ ವಿಷಾದವನ್ನು ವ್ಯಕ್ತಪಡಿಸುತ್ತಾರೆ. ಇಂದು ಇಂಥಹ ಉತ್ತರ ಕುಮಾರರು ವಾಸ್ತವದ ಅರಿವಿಲ್ಲದ ಅಂಜುಬುರುಕ ಹೇಡಿಗಳು ಸುತ್ತಮುತ್ತ ಹುಟ್ಟಿಕೊಳ್ಳುತ್ತಿರುವುದು ಆತಂಕಕಾರಿಯಾಗಿದೆ.

ತಪ್ಪು ಮಾಡಿದಾಗ ಹೊಗಳ ಹಿಂದೆ ತೆಗಳುವ ಜನ ಉತ್ತರಕುಮಾರಿಗಿಂತಲೂ ಅಪಾಯಕಾರಿಯಾಗಿ ಕಾಣಿಸುತ್ತಾರೆ. ಉತ್ತರ ಕುಮಾರ ಒಬ್ಬ ಫಲಾಯನವಾದಿಯಾಗಿದ್ದು ವಾಸ್ತವ ಜಗತ್ತಿನ ಅರಿವಿಲ್ಲದನು. ಇಂದಿನ ಜನರು ಇದಕ್ಕೆ ಅಪವಾದವಲ್ಲ. ನೆನ್ನೆ, ಇಂದು ನಾಳೆ ಎಂಬ ಭೂತ, ವರ್ತಮಾನ, ಭವಿಷ್ಯದ ಬಗ್ಗೆ ಯೋಚಿಸದ ನೆನ್ನೆಯ ಬಗ್ಗೆ ಚಿಂತಿಸುತ್ತ ವರ್ತಮಾನದ ಸಮಯವನ್ನು ವ್ಯಯಿಸುತ್ತಾ ನಾಳೆಗಳ ಬಗ್ಗೆ ಕೇವಲ ಕನಸುಕಾಣುವವರು ನಿಜವಾಗಿಯೂ ಆಧುನಿಕ ಕಾಲದ ಉತ್ತರಕುಮಾರರಾಗಿ ಕಾಣಿಸಿಕೊಳ್ಳುತ್ತಾರೆ. ರಾಜಕಾರಣಿಗಳು, ಸಂಪ್ರದಾಯಶೀಲರು, ಹಣದ ಹಿಂದೆ ಬಿದ್ದು ಗ್ರಾಮೀಣ ಜೀವನ ತ್ಯಜಿಸಿ ನಗರಕ್ಕೆ ಫಲಾಯನ ಮಾಡುವ ಹಳ್ಳಿಗಾಡಿನ ಜನರು ನಿಜವಾಗಿ ಉತ್ತರಕುಮಾರನ ಪ್ರತಿಮೆಗಳಾಗಿ ಕಾಣಿಸಿಕೊಳ್ಳುತ್ತಾರೆ. ಇವರೆಲ್ಲ ನೈಜ ಬದುಕನ್ನು ಅರ್ಥಮಾಡಿಕೊಳ್ಳಲಾಗದ ಆಶಾಢಭೂತಿಗಳು. ಇಂದಿನ ಕಾಲದ ಉತ್ತರ ಕುಮಾರರನ್ನು ಟಿ.ಪಿ. ಕೈಲಾಸಂರವರ 'ಬಂಡ್ವಾಳಿಲ್ಲದ ಬಡಾಯಿ' ನಾಟಕದ 'ಆಹೋಬ್ಳು'ಗೆ ಹೋಲಿಸಿರುವುದು ಔಚಿತ್ಯ ಪೂರ್ಣವಾಗಿದೆ. ಇಂದಿನ ರಾಜಕಾರಣಿಗಳು ಆಹೋಬ್ಳು ಆಗೆ ಬರಿ ಮಾತಿನ ಮಂಟಪ ಕಟ್ಟುವವರೆ ಆಗಿದ್ದಾರೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದರೆ ಏನೆಲ್ಲಾ ಕೆಲಸಗಳನ್ನು ಮಾಡುತ್ತೇವೆ ಎಂದು ಸುಳ್ಳಿನ ಭರವಸೆ ನೀಡಿ ಪ್ರಜೆಗಳ ಮೂಗಿಗೆ ತಪ್ಪುಸವರುವ ನಮ್ಮ ರಾಜಕಾರಣಿಗಳು ನಿಜವಾಗಲು ಆಹೋಬ್ಳುನ ಪ್ರತಿರೂಪವಾಗಿ ನಿಲ್ಲುತ್ತಾರೆ.

ಉತ್ತರಕುಮಾರನ ಸ್ವಭಾವದವರು ಸಮಾಜಕ್ಕೆ ಅಪಾಯಕಾರಿ. ಇಂಥವರನ್ನು ಹುಟ್ಟಿ ಹಾಕುತ್ತಿರುವವರು ನಮ್ಮ ಸಮಾಜದೊಳಗೆ ಇರುವುದು ಕಳವಳದ ಸಂಗತಿ ಈ ಎರಡು ಮನೋಭಾವದವರು ತಮ್ಮ ಗುಣ ಸ್ವಭಾವಗಳನ್ನು ಬದಲಿಸಿಕೊಳ್ಳುವ ಅಗತ್ಯವಿದೆ. ರಾಜಕಾರಣಿಗಳು ಉತ್ತರಕುಮಾರರಾದರೆ ಅವರನ್ನು ವಾಸ್ತವ ಪ್ರಪಂಚಕ್ಕೆ ಎಳೆದು ತಂದ ಅರ್ಜುನನಂತವರು ನಾವಾಗ ಬೇಕಿದೆ. ಇಲ್ಲದೆ ಹೋದರೆ ನಾಳೆ ಇಡೀ ನಾಡೆ ಉತ್ತರಕುಮಾರರಿಂದ ಆವರಿಸಿ ಬಿಡುತ್ತದೆ.

ಕೆ.ಎಸ್.ಎನ್. ಪದ್ಯದ ಮೂಲಕ ರಾಜಕಾರಣಿಗಳ ಮನೋಧರ್ಮವನ್ನು ತೆರೆದಿಟ್ಟಿರುವುದು ಪ್ರಸ್ತುತ ಸಮಾಜಕ್ಕೆ ಹೊಂದಿಕೊಳ್ಳುತ್ತದೆ.

ಬರಿಗೊಡಗಳಿಗೆ ಸಮಾಧಾನ ಹೇಳುತ್ತಿದೆ

ನೀರಿಲ್ಲದ ನಲ್ಲಿ

ಮಟ ಮಟ ಮಧ್ಯಾಹ್ನದಲ್ಲಿ[೧]

ಬರಿ ಕೊಡಗಳಾಗಿರುವ ಈ ಸಮಾಜಕ್ಕೆ ಮೂಲಭೂತ ಅಗತ್ಯತೆಗಳನ್ನು ಪೂರೈಸಲಾಗದ ನಮ್ಮ ರಾಜಕಾರಣಿಗಳ ಬರಿ ಆಶ್ವಾಸನೆಯ ಮೂಲಕ ನಮ್ಮಲ್ಲಿ ಆಸೆಗಳನ್ನು ಹುಟ್ಟಿಸುವುದು ಹಾಸ್ಯಾಸ್ಪದವಾಗಿ ಕಾಣುತ್ತದೆ.

ಇಂದಿನ ವಿದ್ಯಾವಂತ ವರ್ಗವು ಉತ್ತರಕುಮಾರರಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ಕೆಲಸ ಮಾಡಬೇಕೆಂಬ ಕಾಳಜಿ ಇಲ್ಲ ಇತ್ತ ಜ್ಞಾನಗಳಿಗೂ ಹುಮ್ಮಸ್ಸು ಇಲ್ಲ. ಕೆಲಸಕ್ಕೆ ಅರ್ಜಿ ಹಾಕಿ ಕೆಲಸ ಸಿಗದಿದ್ದಾಗ ನನ್ನಂಥ ಯೋಗ್ಯ ಇದ್ದವರಿಗೆ ಕೆಲಸ ಸಿಗುವುದಿಲ್ಲ ಹಣ ನೀಡಿದವರಿಗೆ ಮಾತ್ರ ಎಂದು ತುಂಟುನೆಪ ಹೇಳುವುದು ಖೇದದ ವಿಷಯ ಬರಿ ಮಾತಿನ ಬಗ್ಗೆ ಎಚ್ಚರವಿರದೆ ಸದಾ ವಟಗುಟ್ಟುತ್ತಿರುವ, ಜಂಬಕೊಚ್ಚಿಕೊಳ್ಳುವವರನ್ನು ನೋಡಿ ಲೇಖಕರು 'ಮಾತುಗಳ ಮಚ್ಚನ್ನು ಹಿಡಿದು ಅಭ್ಯಾಸವಾಗಿರುವವರಿಗೆ ಏನನ್ನಾದರೂ ಕೊಚ್ಚದಿದ್ದರೆ ಜೀವಕ್ಕೆ ಸಮಾಧಾನವಾಗುವುದಿಲ್ಲ.[೨] ಇಂಥಹ ಅಭ್ಯಾಸವಿದ್ದವರು ಮಧ್ಯಪಾನ, ಧೂಮಪಾನ, ಜೂಜು ಮುಂತಾದ ಕೆಟ್ಟಚಟಕ್ಕೆ ಬಿದ್ದವರಿಗಿಂತ ಹೆಚ್ಚು ಅಪಾಯಕಾರಿ ಎಂಬುದನ್ನು ತಿಳಿಯಬೇಕು.

ಇನ್ನಾದರು ಇಂತಹ ಉತ್ತರಕುಮಾರನಂತವರು ಬದಲಾಗಬೇಕಾದ ಅಗತ್ಯವಿದೆ. ಈ ಉತ್ತರ ಕುಮಾರನ ಸ್ವಭಾವದವರು ಬರಿ ಮಾತಿನಲ್ಲೇ ಮುಳುಗಿ ವಾಸ್ತವ ಜಗತ್ತಿನಿಂದ ಫಲಾಯನವಾದಿಗಳಾಗಿರುವುದರಿಂದ ಇಂತವರಿಂದ ಉತ್ತಮ ಸಮಾಜ ನಿರ್ವಹಣೆ ಅಸಾಧ್ಯ ಎಂದು ಉತ್ತರ ಕುಮಾರನಂತವರನ್ನ ವಿಡಂಬಿಸುತ್ತಾರೆ.

ಅಸೂಹೆ ಎಂಬುದು ಮನುಷ್ಯನನ್ನು ಹಾಳು ಮಾಡುತ್ತದೆ. ತನ್ನ ಮುತ್ತಲಿನವರೊಂದಿಗೆ ಹೊಂದಿಕೊಂಡು ಸಹಬಾಳ್ವೆಯನ್ನು ಸಿಡಿಸದೆ ಅವರಿವರ ಯಶಸ್ಸನ್ನು ಸಹಿಸದೆ ಹೊಟ್ಟೆ ಉರಿಪಟ್ಟುಕೊಳ್ಳುತ್ತಾನೆ. ಇಂತಹ ವ್ಯಕ್ತಿಗಳು ಸದಾ ಬೇರೆಯವರಲ್ಲಿ ತಪ್ಪುಗಳನ್ನು ಹುಡುಕುತ್ತ

೧-೨ ಸಂ. ತಾ.ರಾ. ನಾಗರಾಜ್, ಸ.ಲ.ಪ್ರ. ಅ.ರಾ.ಮಿತ್ರ 'ನಮ್ಮ ಉತ್ತರಕುಮಾರರು ಸುತ್ತಮುತ್ತ', ಪು-೧೭

ಅವರನ್ನು ತುಳಿಯಲು ಪ್ರಯತ್ನಿಸುತ್ತಿರುತ್ತಾನೆ. ಇದಕ್ಕೆ ಅವನಲ್ಲಿರುವ ಅಸೂಹೆ ಬುದ್ಧಿಯೇ ಕಾರಣ ಎಂಬುದನ್ನು 'ಹೊಟ್ಟೆಕಿಚ್ಚು' ಮತ್ತು 'ಹುತ್ತದಲ್ಲಿ ಹುತ್ತ' ಪ್ರಬಂಧಗಳಲ್ಲಿ ನೋಡಬಹುದು. ಮಂಗಳೂರು ಮತ್ತು ಮಡಿಕೇರಿ, ಭಾಗಮಂಡಲ ಭಾಗಗಳಲ್ಲಿ ಜನರು ಚಳಿಗಾಲದಲ್ಲಿ ದೇಹವನ್ನು ಬೆಚ್ಚಗಿಟ್ಟಕೊಳ್ಳಲು ಸಿಗಡಿಯನ್ನು ಬಳಸುತ್ತಾರೆ. ಅದರಲ್ಲಿ ಯಾವಾಗಲು ಬೆಂಕಿಹಾರದಂತೆ ನೋಡಿಕೊಳ್ಳುತ್ತಾರೆ. ಈ ಸಿಗಡಿಯಲ್ಲಿ ಸದಾ ಬೆಂಕಿ ಇರುವಂತೆ ಮನುಷ್ಯ ತನ್ನ ಹೊಟ್ಟೆಯೊಳಗೆ ಅಸೂಹೆಯ ಕಿಚ್ಚನ ಕಾಪಾಡಿಕೊಂಡು ಬರುತ್ತಿದ್ದಾನೆ. ಇಂತಹ ಕಿಚ್ಚು ಬೇರೆಯವರನ್ನು ಸುಡುವುದರ ಜೊತೆಗೆ ನಮ್ಮನ್ನು ಹಾಳು ಮಾಡುತ್ತವೆ ಎಂಬುದಕ್ಕೆ 'ಹುತ್ತದಲ್ಲಿ ಹುತ್ತ' ಪ್ರಬಂಧದ 'ವನಜಳೆ' ಸಾಕ್ಷಿ. ಯಾವುದೇ ದುಶ್ಚಟಗಳಿಂದ ಆರಾಧ್ಯನನ್ನು ಸಮಸ್ಯೆಗೆ ಸಿಲುಕಿಸಲು ಅವಕಾಶ ಕಾಯುತ್ತಿರುತ್ತಾಳೆ. ಇವಳ ಅಸೂಯೆ ಇಂದ ಇತರರು ಕೆಲಸ ಬಿಟ್ಟಿರುತ್ತಾರೆ. ರಾಮ್‌ವಿಲಾಸ್ ಟೆಕ್ಸ್‌ಟೈಲ್ಸ್ ಕಂಪನಿಯ ಮಾಲೀಕ ರಾಜೀವ ಅವಳ ಮಾತನ್ನು ನಂಬುತ್ತಿರುತ್ತಾನೆ. ಕೊನೆಗೆ ಆರಾಧ್ಯ ಹೊಂಚುಹಾಕಿ ಇವಳಿಗೆ ಬುದ್ಧಿ ಕಲಿಸಲು ರಾತ್ರಿ ಕುಡಿದು ಅವಳ ಮನೆಗೆ ಹೋಗಿ ರಾಜೀವನನ್ನು ಬೈದು ಬರುತ್ತಾನೆ. ಬೆಳಗ್ಗೆ ವನಜ ಇವನ ನಡತೆ ಬಗ್ಗೆ ರಾಜೀವ ಹೇಳಿದಾಗ ಅವಳ ಮಾತನ್ನು ನಂಬಂದೆ 22 ವರ್ಷದಿಂದ ತನ್ನ ಕಣ್ಣೆದುರೇ ನೋಡಿದ ಆರಾಧ್ಯನನ್ನ ಕೆಲಸದಿಂದ ತೆಗೆಯದೆ ಅವಳನ್ನೇ ಕೆಲಸದಿಂದ ತೆಗೆಯುತ್ತಾನೆ. ಹೀಗೆ ಆಕೆ ತಾನೆ ತೋಡಿದ ಹಳ್ಳದಲ್ಲಿ ಬೀಳುತ್ತಾಳೆ.

ಇಂಥಹ ಸನ್ನಿವೇಶಗಳು ನಮ್ಮ ನಿತ್ಯ ಜೀವನದಲ್ಲಿ ನಮ್ಮ ಸುತ್ತಮುತ್ತ ನಡೆಯುತ್ತಿರುತ್ತವೆ. ಇದಕ್ಕೆ ಮನುಷ್ಯನ ಹೊಟ್ಟೆಕಿಚ್ಚೆ ಕಾರಣ ಆರೋಗ್ಯಕರ ಸಮಾಜದಲ್ಲಿ ಇಂಥಹ ವ್ಯಕ್ತಿಗಳು ತಮ್ಮ ಸ್ವಭಾವವನ್ನು ತಿದ್ದಿಕೊಳ್ಳುವ ಅವಶ್ಯಕತೆ ಇದೆ. ಯಾವಾಗಲೂ ಬೇರೆಯವರಲ್ಲಿ ಕೊಂಕು ಹುಡುಕಬಾರದು 'ಓಹೋ ಚರಂಡಿಯಾದ ಸರಕಿನ ಗಾಡಿ ಮೇಲಕ್ಕೆ ಇಳಿತಾ ಇದರೋ?[1] ಎಂದು ವನಜ ಆರಾಧ್ಯನನ್ನು ಅಣಕಿಸುತ್ತಿರುತ್ತಾಳೆ. ಹೀಗೆ ಬೇರೆಯವರ ಚಾಡಿ ಮಾತುಗಳನ್ನು ನಂಬುವುದು ಕೂಡ ತಪ್ಪು ? ಇಂತಹ ಹೊಟ್ಟೆಕಿಚ್ಚನ್ನು ಬೆಳೆಸಿಕೊಂಡು ಬರುತ್ತಿದ್ದೇವೆ ಎಂಬುದಕ್ಕೆ ಇಂದು ಅರ್ಥ ಕಂಡು ಕೊಳ್ಳಬೇಕಾಗಿ ಲೇಖಕರೆ ಹೇಳುವಂತೆ ಈ ಹೊಟ್ಟೆಕಿಚ್ಚಿಗೆ ಯಾವುದೇ ಬಣ್ಣ ಆಕಾರವಿರುವುದಿಲ್ಲ ಯಾರ ಮೇಲಾದರು ಪ್ರಕಟವಾಗಬಹುದು. ವಿನಾಃ ಕಾರಣ ಅನಗತ್ಯವಾಗಿ ಪ್ರಕಟಗೊಳ್ಳುವ ಈ ಹೊಟ್ಟೆಕಿಚ್ಚಿಗೆ ಕಾರಣ, ಬೇರೆಯವರು ತಮಗಿಂತ ಎಲ್ಲಾ ವಿಷಯದಲ್ಲೂ ಮುಂದಿದ್ದಾರೆ, ಚನ್ನಾಗಿ ಓದುತ್ತಿದ್ದರೆ, ಬದುಕುತ್ತಿದ್ದರೆ ಸಂತೋಷದಿಂದಿದ್ದರೆ ಅದನ್ನು ಸಹಿಸದೆ ತಮ್ಮಲ್ಲಿರುವ ಹೊಟ್ಟೆಕಿಚ್ಚನ್ನು ಹೊರಹಾಕುತ್ತಾರೆ. ಸಂಸಾರದಲ್ಲಿ ಅತ್ತೆಸೊಸೆ, ಅಧಿಕಾರಿ ವರ್ಗ, ರಾಜಕಾರಣಿಗಳು, ಅಧ್ಯಾಪಕರ ವರ್ಗ ಹೀಗೆ ಎಲ್ಲಾ ಕ್ಷೇತ್ರದಲ್ಲೂ ಈ ಹೊಟ್ಟೆಯ ಕಿಚ್ಚನ ಜನ ಪೋಷಿಸಿಕೊಂಡು ಬರುತ್ತಿದ್ದಾರೆ. ಕೌರವರಿಗೆ ಪಾಂಡವರನ್ನು ಕಂಡರೆ, ಭೀಮನಿಗೆ, ದುರ್ಯೋಧನನ್ನು ಕಂಡರೆ ಈ ಹೊಟ್ಟೆಕಿಚ್ಚು ಸ್ಫೋಟಗೊಳ್ಳುತ್ತಿತ್ತು ಎಂದಾಗ ಇದು ವ್ಯಕ್ತಿಗತವಾಗಿ ಮತ್ತು ಸಾಮೂಹಿಕವಾಗಿ ಹೊಟ್ಟೆಕಿಚ್ಚನ

೧-೨. ಸಂ. ತಾ.ರಾ. ನಾಗರಾಜ್, ಸ.ಲ.ಪ್ರ. ಅ.ರಾ.ಮಿತ್ರ. ಪ್ರ: 'ಹುತ್ತದಲ್ಲಿ ಹುತ್ತ', ಪು-೭೭

ಕಿಡಿಗಳು ಸ್ಫೋಟಗೊಳ್ಳುತ್ತದೆ ಎಂಬುದು ತಿಳಿಯುತ್ತದೆ. ಕವಿಗೆ ಕವಿ ಮುನಿವಂ ಎಂಬಂತೆ ಒಬ್ಬನಿಗೆ ಒಬ್ಬನನ್ನು ಕಂಡರೆ ಆಗುವುದಲ್ಲದ ಸ್ಥಿತಿ ಇಂದು ನಮ್ಮ ಸಮಾಜದಲ್ಲಿ ನಿರ್ಮಾಣವಾಗುತ್ತದೆ.

ಈ ಹೊಟ್ಟೆಕಿಚ್ಚು ಅಸೂಹೆ ಪ್ರತೀಕವಾಗಿ ಕಾಣಿಸಿಕೊಳ್ಳುತ್ತದೆ. ವನಜಳಂತ ಸ್ವಭಾವದವರು ನಮ್ಮ ಸುತ್ತಮುತ್ತ ಹಲವು ಮಂದಿ ಇರುವುದರಿಂದ ಸಮಾಜದ ಸ್ವಸ್ತ ಹಾಳಾಗುತ್ತಿದೆ. ಇಂಥವರಿಂದ ದೂರ ಉಳಿಯುವುದು ಒಳ್ಳೆಯದು ಜೊತೆಗೆ ಇಂಥಹ ಹೊಟ್ಟೆಕಿಚ್ಚಿನ ನಮ್ಮೊಳಗೆ ನಂದಿಸದಿದ್ದರೆ ನಾವೆ ಅದಕ್ಕೆ ಆಹಾರವಾಗುವುದರಲ್ಲಿ ಸಂಶಯವಿಲ್ಲ.

ಗುಣ ಸ್ವಭಾವಗಳು ಮನುಷ್ಯನ ಮೇಲೆ ಪ್ರಭಾವ ಬೀರುತ್ತವೆ. ಕೆಲವು ಕೆಟ್ಟ ಚಟಗಳು ದುರಾಭ್ಯಾಸಗಳು ನಮ್ಮ ವ್ಯಕ್ತಿತ್ವದ ಮೇಲೆ ಪರಿಣಾಮ ಬೀರುತ್ತದೆ. ಕೆಲವು ಅಭ್ಯಾಸಗಳು ಮುಂದುವರೆದಾಗ ಅವು ಚಟವಾಗಿ ಪರಿಣಮಿಸಿ ಬಿಡುತ್ತವೆ. ಇಂಥಹ ಕೆಟ್ಟ ಚಟಗಳ ಸ್ವಭಾವದವರ ವರ್ತನೆಯನ್ನು 'ಹೀನಸುಳಿ' ಪ್ರಬಂಧದಲ್ಲಿ ಗುರುತಿಸಬಹುದು. ವೃತ್ತಿನಿರತ ಚಟಗಳು ಹೋಟೆಲ್ ಮುಂದೆ ಕಾಫಿಯನ್ನು ಲೋಟಕ್ಕೆ ಸುರಿಯುವಾಗ ಯಾವ ಲೋಟದಿಂದ ಯಾವ ಲೋಟಕ್ಕೆ ಬದಲಾಯಿಸುತ್ತಿದ್ದಾನೆ ಎಂಬುದು ತಿಳಿಯುವುದಿಲ್ಲ ಅಷ್ಟರ ಮಟ್ಟಿಗೆ ಅದರಲ್ಲಿ ಪಳಗಿರುತ್ತಾನೆ. ಪೋಸ್ಟ್‌ಮಾಸ್ಟರ್ ರಾಜದಿನಗಳಲ್ಲಿ ತನ್ನ ಕೈ ಹಿಗ್ಗಿಸಿಕೊಂಡೆ ನಡೆಯುವುದು.

ಅಧ್ಯಾಪಕರು ಪಾಠ ಮಾಡುವಾಗ ಕೆಲವು ಪದಗಳನ್ನು ಪದೇ ಪದೇ ಬಳಸುವುದು. Well, see, so, it fate ಇಲ್‌ನೋಡಿ, ಮತ್ತೆ, ಅರ್ಥವಾಯಿತ, ಹೀಗೆ ಬಳಸುವ ಪದಗಳ ಪಟ್ಟಿಯನ್ನು ನೀಡಿದ್ದಾರೆ. ಇಂಥಹ ಚಟಗಳು ಕೇಳುಗರಿಗೆ ಬೇಸರವನ್ನು ತರಿಸುವುದರ ಜೊತೆಗೆ ನಮ್ಮನ್ನು ಅಂಥಹ ಪದಗಳಿಂದಲೇ ಗುರುತಿಸುವ ಅಪಾಯವಿರುತ್ತದೆ. ಕೆಲವು ವೃತ್ತಿನಿರತರು ತಮ್ಮ ಕಾರ್ಯಕ್ಷೇತ್ರದ ಪದಗಳನ್ನು ಬಳಸಿ ಇತರರೊಂದಿಗೆ ಮಾತನಾಡುವಾಗಲು ತಮ್ಮ ವೃತ್ತಿ ಪದಗಳನ್ನು ಬಳಸುತ್ತಿರುತ್ತಾರೆ. ಅದಕ್ಕೆ ಸಂಗೀತಗಾರನೊಬ್ಬ ತನ್ನ ಸ್ನೇಹಿತನಿಗೆ ಪರ ಊರಿಗೆ ಹೋದಾಗ ಹೀಗೆ ಹೇಳುತ್ತಾನೆ. 'ದರಿದ್ರ ಊರು ಅದು. ಏನು ತಿಂಡಿನೋ ಹಾಳು ಇಡ್ಲಿ. ದೋಸೆಗಳಿಗೆ ಪಕ್ಕವಾದ್ಯಗಳೇ ಸರಿ ಇರಲಿಲ್ಲ. ವಡೆಯೋ ಮೃದಂಗ ಕುಟ್ಟುವ ಕಲ್ಲಿನಂತಿತ್ತು ಕಾಫಿ ಬರೀ ಅಪಸ್ವರ ಎಂದು ಪಲ್ಲವಿ ಆರಂಭಿಸಿದನಂತೆ'[೧] ಇಂಥಹ ಅಭ್ಯಾಸ ಚಟಗಳು ಮಾತನಾಡುವ ಸಂದರ್ಭದಲ್ಲಿ ಅನಾಯಾಸವಾಗಿ ಬಂದುಬಿಡುವುದು ಕೆಲವರು ತಮ್ಮ ಅವಜ್ಞೆಯಿಂದ ಪದಗಳನ್ನು ಬಳಸುತ್ತಿರುತ್ತಾರೆ. ತಾವು ಇರುವ ಸನ್ನಿವೇಶ ಸ್ಥಳವನ್ನು ಗಮನಿಸದೆ ಬೋಳಿ..ಸೂಳೆ.. ಪದಗಳನ್ನು ಬಳಸುತ್ತಾರೆ. ಒಬ್ಬಳು ಜಗಳಗಂಟಿ ಸ್ವಭಾವದವಳು. ಈ ಊರಿನಲ್ಲಿ ಇರಬಾರದೆಂದು ಯಾರೊಡನೆಯೂ ಇನ್ನೂ ಜಗಳ ಮಾಡುವುದಿಲ್ಲವೆಂದು ಶಪಥ ಮುಂದೆ ಬೇರೆ ಊರಿಗೆ ಹೋಗಲು ತನ್ನ ನೆರೆಹೊರೆಯವರನ್ನು ಕುರಿತು 'ಜಗಳವಿಲ್ಲದ ಜಾಗವೆಲ್ಲಿದೆ ಜಗಳವಿಲ್ಲದೆ ಜಾವಗಲ್ಲಿಗೆ ಹೋಗ್ತೀನಿ ನೆರೆಮನೆ ಮುಂಡೇರಾ ಮೂಟೆ ಹೊಲಸೋರಂತೆ ಬನ್ನಿ!'[೨] ಎಂದು ಆಹ್ವಾನಿಸಿದಳಂತೆ. ಇಂಥಹ ಪದಗಳನ್ನು ಅಭ್ಯಾಸದಿಂದ ನಮ್ಮನ್ನು

೧-೨. ಸಂ. ತಾ.ರಾ. ನಾಗರಾಜ್, ಸ.ಲ.ಪ್ರ. ಅ.ರಾ.ಮಿತ್ರ. ಪ್ರ: 'ಹೀನಸುಳಿ, ಪು-೨೪೮, ೨೫೩

ಆವರಿಸಿಕೊಂಡು ನಮ್ಮ ವ್ಯಕ್ತಿತ್ವದ ಮೇಲೆ ಪ್ರಭಾವ ಬೀರುತ್ತವೆ. ಜಗಳವಿಲ್ಲದ ಜಾವಗಲ್ಲಿಗೆ ಹೋಗುತ್ತೀನಿ ಎನ್ನುವಾಗ ತನ್ನ ಕಲ್ಪನೆಯಲ್ಲಿ ಆಕೆಗೆ ತಾನಾಡುವ ಮಾತು ಬೈಗುಳಗಳಾಗಿ ಕಾಣದೇ ಇರುವುದು ದುರದೃಷ್ಟಕರ. ಈ ಸ್ವಭಾವದವರು ತಮ್ಮ ಮಾತಿನಲ್ಲಿ ಬದಲಾವಣೆ ತಂದುಕೊಳ್ಳುವುದು ಸೂಕ್ತ. ಕೆಟ್ಟಗುಣಗಳು ನಮ್ಮನ್ನು ಇತರರೊಂದಿಗೆ ದೂರವಿಡುವ ಸಂದರ್ಭ ಹೆಚ್ಚು ಸೂಕ್ತ.

ಮನುಷ್ಯ ಯಶಸ್ಸನ್ನು ಗಳಸುವ ಹಾದಿಯಲ್ಲಿ ಹಲವಾರು ತಪ್ಪುಗಳನ್ನು ಎಸಗುತ್ತಾನೆ. ಅಂಥಹ ಸಂದರ್ಭದಲ್ಲಿ ಇತರರು ನಮ್ಮನ್ನು ಕುಹಕು ನುಡಿಗಳಿಂದ ನಿಂದಿಸುತ್ತಿರುತ್ತಾರೆ. ಅಂಥಹವರ ಮಾತಿಗೆ ಕಿವಿಕೊಡದೆ ಅವರ ನಿಂದನೆ ಸ್ತುತಿಗಳಿಗೆ ಗಮನ ನೀಡದೆ ತನ್ನ ಗುರಿಕಡೆಗೆ ಸಾಗಿದಾಗ ಸಾಧನೆಯನ್ನು ಗಳಿಸಲು ಸಾಧ್ಯ. 'ನಿಂದಕರಿರಬೇಕು ಹಂದಿಯ ಹಾಗೆ' ಎನ್ನುವಂತೆ ಇಂಥವರಾಡುವ ಮಾತುಗಳಿಂದ ನಮ್ಮನ್ನು ನಾವು ವಿಮರ್ಶೆಗೊಳಪಡಿಸಿಕೊಂಡು ಯಶಸ್ಸಿನ ಕಡೆ ಸಾಗಬೇಕು ಎಂಬುದನ್ನು 'ನಡೆವರೆಡಹದೆ' ಎಂಬ ಪ್ರಬಂಧದಲ್ಲಿ ನೋಡಬಹುದು. ಮೊದಲಿಗೆ ರಾಘವಾಂಕ ಪದ್ಯದಲ್ಲಿ ಬರುವ ಸಾಲನ್ನೇ ತಮ್ಮ ಪ್ರಬಂಧದ ಶೀರ್ಷಿಕೆಯಾಗಿಟ್ಟುಕೊಂಡು ನಿಂದಕ ಸ್ವಭಾವದವರನ್ನು ಗೇಲಿ ಮಾಡುತ್ತಾ ಮುಂದೆ ಸಾಗುತ್ತಾರೆ. ಸಾಧನೆ ಹಾದಿಯಲ್ಲಿರುವವರಿಗೆ ಇವರ ಮಾತುಗಳು ಸ್ಫೂರ್ತಿಯಾಗುತ್ತವೆ. ರಾಘವಾಂಕ ಹೇಳುವಂತೆ ನಡೆವರೆಡಹದೆ ಎಂಬುದು ಕ್ರಿಯಾಶೀಲತೆಯ ಸಂಕೇತ. ಕ್ರಿಯಾಶೀಲರಾದವರು ತಪ್ಪು ಮಾಡುವುದು ಸಹಜ ಅಂಥಹ ಸಂದರ್ಭದಲ್ಲಿ ಕ್ರಿಯಾಶೂನ್ಯರ ಮಾತಿಗೆ ಕಿವಿಗೊಡದೆ ಮುನ್ನಡೆಯುತ್ತಿರಬೇಕು. ಪ್ರಗತಿಶೀಲರು ಮತ್ತು ಪ್ರತಿಗಾಮಿ ವರ್ಗದವರು. ಈ ಸಮಾಜದಲ್ಲಿ ಇದ್ದು ಪ್ರಗತಿಶೀಲರು ಸದಾ ಪ್ರತಿಗಾಮಿಗಳಿಗೆ ವಿರೋಧಿಗಳಾಗಿಯೇ ಕಾಣುತ್ತಾರೆ. ಇಂಥವರು ಕ್ರಿಯಾಶೂನ್ಯರು. ರಾಘವಾಂಕನೆ ಇಂಥವರ ಬಗ್ಗೆ ತಲೆಕೆಡಿಸಿಕೊಳ್ಳಬೇಕಾಗಿಲ್ಲ ಎಂದಿದ್ದಾನೆ.

ಬೆಳೆಯ ಜೊತೆ ಬರುವ ಕಳೆಯನ್ನು ಕಿತ್ತೆಸುವಂತೆ ನಿಂದಕರ ಮಾತುಗಳನ್ನು ಮನಸ್ಸಿನಿಂದ ಕಿತ್ತೆಸೆಯಬೇಕು. ಈ ನಿಂದಕರು ಸಾಧನೆ ಹಾದಿಯಲ್ಲಿರುವವರ ಕಾಲನ್ನು ಸದಾ ಎಳೆಯುತ್ತಿರುತ್ತಾರೆ. 'ಕೈಲಾಗದವನು ಮೈ ಪರಚಿಕೊಂಡ' ಎಂಬಂತೆ ತಾವು ಮುಂದೆ ಬರದೆ ಇತರರು ಮುಂದೆ ಬಂದರೆ ಸಹಿಸದ ಜನಗಳಿರುತ್ತಾರೆ. ಇಂಥವರ ನಿಂದನೆ ಮೊಸರಿನಲ್ಲಿ ಕಲ್ಲು ಹುಡುಕುವ ಕೆಲಸದಂತಿರುತ್ತದೆ. ಇಂಥವರ ಮಾತುಗಳಿಗೆ ಲಕ್ಷವಿಡದೆ ದೃಢಮನಸ್ಸಿನಿಂದ ಮುಂದುವರೆಯಬೇಕು. ಆಗ ಯಶಸ್ಸು ನಮ್ಮದಾಗುತ್ತದೆ.

ದುರ್ಬಲ ಮನಸ್ಸುಳ್ಳ ವ್ಯಕ್ತಿಗಳು ದೃಢವಾದ ನಿರ್ಧಾರವನ್ನು ಕೈಗೊಳ್ಳದೆ ಇಂದು ಮಾಡಬೇಕಾದ ಕೆಲಸವನ್ನು ಮುಂದೂಡುತ್ತಾ ಕಾಲಕಳೆಯುತ್ತಿರುತ್ತಾರೆ. ತಾವು ಅಂದುಕೊಂಡಂತೆ ನಡೆಯದೆ ಜೀವನ ಸಾಗಿಸುವ ವ್ಯಕ್ತಿಗಳ ಬದುಕು ನೀರಿನ ಮೇಲಿನ ಬರಹದಂತೆ ಡೋಲಾಯಮಾನವಾಗಿರುತ್ತದೆ. ಇಂಥ ದುರ್ಬಲ ವ್ಯಕ್ತಿತ್ವಉಳ್ಳವರನ್ನು 'ಹೊಸವರ್ಷದ ಸಂಕಲ್ಪ' ಪ್ರಬಂಧದಲ್ಲಿ ಕಾಣಬಹುದು. ಹೊಸವರ್ಷ ಬಂತೆಂದರೆ ಸಾಕು ಹೊಸ

ಡೈರಿಯನ್ನು ಕೊಂಡು ಇನ್ನುಮುಂದೆ ಮಾಡಬಾರದು ಎಂದುಕೊಂಡಂತ ಸಂಗತಿಗಳನ್ನು, ಮುಂದೆ ಮಾಡಬೇಕಾದಂತ ಕಾರ್ಯಗಳ ಬಗ್ಗೆ ಬರೆದಿಡುವ ನಿರ್ಧಾರವನ್ನು ಮಾಡುತ್ತಾರೆ. ಆದರೆ ಅವು ಇಂದಿನ ರಾಜಕಾರಣಿಗಳ ಮಾತಿನಿಂದ ಹುಸಿಯಾಗಿ ಬಿಡುತ್ತವೆ. ಇದಕ್ಕೆ ಕಾರಣ ವ್ಯಕ್ತಿಯ ದುರ್ಬಲ ಮನಸ್ಸು. ಏಕೆಂದರೆ "ಡೈರಿಯಲ್ಲಿ ಬರೆಯುವ ಸಂಕಲ್ಪಗಳೆಲ್ಲವೂ ಹೇಗಿರುತ್ತವೆಂದರೆ ಹಳೆಯ ಡೈರಿಯ ಹೊಸ ಸಂಕಲ್ಪಗಳು ಕಾಲುಜ್ಜಿಕೊಂಡು ಸಲ್ಯೂಟ್ ಮಾಡುತ್ತಾ ಸಾಗಿದವು"[೧] ಎಂದು ಲೇಖಕರು ತಮ್ಮ ಸಂಕಲ್ಪದ ಕತೆಯನ್ನು ಹೇಳಿದ್ದಾರೆ. ಹೊಸ ಡೈರಿಯಲ್ಲಿ ಹಳೆ ವಿಷಯಗಳೆ ಪುನರಾವರ್ತನೆಯಾಗುವುದು ವಿಷಾದದ ಸಂಗತಿ. ಇನ್ನು ಮುಂದೆ ಸಿಗರೇಟು ಸೇದುವುದಿಲ್ಲ, ಮಧ್ಯಪಾನ ಮಾಡುವುದಿಲ್ಲ, ಹೆಂಡತಿ ಮಕ್ಕಳೊಡನೆ ಜಗಳವಾಡುವುದಿಲ್ಲ ಎಂದು ಡೈರಿಯಲ್ಲಿ ಬರೆದು, ಮಾಡಬಾರದು ಎಂದು ನಿರ್ಧರಿಸಿದ ಕೆಲಸಗಳನ್ನೇ ಮತ್ತೆ ಮುಂದುವರಿಸಿಕೊಂಡು ಹೋಗುವುದು ಆತ್ಮವಿಶ್ವಾಸ ಮತ್ತು ದೃಢನಿರ್ಧಾರದ ಕೊರತೆಯಿಂದ ಎನ್ನಬಹುದು. "ಮಣ್ಣಿನ ಕಣಜವನ್ನು ಹೆಚ್ಚು ಹೆಚ್ಚು ತುಳಿಯುತ್ತಾ ಹೋದಂತೆ ಕೆಸರು ಹೆಚ್ಚಾಗುವಂತೆ"[೨] ನಮ್ಮ ಸಂಕಲ್ಪಗಳು ಹೆಚ್ಚುತ್ತಿವೆಯೇ ಹೊರತು ಅವು ಕಾರ್ಯರೂಪುಗೊಳ್ಳುತ್ತಿಲ್ಲ.

ದೇಹ ಮತ್ತು ಮನಸ್ಸುಗಳು ವ್ಯಕ್ತಿಯ ಮೇಲೆ ಪ್ರಭಾವ ಬೀರುತ್ತದೆ. ದೇಹ ಮನಸ್ಸು ಮಾಡಬಾರದು ಎಂದು ನಿರ್ಧರಿಸಿದ ವಿಷಯದ ಕಡೆಗೆ ದೇಹ ವಾಲುತ್ತದ. ದೃಢ ದುರ್ಬಲ ವ್ಯಕ್ತಿಗಳಲ್ಲಿ ದೇಹದ ವರ್ತನೆಗೆ ಮನಸ್ಸು ಹೊಂದಿಕೊಂಡು ಬಿಡುತ್ತದೆ. ದೇಹವನ್ನು ನಿಯಂತ್ರಿಸಬೇಕಾದ ಮನಸ್ಸು ದುರ್ಬಲವಾಗಿದ್ದಾಗ ಈ ಮೇಲಿನ ಸನ್ನಿವೇಶ ಕಾಣಿಸಿಕೊಳ್ಳುತ್ತದೆ. ಇಂಥವರು ದೃಢವಾದ ತೀರ್ಮಾನವನ್ನು ತೆಗೆದುಕೊಂಡು ದೇಹದ ಮನಸ್ಸುಗಳ ಮೇಲೆ ನಿಯಂತ್ರಣ ಸಾಗಿಸಬೇಕು. ಸಿಗರೇಟಿನ ರೇಟು ಹೆಚ್ಚಿದರು ಮನಸ್ಸು ಸಿಗರೇಟು ಬಿಡಲಿಲ್ಲದು ಎಂದು ಸಿಗರೇಟಿನ ಚಟದ ಬಗ್ಗೆ ಹೇಳುವ ಮಾತು ಅರ್ಥಪೂರ್ಣವಾಗಿದೆ.

ಸಿಗರೇಟು ಬಿಡಬೇಕೆಂಬ ತೀರ್ಮಾನಕ್ಕೆ ಬರುತ್ತಾರೆ ಆದರೆ ಯಾರಾದರೂ ಸ್ನೇಹಿತರ ಎದುರಿಗೆ ಬಂದು ಸಿಗರೇಟು ನೀಡಿದಾಗ ಬೇಡ ಎನ್ನಲಾಗದೆ ಮನಸ್ಸು ಸಿಗರೇಟಿನ ಕಡೆ ವಾಲಿಬಿಡುತ್ತದೆ. ಆಗ ಮತ್ತೊಂದು ಮರಿ ಸಂಕಲ್ಪ ಹುಟ್ಟಿಕೊಳ್ಳುತ್ತದೆ. ಇನ್ನು ಮುಂದೆ ದುಡ್ಡುಕೊಟ್ಟು ಸೇದಬಾರದು ಯಾರಾದರು ಕೊಡಿಸಿದರೆ ಸೇದುವ ಎಂದು ಕೊಳ್ಳುತ್ತಾರೆ. ಯಾರು ಸಿಗದಿದ್ದಾಗ, ಒಂದನ್ನು ದುಡ್ಡು ಕೊಟ್ಟು ಸೇದಿದರಾಯಿತು ಎಂಬ ಒಳ ಒಪ್ಪಂದಕ್ಕೆ ಮನಸ್ಸು ಜಾರಿಕೊಂಡು ಬಿಡುತ್ತದೆ ಮುಂದೆ ಮೊದಲಿಗಿಂತಲೂ ಹೆಚ್ಚಾಗಿ ಸಿಗರೇಟಿಗೆ ದಾಸರಾಗುವುದನ್ನು ಹೇಳಿದ್ದಾರೆ. ಅದೇ ರೀತಿ ಕುಡಿತದ ಚಟಕ್ಕೆ ಕೆಲವರು ಹಲವು ಕಾರಣಗಳನ್ನು ಹೇಳುತ್ತಾರೆ. ಈ ಕುಡಿತದ ಕಾರಣಕ್ಕೆ ನೆಪವನ್ನು ಹೇಳುವುದನ್ನು ನೋಡಿದರೆ ಆಶ್ಚರ್ಯವಾಗುತ್ತದೆ ! ಒಬ್ಬರು ದುಃಖ ಮರೆಯಲು ಕುಡಿದರೆ ಮತ್ತೆ ಕೆಲವರು ಸಂತೋಷಕ್ಕಾಗಿ, ನೋವಿಗಾಗಿ, ಎಂದು ಕಾರಣ ನೀಡುತ್ತಾರೆ. ಒಬ್ಬ ಮಹಾಪುರುಷನ ಕಾರಣವಂತು

೧-೨ ಸಂ. ತಾ.ರಾ. ನಾಗರಾಜ್, ಸ.ಲ.ಪ್ರ. ಅ.ರಾ.ಮಿತ್ರ. ಪ್ರ: 'ಹೊಸವರ್ಷದ ಸಂಕಲ್ಪಗಳು', ಪು-೩೯೯-೪೦೦

ನಗುತರಿಸುತ್ತದೆ. 'ಇಷ್ಟು ಕಾಲದವರೆಗೆ ನನ್ನ ಜತೆ ಗೆಳೆತನ ಸ್ಥಾಪಿಸಿಕೊಂಡಿದ್ದ ಕುಡಿತದ ಅಭ್ಯಾಸವನ್ನು ನಿರಾಶೆಗೊಳಿಸುವುದು ಹೇಗೆ ಎಂಬ ಚಿಂತೆ ಕಾಡಿದ್ದರಿಂದ ಆತ ಶರಣಾದನಂತೆ'![೧] ಹೀಗೆ ಹಲವು ಕಾರಣಗಳನ್ನು ನೆಪಮಾಡಿಕೊಂಡು ಕುಡಿತಕ್ಕೆ ದಾಸರಾಗುವ ಮಂದಿ ನಮ್ಮ ಸಮಾಜದಲ್ಲಿ ಹಲವರಿದ್ದಾರೆ. ಇವರಲ್ಲಿ ದೃಢನಿರ್ಧಾರದ ಕೊರತೆ ಇದ್ದು ತಮ್ಮ ಸಂಕಲ್ಪಗಳು ಕೇವಲ 'ಬಿಳಿಹಾಳೆಯ ಮೇಲೆ ಕಪ್ಪು ಮಸಿಯಲ್ಲಿ ಇಳಿಯುತ್ತಿವೆ ಹೊರತು ಮನಸ್ಸಿನಲ್ಲಿ ಇಳಿಯುತ್ತಿಲ್ಲ'. ಇಂಥಹ ದುರ್ಬಲ ವ್ಯಕ್ತಿಗಳ ಗುಣಸ್ವಭಾವ ಈ ಪ್ರಬಂಧದಲ್ಲಿ ಅನಾವರಣಗೊಳ್ಳುತ್ತದೆ.

4.1.2 ಸರ್ಕಾರ ಮತ್ತು ಆಡಳಿತ ವ್ಯವಸ್ಥೆ :

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಶಾಸಕಾಂಗ ಮತ್ತು ಆಡಳಿತಾಂಗ ಸರಿಯಾಗಿ ಕಾರ್ಯನಿರ್ವಹಿಸಿದಾಗ ಮಾತ್ರ ಉತ್ತಮ ಸಮಾಜ ನಿರ್ಮಾಣ ಸಾಧ್ಯ. ಆದರೆ ಪ್ರಸಕ್ತ ರಾಜಕಾರಣವನ್ನು ಗಮನಿಸಿದರೆ ಪ್ರಜಾಪ್ರಭುತ್ವದ ಮೇಲೆ ಅನುಮಾನ ಮಾಡತೊಡಗುತ್ತದೆ 'ಪ್ರಜೆಗಳಿಂದ ಪ್ರಜೆಗಳಿಗೋಸ್ಕರ ಪ್ರಜೆಗಳೆ ನಡೆಸುವ ಸರ್ಕಾರವೆ ಪ್ರಜಾಪ್ರಭುತ್ವ' ಎಂದು ಅಬ್ರಾಹಿಂಲಿಂಕನ್ ಹೇಳಿದ್ದಾರೆ. ಆದರೆ ಇಂದು 'ದುಡ್ಡಿರುವವರು ದುಡ್ಡಿಗಾಗಿ ದುಡ್ಡಿಗೋಸ್ಕರ ನಡೆಸುತ್ತಿರುವ ಸರ್ಕಾರವೆ ಪ್ರಜಾಪ್ರಭುತ್ವ' ಎನ್ನುವ ಪರಿಸ್ಥಿತಿ ನಿರ್ಮಾಣವಾಗಿದೆ. ಹಣಗಳಿಸುವ ಉದ್ದೇಶದಿಂದ ಏನೆಲ್ಲಾ ಮಾಡಬಾರದ ಕೆಲಸವನ್ನು ನಮ್ಮ ಸರ್ಕಾರ ನಡೆಸುವ ಪ್ರತಿನಿಧಿಗಳು ಮತ್ತು ಸರ್ಕಾರಿ ಅಧಿಕಾರಿಗಳು ಮಾಡುತ್ತ, ಲಂಗು ಲಗಾಮಿಲ್ಲದೆ ಸ್ವಹಿತ ಕಾರ್ಯ ಸಾಧನೆಯಲ್ಲಿ ತೊಡಗಿರುವುದು ಕಾಣಿಸುತ್ತದೆ.

ಹಣಗಳಿಸುವ ಉದ್ದೇಶದಿಂದ ರಾಜಕೀಯಕ್ಕೆ ಬರುವವರ ಸಂಖ್ಯೆ ಇಂದು ದಿನೆ ದಿನೆ ಹೆಚ್ಚುತ್ತಿದೆ ಹೊರತು ಪ್ರಜೆಗಳ ಹಿತ ಕಾಪಾಡುವ ಯುವ ಉದ್ದೇಶವು ಇಂದಿನ ಯಾವ ರಾಜಕಾರಣಿಗಳಿಗೂ ಇದ್ದಂತಿಲ್ಲ. ಕೇವಲ ಜನರಿಗೆ ಭರವಸೆಯನ್ನು ನೀಡುತ್ತಾ ಜನರ ಮೂಗಿಗೆ ತುಪ್ಪಸವೆರುವ ಕೆಲಸ ಮಾಡುತ್ತಿದ್ದಾರೆ. ಸರ್ಕಾರಿ ಅಧಿಕಾರಿಗಳು ಸಹ ನಾವೇನು ಕಮ್ಮಿ ಇಲ್ಲ ಎಂಬಂತೆ ದುರ್ಮಾರ್ಗದ ಮೂಲಕ ಹಣಗಳಿಸುತ್ತಿದ್ದಾರೆ. ಇಂಥಹ ಮನೋಭಾವದವರು ಸಮಾಜಕ್ಕೆ ಹೇಗೆ ಮಾರಕವಾಗಿದ್ದಾರೆ ಎಂಬುದನ್ನು 'ಕಿರುದಾರಿಗಳಿವೆ-ಎಚ್ಚರಿಕೆ', 'ನನ್ನ ಯಶಸ್ಸಿನ ಗುಟ್ಟು', 'ಗೊರಕೆ', 'ಪವಡಿಸು ಪರಮಾತ್ಮ', ಪ್ರಬಂಧಗಳಲ್ಲಿ ನೋಡಬಹುದು. ಪ್ರಬಂಧಗಳಲ್ಲಿ ರಾಜಕೀಯ ವ್ಯಕ್ತಿಗಳ ಮತ್ತು ಸರ್ಕಾರಿ ಅಧಿಕಾರಿಗಳು ಜನರೊಂದಿಗೆ ಹೇಗೆ ನಡೆದುಕೊಳ್ಳುತ್ತಾರೆ, ಮೋಸಗೊಳಿಸುತ್ತಾರೆ ಎಂಬಂಥ ಅಂಶಗಳು ಕಾಣಿಸಿಕೊಳ್ಳುತ್ತವೆ.

ರಾಜಕಾರಣಿಗಳು ಉತ್ತರ ಕುಮಾರನ ಸ್ವಭಾವದವರಾಗಿದ್ದು ಜನರನ್ನು ಸುಳ್ಳಿನ ಭರವಸೆಯ ಮೂಲಕ ವಂಚಿಸುತ್ತಿದ್ದಾರೆ. 'ಚುನಾವಣಾ ಭರವಸೆಗಳನ್ನು ಸಾರ್ವಜನಿಕ ಸಭೆಗಳಲ್ಲಿ ಮೊಳಗಿಸುವ ರಾಜಕಾರಣಿಗಳು ಈ ಸಂತಾನದವರೇ. 'ತಮ್ಮ ಎಣ್ಣೆ ಇಲ್ಲದ ದೀಪವನ್ನು ಅಲ್ಲಾವುದ್ದೀನನ ಅದ್ಭುತ ದೀಪ ಎಂದು ಇವರು ಪ್ರಚಾರ ಮಾಡುತ್ತಾರೆ.

೧-೨. ಸಂ. ತಾ.ರಾ. ನಾಗರಾಜ್, ಸ.ಲ.ಪ್ರ. ಅ.ರಾ.ಮಿತ್ರ. ಪ್ರ: 'ಹೊಸವರ್ಷದ ಸಂಕಲ್ಪಗಳು', ಪು-೮೦೩

ಮುಂಗೈಯಲ್ಲೆ ಸ್ವರ್ಗವನ್ನು ತೋರಿಸುತ್ತಾರೆ'[೧] ಎಂಬುದನ್ನು ಉತ್ತರಕುಮಾರರು ನಮ್ಮ ಸುತ್ತಮುತ್ತ ಎಂಬ ಪ್ರಬಂಧದಲ್ಲಿ ವಿಡಂಬಿಸುತ್ತಾರೆ. ಇಂಥಹ ಮಹಾಪೂರ ಭರವಸೆಗಳನ್ನು ಜನರಿಗೆ ನೀಡುತ್ತಾ ತಮ್ಮ ಬೇಳೆ ಬೇಯಿಸಿಕೊಳ್ಳುತ್ತಿರುವ ರಾಜಕಾರಣಿಗಳು ಇಲ್ಲದಿರುವ ಸ್ವರ್ಗವನ್ನು ತಮ್ಮ ಮುಂದೆ ಕಣ್ಣಿಗೆ ಕಟ್ಟುತ್ತಾ ಜನರ ಕಣ್ಣನ್ನು ಮುಚ್ಚುತ್ತಿದ್ದಾರೆ. ತಮ್ಮ ದೀಪದಲ್ಲಿ ಎಣ್ಣೆ ಇಲ್ಲ ಎಂಬ ಅರಿವು ರಾಜಕಾರಣಿಗೆ ತಿಳಿದಿಲ್ಲದಿರುವುದು ವಿಷಾದದ ಸಂಗತಿ. ಭರವಸೆಯನ್ನು, ಆಶ್ವಾಸನೆಗಳನ್ನು ಕಾರ್ಯಗತಗೊಳಿಸದೆ ಜನರನ್ನು ತಪ್ಪುದಾರಿಗೆ ಎಳೆಯುತ್ತಿರುವ ರಾಜಕಾರಣಿಗಳು ಉತ್ತರಕುಮಾರರಾಗಿ ಕಾಣಿಸುತ್ತಾರೆ.

ಇಂಥಹ ಉತ್ತರಕುಮಾರರು ಜನಗಳ ಸಂಕಷ್ಟವನ್ನು ಬಗೆಹರಿಸದೆ ನಿದ್ರಾಸ್ಥಿತಿಗೆ ಜಾರಿರುವುದು 'ಗೊರಕೆ' ಪ್ರಬಂಧದಲ್ಲಿ ಗೋಚರವಾಗುತ್ತದೆ. ಜನರ ಸಮಸ್ಯೆಯನ್ನು ಬಗೆಹರಿಸಲೆಂದು ಆಯ್ಕೆಯಾಗುವ ಜನಪ್ರತಿನಿಧಿಗಳು ಇಂದು ಮಾಡುತ್ತಿರುವುದೇನು ? ಗೊರಕೆ ಹೊಡೆಯುತ್ತಿರುವವನಿಗೆ ತಾನು ಇನ್ನೊಬ್ಬರಿಗೆ ತೊಂದರೆ ನೀಡುತ್ತಿರುವುದು ತಿಳಿಯದೆ ನಿದ್ರಿಸುತ್ತಿರುವವನ ಹಾಗೆ ರಾಜಕಾರಣಿಗಳು ತಮ್ಮ ನಿಲುವುಗಳಿಂದ ತೀರ್ಮಾನಗಳಿಂದ ಬೇರೆಯವರಿಗೆ ತೊಂದರೆಯಾಗುವುದನ್ನು ತಿಳಿಯದೆ ತಮ್ಮ ಕಾರ್ಯ ಸಾಧನೆಯಲ್ಲಿ ತೊಡಗಿದ್ದಾರೆ. ಜನರ ಸಮಸ್ಯೆಯನ್ನು ಬಗೆಹರಿಸಲು ಪಾರ್ಲಿಮೆಂಟ್‌ಗಳಲ್ಲಿ ಚರ್ಚಿಸದೆ ಕಾಲಾಪೇಕ್ಷೆಯಲ್ಲಿ ಮುಳುಗಿ ಕೆಲಸಕ್ಕೆ ಬಾರದ ಸಂಗತಿಗಳನ್ನು ಚರ್ಚಿಸುತ್ತಿರುತ್ತಾರೆ 'ಪ್ರಗತಿಯ ದೀರ್ಘ ನಿದ್ರೆಯಲ್ಲಿರುವ ಸಂದರ್ಭಗಳಲ್ಲಿ ಭಾಷಣದ ಗೊರಕೆ ಎಷ್ಟು ಜೋರಾಗಿ ಸಾಗುತ್ತಿದೆ'[೨] ಭಾಷಣ ಗೊರಕೆಯಂತೆ ಬರಿ ಶಬ್ಧವನ್ನು ಹೊರಡುತ್ತಿದೆ ಹೊರತು, ಅದು ಸಾಮಾಜಿಕ ಸಮಸ್ಯೆಗಳನ್ನು ಬಗೆಹರಿಸುವ ಕಡೆ ಗಮನಹರಿಸುತ್ತಿಲ್ಲ. ರಾಜಕಾರಣಿಗಳಿಗೆ ಪ್ರಜಾಪ್ರಭುತ್ವ ಇರುವವರೆಗೂ ಇಂಥ ರಾಜಕಾರಣಿಗಳಿಗೆ ಸ್ಥಾನ ಭ್ರಷ್ಟತೆಯ ಹೆದರಿಕೆಯೂ ಇಲ್ಲ (126) ಎನ್ನುವಾಗ ರಾಜಕಾರಣಗಳ ಜಡಮನೋಧೋರಣೆ ಸಮಾಜವನ್ನು ಅಧಃಪತನದೆಡೆಗೆ ಕೊಂಡೊಯ್ಯುತ್ತಿರುವುದು ಕಾಣಿಸಿಕೊಳ್ಳುತ್ತದೆ.

'ನಾಂಪ ನಾಂಪಿ' ಪ್ರಬಂಧದಲ್ಲಿ ಪ್ರಸಕ್ತ ಮೂಲಭೂತ ಅಗತ್ಯವಸ್ತುಗಳ ಬೆಲೆ ಹೆಚ್ಚಾಗುತ್ತಿದ್ದರು ಅದರ ಕಡೆ ಗಮನಕೊಡದ ಸರ್ಕಾರ ನಿದ್ರಿಸುವ ಸ್ಥಿತಿಯಲ್ಲಿದೆ ಅದನ್ನು ಎಚ್ಚರಿಸುವ ಕೆಲಸವನ್ನು ಚಳುವಳಿಯ ಮೂಲಕ ಮಾಡಿ ಅದಕ್ಕೆ ಬಿಸಿಮುಟ್ಟಿಸುವ ಅಗತ್ಯವಿದೆ ಎಂಬುದನ್ನು ತಿಳಿಸುತ್ತಾರೆ. 'ಸರ್ಕಾರ ಅನ್ನೋದು ತಂಪುರಕ್ತದ ಪ್ರಾಣಿ'[೩] ಎನ್ನುವಾಗ ತಂಪು ರಕ್ತ ಎನ್ನುವಾಗ ಬಹುಶಃ ಅದು ನಿರ್ಜೀವ ದೇಹದ ರಕ್ತದಂತೆ, ಕ್ರಿಯೆಯನ್ನು ಕಳೆದುಕೊಂಡ 'ಸತ್ತ' ಸ್ಥಿತಿಯಲ್ಲಿದೆ ಎಂಬುದನ್ನು ತಿಳಿಸುತ್ತದೆ. ಇಂತಹ ಸರ್ಕಾರದ ಆಡಳಿತ ವ್ಯವಸ್ಥೆ ಬದಲಾಗಬೇಕಿದೆ ರಾಜಕೀಯ ವ್ಯಕ್ತಿಗಳು ಸರ್ಕಾರಗಳು ಸಾಮಾಜಿಕ ಕಳಕಳಿಯನ್ನು ಬೆಳೆಸಿಕೊಳ್ಳುವ ಅಗತ್ಯವಿದೆ.

---

೧. ಸಂ. ತಾ.ರಾ. ನಾಗರಾಜ್, ಸ.ಲ.ಪ್ರ. ಅ.ರಾ.ಮಿತ್ರ. 'ನಮ್ಮ ಉತ್ತರಕುಮಾರರು ಸುತ್ತಮುತ್ತ', ಪು-೧೫

೨. ಪ್ರ-ಗೊರಕೆ ಪು-೧೨೭.

೩. ಪ್ರ-ನಾಂಪ ನಾಂಪಿ-ಪು೯೭

ಸರ್ಕಾರಿ ಆಡಳಿತ ವ್ಯವಸ್ಥೆಯು ಬೇಸರ ಹುಟ್ಟಿಸುವಂತಿದ್ದು ಆರೋಗ್ಯಕರ ಸಮಾಜಕ್ಕೆ ವಿಷವರ್ತುಲವಾಗಿ ಸರ್ಕಾರಿ ಅಧಿಕಾರಿಗಳು ಕಾಣಿಸಿಕೊಳ್ಳುತ್ತಿದ್ದಾರೆ. ಇದು ಎಲ್ಲಾ ಇಲಾಖೆಯಲ್ಲಿ ಕಾಣಿಸಿಕೊಳ್ಳುತ್ತಿದ್ದು ಜನದುರ್ಮಾಗದ ಮೂಲಕ ಹಣ ಗಳಿಸಲು ಅನ್ಯದಾರಿಯನ್ನು ಹಿಡಿಯುತ್ತಿದ್ದಾರೆ ಇದನ್ನು 'ಕಿರುದಾರಿಗಳಿವೆ-ಎಚ್ಚರಿಕೆ'. 'ನನ್ನ ಯಶಸ್ಸಿನ ಗುಟ್ಟು' ಪ್ರಬಂಧಗಳಲ್ಲಿ ಗುರುತಿಸಬಹುದು. ನಮ್ಮ ಶಿಕ್ಷಣ ವ್ಯವಸ್ಥೆಯು ಅನ್ಯದಾರಿ ಹಿಡಿದು ಸಮಾಜದ ಭವಿಷ್ಯದ ನಿರ್ಮಾತೃಗಳಾದ ವಿದ್ಯಾರ್ಥಿಗಳನ್ನು ದಾರಿತಪ್ಪಿಸುವುದು ಇಲ್ಲಿ ಗೋಚರವಾಗುತ್ತದೆ. 'ಸಂಜೆ ಹೊತ್ತಿಗೆ ಮೂರು ಮೊಳ ನೇಯಿ' ಎನ್ನುವ ಸ್ವಭಾವದವರಾಗಿದ್ದಾರೆ. ಮನೋಭಾವ ಇಂದಿನ ಜನಾಂಗದವರದು ಹೆತ್ತ ತಂದೆ ತಾಯಿಗಳು ವಿದ್ಯಾರ್ಥಿಗಳೂ ಕೂಡ ಕೇವಲ ಪದವಿ ಪಡೆದರೆ ಸಾಕು ಎನ್ನುವ ಮನೋಭಾವದವರಾಗಿದ್ದಾರೆ. ಇಂತಹವರಿಗೆ ಸಹಾಯ ಮಾಡಲೆಂದೆ ಶಿಕ್ಷಣ ಸಂಸ್ಥೆಗಳು ಹುಟ್ಟಿಕೊಂಡು ಹಣಕ್ಕಾಗಿ ಪದವಿಯನ್ನು ನೀಡಲು ನಾ ಮುಂದು ತಾ ಮುಂದು ಎಂದು ನಿಂತಿರುವುದನ್ನೆ ಇಲ್ಲಿ ನೋಡುತ್ತೇವೆ. ಹಣ ಒಂದಿದ್ದರೆ I.A.S. ಬೇಕಾದರು ಪಾಸ್ ಮಾಡಬಹುದಾದ ಒಂದು ವ್ಯವಸ್ಥೆ ಇದೆ ಅಂದ ಮೇಲೆ ನಮ್ಮ ಆಡಳಿತ ವ್ಯವಸ್ಥೆಯ ಅಧಿಕಾರಿಗಳು ಹೇಗೆ ಕಾರ್ಯನಿರ್ವಹಿಸುತ್ತಿದ್ದಾರೆ ಎಂಬುದು ತಿಳಿಯುತ್ತದೆ. ಅದೇ ರೀತಿ ಹಣಕ್ಕಾಗಿ ಮನೆಪಾಠ ಮಾಡುವೆ, ವಿದ್ಯಾರ್ಥಿಗಳಿಗೆ ಕಾಫಿ ಹೊಡೆಯಲು ಅನುಕೂಲ ಮಾಡಿಕೊಡುವ ಶಿಕ್ಷಕರ ವರ್ಗ ಒಂದು ಕಡೆಯೆಂದರೆ ಪದವಿ ನೀಡಲು ಸಾಲು ಸಾಲಿನಲ್ಲಿ ನಿಂತಿರುವ ವಿದ್ಯಾಸಂಸ್ಥೆಗಳು ಸಮಾಜದಕ್ಕೆ ಕಂಟಕವಾಗಿರುವುದನ್ನು ಕಾಣುತ್ತೇವೆ. ಇಂತಹ ಅಂಶಗಳು 'ಮೂರುಗಂಟೆಗಳು' ಪ್ರಬಂಧಗಳಲ್ಲಿ ಕಾಣಿಸಿಕೊಳ್ಳುತ್ತವೆ.

ಶ್ರೀ ಶಿಲ್ಪಾಚಾರ್ ಲೋಕೋಪಯೋಗಿ ಇಲಾಖೆಯಲ್ಲಿದ್ದು, ಹೈ ಕೋರ್ಟ್ ನ್ಯಾಯಾಧೀಶರ ಖರ್ಚಾಗದ ಮಗಳನ್ನು ಮದುವೆಯಾಗಿ ತಣ್ಣಗಿರುವ ಕೈಗಳನ್ನು ಬೆಚ್ಚಗೆ ಮಾಡಿ ಮೆಟ್ಟಿಲು ಹತ್ತಿ ಮಹಡಿ ಏರಲಾಗದೆ ಲಿಫ್ಟ್‌ನಲ್ಲಿ ಮೇಲೇರಿದ ರೀತಿಯನ್ನು ಹೇಳುತ್ತಾನೆ. ತನ್ನ ಕುಟುಂಬದ ನಾಲ್ಕೈದು ತಲೆಮಾರು ತಿನ್ನುವಷ್ಟು ಹಣಗಳಿಸಿದ್ದಾನೆ. ಪ್ರೊ॥ ನಳಂದಯ್ಯ ಶಿಕ್ಷಣ ಇಲಾಖೆಯವನಾಗಿದ್ದು ಪ್ರಶ್ನೆಪತ್ರಿಕೆಗಳನ್ನು ಓದದ ಹೊರರಾಜ್ಯದ ವಿದ್ಯಾರ್ಥಿಗಳಿಗೆ ಮಾರಾಟ ಮಾಡುವ ಮೂಲಕ ಹಣ ಗಳಿಸಿದ್ದಾನೆ. ಕೆರೆಯಪ್ಪ ಕನ್ನಡಶಾಲೆ ತೆರೆದು ಕೈ ಸುಟ್ಟುಕೊಂಡ ಮೇಲೆ 'ಲಂಡನ್ ಸ್ಕೂಲ್ ಆಫ್ ಚಿಲ್ಡ್ರನ್ ಪಿಲ್‌ಫೇರ್' ಇಂಗ್ಲೀಷ್ ಶಾಲೆ ತೆರೆದು ಡೊನೇಷನ್ ಮೂಲಕ ಹಣ ಗಳಿಸಿದ್ದಾನೆ. ಕಂಡಕ್ಟರ್ ಕರಿಯಣ ತಾನೇನು ಕಡಿಮೆ ಇಲ್ಲ ಎಂಬಂತೆ ಮತ್ತು ಆಟೋರಿಕ್ಷಾ / ಕಾರ್ ಖರೀದಿಸಿದ್ದಾನೆ. ಕಾನ್‌ಸ್ಟೇಬಲ್ ಕಣ್ಣುಸ್ವಾಮಿ ದಾರಿಬದಿಯ ಅಂಗಡಿಯವರ ಬಳಿ ಹಣ ವಸೂಲಿ ಮಾಡಿ ಹಣ ಸಂಪಾದಿಸುತ್ತಿದ್ದಾನೆ. ಹೀಗೆ ವಿವಿಧ ಇಲಾಖೆಯವರು ಸರ್ಕಾರ ನೀಡುತ್ತಿರುವ ಸಂಬಳ ಸಾಕಾಗದೆ ಐಶಾರಾಮಿ ಜೀವನವನ್ನು ನಡೆಸಲು ಸಮಾಜವನ್ನು ದೋಚುತ್ತಿರುವುದು ಕಂಡು ಬರುತ್ತದೆ. ಇಂಥಹ ವ್ಯಕ್ತಿಗಳಿಂದ

ಸಮಾಜ ಮುಂದುವರೆಯಲು ಹೇಗೆ ಸಾಧ್ಯ. ಇಂಥ ವ್ಯವಸ್ಥೆ ನಮ್ಮ ಸಮಾಜದಲ್ಲಿ ಹಾಳು ಮಾಡುತ್ತಿದೆ.

4.1.3 ಆಚರಣೆ ಮತ್ತು ನಂಬಿಕೆ :

ಜನರಿಗೆ ಇಂದು ತಮ್ಮ ಮೇಲೆಯೇ ನಂಬಿಕೆ ಇಲ್ಲದಾಗಿದೆ. ಕಾಲಹರಣ ಮಾಡುತ್ತಾ ಎಲ್ಲವನ್ನು ದೇವರ ಮೇಲೆ ಬಾರ ಹಾಕುತ್ತ ಮಾಡಬೇಕಾದ ಕೆಲಸ ಕಾರ್ಯಗಳನ್ನು ಮುಂದೂಡುವ ಸೋಮಾರಿ ಸ್ವಭಾವದವರು ಸಮಾಜದಲ್ಲಿ ಅಪಾರ ಸಂಖ್ಯೆಯಲ್ಲಿದ್ದಾರೆ. ಅಂತವರು ಕಾರ್ಯ ಶೂನ್ಯರಾಗಿದ್ದಾರೆ. 'ಪವಡಿಸು ಪರಮಾತ್ಮ' ಪ್ರಬಂಧದಲ್ಲಿ ವಿಧಾನಸೌಧದಲ್ಲಿ ಕೆಲಸ ಮಾಡುವ ಕೆಲಸಗಾರರ ಮನಸ್ಥಿತಿಯನ್ನು ಗಮನಿಸಿದಾಗ ಸಾರ್ವಜನಿಕರ ಬಗ್ಗೆ ಅವರಿಗಿರುವ ಕಾಳಜಿ ವ್ಯಕ್ತವಾಗುತ್ತದೆ 'ಸರ್ಕಾರದ ಕೆಲಸ ದೇವರ ಕೆಲಸ' ಎಂದು ಮೇಲೆ ದೇವರೆ ಬಂದು ಮಾಡಲಿ ಎಂಬ ಸ್ಥಿತಿಗೆ ಬಂದು ತಲುಪಿದ್ದಾರೆ ಇವರಿಗೆ ಸಾರ್ವಜನಿಕ ಕೆಲಸಗಳಗಿಂತ ತಮ್ಮ ಹೆಂಡತಿ, ಮಕ್ಕಳು ಸಂಸಾರದ ಬಗ್ಗೆ ಹೆಚ್ಚು ಆಸಕ್ತಿ. ಜೊತೆಗೆ ಮಾಡುವ ಕೆಲಸದ ಬಗ್ಗೆ ಶ್ರದ್ಧೆ ಇಲ್ಲದೆ ದೇವರ ಬಗ್ಗೆ ಬಾರಹಾಕಿ ಕೆಲಸ ಮಾಡಹೊರಟ ಇಂತವರು ಇತರ ಮೇಲೆ ಕೆಲಸದ ಮೇಲೆ ನಂಬಿಕೆ ಇಡದೆ ಬದುಕುತ್ತಿರುತ್ತಾರೆ.

ತನ್ನ ಪ್ರತಿಷ್ಠೆಯನ್ನು ತೋರಿಸಿಕೊಳ್ಳುವ ಸಲುವಾಗಿ ದುಂದು ವೆಚ್ಚವನ್ನು ಮಾಡುತ್ತ ಸಾಗುವುದನ್ನು 'ಆರತಕ್ಷತೆ' ಪ್ರಬಂಧದಲ್ಲಿ ನೋಡಬಹುದು. ಆರತಕ್ಷತೆ ಸಂಭ್ರಮ ಮದುವೆಗಿಂತಲೂ ಇಂದು ಹೆಚ್ಚು ಮಹತ್ವ ಪಡೆದುಕೊಂಡಿದ್ದ ಎಲ್ಲರ ಪ್ರತಿಷ್ಠೆಯ ಪ್ರದರ್ಶನಕ್ಕೆ ವೇದಿಕೆಯನ್ನು ಕಲ್ಪಿಸುವ ಸ್ಥಳವಾಗಿ ಮಾರ್ಪಟ್ಟಿದೆ. ವಧು ವರರನ್ನು ಅನ್ವೇಷಿಸುವವರು. ಬೇರೆಯವರು ತಮ್ಮನ್ನು ನೋಡಿ ಮೆಚ್ಚಿಕೊಳ್ಳಲಿ ಎಂದು ತಿರುಗಾಡುವ ಗಂಡು ಹೆಣ್ಣುಗಳು. ತಮ್ಮಲ್ಲಿರುವ ಚಿನ್ನಾಭರಣವನ್ನು ಹಾಕಿಕೊಂಡು ಎಲ್ಲರಿಗೂ ಕಣ್ಣು ಕುಕ್ಕುವಂತೆ ಓಡಾಡುವ ಹೆಂಗಸರು, ಅಲ್ಲಿನ ತೋರಣ, ವಿದ್ಯುತ್ ಬಲ್ಬ್‌ಗಳು. ಸಂಗೀತ ಇವೆಲ್ಲವೂ ಭ್ರಮಲೋಕವನ್ನು ಸೃಷ್ಟಿಸುತ್ತವೆ. ಇವು ಬರಿ ಕ್ಷಣಿಕ ಸುಖದವುಗಳಾಗಿದ್ದು ಇವನ್ನು ಅರಿಯದ ಜನ ಮೆರೆಯುತ್ತಾರೆ. ಬಂದು ಹೋಗುವವರನ್ನು ಮೆಚ್ಚಿಸುವ ಸಲುವಾಗಿ ನಕ್ಕವರ ಹಾಗೆ ಹಲ್ಲುಗಳನ್ನು ಪ್ರದರ್ಶಿಸುತ್ತಾ ಮಾತನಾಡಿಸುತ್ತಿರುವರು ಕಾಣಿಸಿಕೊಳ್ಳುತ್ತಾರೆ. ಇವೆಲ್ಲ ಸಂಭ್ರಮಕ್ಕೆ ಕಾರಣನಾದ ಹೆಣ್ಣಿನ ತಂದೆ ಯಾವುದೋ ಮೂಲೆಯಲ್ಲಿ ನಿಂತು ಸಾಲಪತ್ರವಿರುವ ತನ್ನ ಜೇಬನ್ನು ತಡವರಿಸಿಕೊಳ್ಳುವುದು ದುರಂತದ ಸಂಗತಿಯಾಗಿದೆ. ಇಂತಹ ಆಚರಣೆಗಳಂದ ಮಾನವ ಮುಕ್ತನಾಗಬೇಕು ಆಚರಣೆಗಳು ಮನಸ್ಸುಗಳಲ್ಲಿ ಹೊಂದಾಣಿಕೆಯಲ್ಲಿ ಆಗಬೇಕೆ ಹೊರತು ಹಣವನ್ನು ವ್ಯಯಿಸುವುದರಿಂದ ಅಲ್ಲ ಎಂಬುದು ಈ ಪ್ರಬಂಧದಲ್ಲಿ ಕಂಡು ಬರುತ್ತದೆ.

4.1.4 ಜೀವನ ಶೈಲಿ :

ಮನುಷ್ಯ ಇಂದು ಲೋಲುಪತೆಯ ಜೀವನವನ್ನು ನಡೆಸುತ್ತಿದ್ದು ಭಾವನೆಗಳಿಗೆ ಬೆಲೆ ನೀಡದೆ ಬದುಕುತ್ತಿದ್ದಾನೆ. ಬದುಕನ್ನು ನಡೆಸುವ ಸರಿಯಾದ ಮಾರ್ಗ ತಿಳಿಯದೆ ಸಮಸ್ಯೆಯ ಸುಳಿಯಲ್ಲಿ ಸಿಲುಕುತ್ತಿದ್ದಾನೆ ಎಂಬಂತಹ ಅಂಶಗಳನ್ನು 'ಸಾಲವನ್ನು ಕೊಂಬಾಗ' ಪ್ರಬಂಧದಲ್ಲಿ ನೋಡಬಹುದು. ಸಾಲ ಮಾಡಿ ಮುಂದೆ ಅದನ್ನು ತೀರಿಸಲಾಗದೆ ಬಡ್ಡಿ ಕಟ್ಟಿ ಸಂಕಷ್ಟಕ್ಕೆ ಸಿಲುಕಿ ಒದ್ದಾಡುತ್ತಾನೆ. 'ಸಾಲ ಮಾಡಿ ಓಲೆ ಮಾಡಿಸಿದ, ಓಲೆ ಮಾರಿ ಬಡ್ಡಿ ತೀರಿಸಿದ' ಎಂಬ ಗಾದೆಯನ್ನು ನೋಡಿದಾಗ ಸಾಲದ ಶೂಲಭಾದೆ ತಿಳಿಯುತ್ತದೆ.

ಮನುಷ್ಯನ ಸೋಮಾರಿತನವು ಈ ಸಮಾಜಕ್ಕೆ ಅಂಟಿಕೊಂಡಿರುವ ದೊಡ್ಡ ಪಿಡುಗಾಗಿದೆ. ಈ ಸೋಮಾರಿ ಮನೋಭಾವದವರು 'ಏಳಯ್ಯ ಬೆಳಗಾಯಿತು', 'ರೀ ಗಂಟೆ ಎಷ್ಟು' ಪ್ರಬಂಧಗಳಲ್ಲಿ ಕಾಣಿಸಿಕೊಳ್ಳುತ್ತಾರೆ ಹೊತ್ತು ಇರುವುದೇ ಹೊತ್ತು ಕಳೆಯಲು ಎನ್ನುವ ಸೋಮಾರಿ ಸ್ವಭಾವದವರು. ಸಮಯದ ಬಗ್ಗೆ ಪರಿಜ್ಞಾನವಿಲ್ಲದೆ ಬೀದಿಕಾಲಣ್ಣರಾಗಿ ಕಾಣಿಸಿಕೊಂಡು ಭಾರತದಂತೆ ಚಲನಾತ್ಮಕ ತಟಸ್ಥರಾಗಿದ್ದಾರೆ.

ಸಮಾಜದಲ್ಲಿ ಸಮಾಜದ ಬಗ್ಗೆ ಕಾಳಜಿ ಇಲ್ಲದೆ ಕೇವಲ ತಮ್ಮ ಜೀವನವೇ ಮುಖ್ಯ ಎಂದು ಬಾಳುತ್ತ ಡಾಂಭಿಕ ಜೀವನವನ್ನು ನಡೆಸುತ್ತಿರುವ ವ್ಯಕ್ತಿಗಳ ಬಗ್ಗೆ, ಅದಕ್ಕೆ ಕಾರಣವಾದ ಅಂಶಗಳನ್ನು 'ಏಳಯ್ಯ ಬೆಳಗಾಯಿತು', 'ಸೊಳ್ಳೆಪರದೆ', 'ಕಸಾನುಭವ', 'ಬಾಲ್ಕನಿಯ ಬಂಧುಗಳು', 'ಶಬ್ದಮಾಲಿನ್ಯ', 'ಮನೋಮಾಲಿನ್ಯ', 'ಬೆಳಕಿನ ಹಬ್ಬ' ಮುಂತಾದ ಪ್ರಬಂಧಗಳಲ್ಲಿ ವಿಡಂಬಿಸಿ ಮನುಷ್ಯನ ಗುಣ ಸ್ವಭಾವಗಳು, ಜೀವನ ಶೈಲಿ ಹೇಗೆ ಸಾರ್ವಜನಿಕ ಸಂದರ್ಭಗಳಲ್ಲಿ ವ್ಯಕ್ತವಾಗುತ್ತವೆ ಎಂಬುದನ್ನು ತಿಳಿಸಿದ್ದಾರೆ.

'ಪ್ರಯಾಣಿಕರು' ಪ್ರಬಂಧದಲ್ಲಿ ಸಾರ್ವಜನಿಕ ವಾಹನಗಳಾದ ಬಸ್ಸು, ರೈಲು ಮುಂತಾದವುಗಳಲ್ಲಿ ಪ್ರಯಾಣಿಸುವಾಗ ಜನರು ಸಾಮಾಜಿಕ ಪ್ರಜ್ಞೆಯಿಲ್ಲದೆ ಕಡಲೆಸೊಪ್ಪಿನ ಗಿಡ, ಕಡಲೆಕಾಯಿ, ಕಿತ್ತಳೆ, ದ್ರಾಕ್ಷಿಗಳನ್ನು ತಿಂದು ಅಲ್ಲೆ ಎಸೆದು ಕಸದ ರಾಶಿಯನ್ನು ನಿರ್ಮಿಸಿ, ಬಸ್‌ಸ್ಟಾಂಡ್‌ಗಳಲ್ಲಿ ಬಾಳೆಹಣ್ಣುಗಳನ್ನು ತಿಂದು ಸಿಪ್ಪೆಯನ್ನು ಎಸೆದು ಜನರು ಬಿದ್ದು 'ಊರುಭಂಗ'ವಾಗುವಂತೆ ಮಾಡುತ್ತಾರೆ, ಚಲಿಸುವ ಬಸ್‌ನಿಂದ ಕಿಟಕಿಯ ಮೂಲಕ ಕಸವನ್ನು ಎಸೆದು ವಾಹನಗಳನ್ನು ಸ್ವಚ್ಛವಾಗಿಡಬೇಕು ಎನ್ನುವ ಸಾಮಾಜಿಕ ಪ್ರಜ್ಞೆಯಿಲ್ಲದವರನ್ನು ವಿಡಂಬಿಸಿ ಸಾಮಾಜಿಕ ಪ್ರಜ್ಞೆ ಬೆಳೆಸಿಕೊಳ್ಳಬೇಕಾದ ಸಲಹೆಯನ್ನು ನೀಡುತ್ತಾರೆ.

ಹೀಗೆ ಮನುಷ್ಯನ ಸ್ವಾರ್ಥ ಬುದ್ಧಿಯಿಂದ ಸಮಾಜ ಕದಡಿದ ಕೊಳವಾಗಿದೆ ಎಂಬುದನ್ನು, ಇದಕ್ಕೆ ಕಾರಣವಾಗುವ ಅಂಶಗಳನ್ನು ಅ.ರಾ.ಮಿತ್ರ ತಮ್ಮ ಪ್ರಬಂಧದಲ್ಲಿ ವಿಡಂಭಿಸಿ ಮನುಷ್ಯನ ಗುಣ ಸ್ವಭಾವಗಳನ್ನ ತೆರೆದಿಡುವುದನ್ನು ಇವರ ಪ್ರಬಂಧಗಳಲ್ಲಿ ಕಾಣಬಹುದು.

ಇದ್ದುದರಲ್ಲಿ ಸಂತೃಪ್ತಿ ಜೀವನ ಸಾಗಿಸಬೇಕು ಎಂಬುದನ್ನು 'ಕೊರತೆ' ಪ್ರಬಂಧದಲ್ಲಿ ಕಟ್ಟಿಕೊಡುತ್ತಾರೆ. 'ನಮ್ಮ ಬದುಕಿನ ಬಜೆಟ್‌ನಲ್ಲಿ ನಾವು ಕೊರತೆಯ ಬುದ್ಧಿಯನ್ನು ಮುಂದಕ್ಕೆ ಹಾಕುವುದು ಒಳ್ಳೆಯದಲ್ಲವೆ ?'[೧] ಎಂದು ಸಲಹೆ ನೀಡುತ್ತಾರೆ. ಬೇರೆಯವರು ಹಾಗಿದ್ದಾರೆ. ಹೀಗಿದ್ದಾರೆ ಎಂದು. ಅದೇ ರೀತಿ ನಾವು ಆಗಬೇಕೆಂದು ತಮ್ಮ ಜೀವನದಲ್ಲಿರುವ ಕೊರತೆಗಳ ಬಗ್ಗೆ ಚಿಂತಿಸುವವರನ್ನು ವಿಡಂಬಿಸುವುದನ್ನು ಕಾಣಬಹುದು.

ಸಾಮಾಜಿಕ ಪಿಡುಗಾಗಿರುವ ವರದಕ್ಷಿಣೆಯನ್ನು ಕುರಿತು ತಮ್ಮ 'ವರಕುಳಗಳು' ಪ್ರಬಂಧದಲ್ಲಿ ವರದಕ್ಷಿಣೆ ಪಡೆಯುವವರನ್ನು ಕುರಿತು ವಿಡಂಬಿಸಿದ್ದಾರೆ. ವರನ ಕಡೆಯವರು ಹೆಣ್ಣಿನ ಮನೆಯವರಿಗೆ ಕೊಡುವ ಹಿಂಸೆಯ ಚಿತ್ರಣವನ್ನು ಇಲ್ಲಿ ತೆರೆದಿಟ್ಟಿದ್ದಾರೆ.

ಹೀಗೆ 'ಉತ್ಪ್ರೇಕ್ಷೆ', 'ಕುತೂಹಲ', 'ಆಸನ ಕಂಪನ', 'ಗಾಂಪಾಗಾಥಾ', 'ಸುಳ್ಳಿನ ಬಲೆ', 'ಕಿರುಕುಳ ಪುರಾಣ', 'ಪ್ರಚಾರ ಫಲಕಗಳು', 'ಕರ್ಣಪಿಶಾಚ' ಮುಂತಾದ ಪ್ರಬಂಧಗಳಲ್ಲಿ ಸಾಮಾಜಿಕ ಅಂಶಗಳಿಗೆ ಸಂಬಂಧಪಟ್ಟಂತೆ ವಿಡಂಬಿಸಿರುವುದನ್ನು ಕಾಣಬಹುದು.

4.2 ಸಾಂಸಾರಿಕ ವಿಡಂಬನೆ :

ಮನುಷ್ಯ ಜೀವನದಲ್ಲಿ ನೆಮ್ಮದಿಯಿಂದ ಬದುಕಬೇಕೆಂದು ಬಯಸುತ್ತಾನೆ. ಆದರೆ ಈ ನೆಮ್ಮದಿ ಸಿಗುವುದು ಎಲ್ಲಿ ಎಂದು ಹುಡುಕ ಹೊರಟರೆ ಹಾಸ್ಯಾಸ್ಪದವಾಗುತ್ತದೆ. ಮನುಷ್ಯ ಏಕಾಂಗಿಯಾಗಿ ಬದುಕಲಾರದೆ ತನ್ನ ಆಸೆ-ಆಕಾಂಕ್ಷೆಗಳನ್ನು, ಕಷ್ಟ-ಸುಖಗಳನ್ನು ಹಂಚಿಕೊಳ್ಳಲು ಮದುವೆಯಾಗಿ ಸಂಸಾರವನ್ನು ಕಟ್ಟಿಕೊಂಡು ಸುಖಜೀವನವನ್ನು ನಡೆಸಲು ಬಯಸುತ್ತಾನೆ. ಆದರೆ ಕೆಲವು ಸಂಸಾರಗಳಲ್ಲಿ ಬಿರುಕು ಕಾಣಿಸಿಕೊಂಡು ಮನಸ್ಸು ಕದಡಿದ ಕೊಳವಾಗಿ ಸಂಸಾರದಲ್ಲಿ ಸುಖ ಕಾಣದೆ ವ್ಯಸನಪಟ್ಟುಕೊಳ್ಳುತ್ತಾನೆ. ಸಂಸಾರದಲ್ಲಿ ಮನಸ್ತಾಪ ಉಂಟಾಗಲು ಹಲವಾರು ಕಾರಣಗಳಿರುತ್ತವೆ. ಗಂಡು-ಹೆಣ್ಣಿನ ಸ್ವಭಾವ, ಜೀವನ ಶೈಲಿ, ಆಲೋಚನಾ ಕ್ರಮ ಮುಂತಾದವು ಸಂಸಾರದಲ್ಲಿ ಏರುಪೇರು ಉಂಟಾಗಲು ಕಾರಣವಾಗುತ್ತವೆ. ಸಂಸಾರ ಎಂದರೆ ಜೋಡೆತ್ತಿನ ಬಂಡಿ ಇದ್ದ ಹಾಗೆ. ಎರಡು ಗಾಲಿಗಳು ಸರಿಯಾಗಿ ಉರುಳಿದರೆ ಮಾತ್ರ ಬಂಡಿ ಮುಂದೆ ಸಾಗುತ್ತದೆ. ಇಲ್ಲದೆ ಹೋದರೆ ಸಂಸಾರದ ಬಂಡಿ ಮುರಿದು ಬಿದ್ದು ಸಂಬಂಧಗಳ ಕೊಂಡಿ ಕಳಚಿಕೊಳ್ಳುತ್ತದೆ.

ಸಂಸಾರವನ್ನು ನಡೆಸಬೇಕಾದರೆ ಹೊಂದಾಣಿಕೆ ಮುಖ್ಯ. ಹೊಂದಾಣಿಕೆ ಇಲ್ಲದೆ ಹೋದರೆ ಸಂಸಾರ ನಡೆಸುವುದು ಕಷ್ಟ. ಸಂಸಾರದಲ್ಲಿ ಎದುರಾಗುವ ಸಣ್ಣಪುಟ್ಟ ಸಮಸ್ಯೆಗಳಿಗೆ ಹೆಚ್ಚು ತಲೆಕೆಡಿಸಿಕೊಳ್ಳದೆ ಸಮಾಧಾನ ಚಿತ್ತದಿಂದ ಆಲೋಚಿಸಿ ಸರಿಯಾದ ಸಮಯದಲ್ಲಿ ಸರಿಯಾದ ಒಳ್ಳೆಯ ತೀರ್ಮಾನ ತೆಗೆದುಕೊಂಡು ಹೋದಾಗ ಸಂಸಾರ ಸುಖಮಯವಾಗಿರುತ್ತದೆ. ಇಲ್ಲದೇ ಹೋದರೆ ಸಂಸಾರ ಎಂಬುದು ನರಕವಾಗುತ್ತದೆ. ಸಂಸಾರ ನರಕವಾಗಲು ಹಲವಾರು ಸನ್ನಿವೇಶಗಳು ಸೃಷ್ಟಿಯಾಗುತ್ತವೆ. ಆಗ ಸಮಸ್ಯೆಗಳು ಉದ್ಭವಿಸಿ

೧. ಅ.ರಾ. ಮಿತ್ರ - ಆರತಕ್ಷತೆ - ಪ್ರ: ಕೊರತೆ, ಪು-೧೭

ಸಂಸಾರ ಹಾಳಾಗುತ್ತದೆ. ಸಂಸಾರದಲ್ಲಿ ಬಿರುಕುಗಳು ಹೇಗೆ ಕಾಣಿಸಿಕೊಳ್ಳುತ್ತವೆ ? ಯಾರಿಂದ ಹುಟ್ಟಿಕೊಳ್ಳುತ್ತವೆ ? ಅದಕ್ಕೆ ಕಾರಣವಾಗುವ ಸಂದರ್ಭಗಳು ಯಾವಾವು ? ಎಂಬಂತಹ ಅಂಶಗಳನ್ನು ಆ.ರಾ.ಮಿತ್ರರವರು ತಮ್ಮ ಲಲಿತ ಪ್ರಬಂಧಗಳಲ್ಲಿ ಕಟ್ಟಿಕೊಟ್ಟಿದ್ದಾರೆ.

ಗಂಡು-ಹೆಣ್ಣುಗಳು ಇಬ್ಬರು ಹೊಂದಿಕೊಂಡು ನಡೆದಾಗ ಮಾತ್ರ ಉತ್ತಮ ಜೀವನ. ಶಾಂತಿಯುತ ಸಂಸಾರವನ್ನು ನಡೆಸಲು ಸಾಧ್ಯ. ಇಲ್ಲದೇ ಹೋದರೆ ಅಂತಹ ಸಂಸಾರಗಳು ನರಕವಾಗುತ್ತದೆ. ಸಂಸಾರದಲ್ಲಿ ತೊಡಕುಗಳು ಹೇಗೆ ಕಾಣಿಸಿಕೊಳ್ಳುತ್ತವೆ? ಜಗಳ ಯಾರಿಂದ ಆರಂಭವಾಗುತ್ತದೆ? ಏಕೆ? ಎಂಬಂತಹ ಅಂಶಗಳನ್ನು ಕೆಲವು ಪ್ರಬಂಧಗಳಲ್ಲಿ ವಿಡಂಬಿಸಿದ್ದಾರೆ. ಗಂಡ-ಹೆಂಡತಿಯರಲ್ಲಿ ವಿಭಿನ್ನ ಆಲೋಚನೆ ಒಳಗೊಂಡ ಇವರ ಕೆಲವು ಪ್ರಬಂಧಗಳೆಂದರೆ 'ನೀ ಕೊಡೆ ನಾ ಬಿಡೆ', 'ನಾಂಪ ನಾಂಪಿ', 'ಸರಸ ದಾಂಪತ್ಯ', 'ಹಾಲಿನವಳಲೆಕ್ಕ'. ಕಲಹಕ್ಕೆ ಕಾರಣವಾಗುವಂತಹ ಅಂಶಗಳು 'ಮನೆ ಟೆಂಪ್ರೇಚರ್', 'ಬಸಪ್ಪನ ದೀಪಾವಳಿ', 'ನಾನೊಂದು ಮದುವೆ ಮಾಡಿಕೊಂಬೆ' ಮುಂತಾದವುಗಳಲ್ಲಿ ಕಾಣಿಸಿಕೊಳ್ಳುತ್ತವೆ. ಇವು ಸಂಸಾರಕ್ಕೆ ಹೆಚ್ಚು ಒತ್ತು ಕೊಟ್ಟಿರುವ ಪ್ರಬಂಧಗಳು. ಇದಲ್ಲದೆ ಉಳಿದ ಪ್ರಬಂಧಗಳಲ್ಲಿ ಸನ್ನಿವೇಶ ಬಂದಾಗ ಸಂಸಾರದ ವಿಷಯಗಳನ್ನು ಪ್ರಸ್ತಾಪಿಸುತ್ತಾರೆ ವಿಷಮ ಸನ್ನಿವೇಶದ ಘಳಿಗೆಗಳಿಗೆ ಕಾರಣವಾಗುವ ಸಂದರ್ಭವನ್ನು ವಿಡಂಬಿಸುತ್ತಾ ಒಳ್ಳೆಯ ದಾಂಪತ್ಯ ಜೀವನವನ್ನು ಹೇಗೆ ನಡೆಸಬೇಕು. ಗಂಡು-ಹೆಣ್ಣಿನ ಜವಾಬ್ದಾರಿಗಳೇನು ? ಹೇಗೆ ಹೊಂದಿಕೊಂಡು ಬಾಳಬೇಕು ಎಂಬ ಅಂಶಗಳನ್ನು ತಮ್ಮ ಪ್ರಬಂಧಗಳಲ್ಲಿ ತಿಳಿಸಿಕೊಡುತ್ತಾರೆ.

ಸಂಸಾರದಲ್ಲಿ ವಿಷಮ ದಾಂಪತ್ಯಕ್ಕೆ ಹಲವು ಪ್ರಸಂಗಗಳು ಕಾರಣವಾಗುತ್ತವೆ. ಅಂತಹ ಅಂಶಗಳೆಂದರೆ :

4.2.1 ಸ್ತ್ರೀ ಪುರುಷರ ವಿಭಿನ್ನ ಆಲೋಚನೆಗಳು.

4.2.2 ಕೌಟುಂಬಿಕ ಕಲಹ.

4.2.1 ಸ್ತ್ರೀ ಪುರುಷರ ವಿಭಿನ್ನ ಆಲೋಚನೆಗಳು :

ಸಂಸಾರದಲ್ಲಿ ಗಂಡ ಹೆಣ್ಣುಗಳು ವಿಭಿನ್ನವಾಗಿ ಆಲೋಚಿಸುತ್ತಾರೆ. ಅದಕ್ಕೆ ಮುಖ್ಯ ಕಾರಣ ಅವರ ಗುಣಸ್ವಭಾವಗಳು. ಈ ಸ್ವಭಾವಗಳು ಸಂಸಾರದ ಮೇಲೆ ಪ್ರಭಾವ ಬೀರುತ್ತವೆ. ಸಂಸಾರದಲ್ಲಿ ಗಂಡು ಹೆಣ್ಣಿನ ಮನಃಸ್ಥಿತಿಗಳು ಯಾವಾಗಲು ಒಂದೇ ಸಮನಾಗಿ ಇರುವುದಿಲ್ಲ. ಸಮಸ್ಯೆ ಯಾರಿಂದ ಹೇಗೆ ಉದ್ಭವಿಸುತ್ತದೆ ಎಂದು ಹೇಳುವುದು ಕಷ್ಟ. ಸಂಸಾರ ನಡೆಸಲು ಜಾಣ್ಮೆ, ಬುದ್ಧಿವಂತಿಕೆ, ಹೊಂದಾಣಿಕೆ ಮುಖ್ಯ. ಸಂಸಾರದಲ್ಲಿ ಜಗಳ, ಮುನಿಸು, ಮನಸ್ತಾಪ, ಸರಸ, ವಿರಸ ಎಲ್ಲವೂ ಕಾಣಿಸಿಕೊಳ್ಳುತ್ತವೆ. ಏಕೆಂದರೆ ಭವಿಷ್ಯದ ಸಂಸಾರದ ಬಗ್ಗೆ ಗಂಡು-ಹೆಣ್ಣುಗಳು ಹಲವು ಕನಸುಗಳನ್ನು ಕಟ್ಟಿಕೊಂಡಿರುತ್ತಾರೆ. ಆದರೆ ಸಂಸಾರ ಕನಸು ಕಂಡಷ್ಟು ಸುಲಭವಾಗಿರುವುದಿಲ್ಲ ಎಂಬುದು ತಿಳಿದಾಗ ದುಃಖಗೊಳ್ಳುತ್ತಾರೆ. ಉದಾಹರಣೆಯಾಗಿ

'ನಾನೊಂದು ಮದುವೆ ಮಾಡಿಕೊಂಬೆ' ಎಂಬ ಪ್ರಬಂಧದಲ್ಲಿ ಮಿತ್ರರವರು ಹೇಳುವ ಮಾತು ನೋಡಿದರೆ ಸಂಸಾರದ ಹಾದಿ ಹೇಗೆ ಕಷ್ಟದಿಂದ ಕೂಡಿರುತ್ತದೆ ಎಂದು ತಿಳಿಯುತ್ತದೆ. 'ಒಟ್ಟಿನಲ್ಲಿ ಮದುವೆ ಎಂಬುದು ಉಚ್ಚಂಗೀಯ ಕೋಟೆಯಂತೆ ದೂರಕ್ಕೆ ಬಹಳ ದೊಡ್ಡದಾಗಿ ಹತ್ತಿರ ಹೋದಂತೆಲ್ಲಾ ಕಿರಿ ಕಿರಿದಾಗಿ ಕಾಣುತ್ತಲೇ ಹೋಗುವ ಒಂದು ಕೋಟೆ ಅದರ ಒಳ ವಿಭಾಗಗಳ ಹೊಕ್ಕು ಬಳಸುಗಳು ಕಾವಲು ಗಂಡಿಗಳು ಗುಪ್ತ ದ್ವಾರಗಳು. ರಚನೆ ಸಂಕೀರ್ಣತೆ ದಿಗ್ಭ್ರಮೆ ಹಿಡಿಸುವಂತದ್ದು.'[೧] ಎಂದು ಸಂಸಾರಕ್ಕೆ ಕಾಲಿಡುವ ಮುಂಚೆ ಒದಗಬಹುದಾದ ಸವಾಲುಗಳನ್ನು ಮುನ್ನೆಚ್ಚರಿಕೆಯಾಗಿ ನೀಡುತ್ತಾರೆ. ಮದುವೆ ಆದ ನಂತರ ಗಂಡುಹೆಣ್ಣುಗಳು ಗುಣಸ್ವಭಾವ ಒಂದೇ ರೀತಿ ಇದ್ದರೆ ಪರವಾಗಿಲ್ಲ. ಆದರೆ 'ಎತ್ತು ಏರಿಗೆಳೆಯಿತು ಕೋಣ ನೀರಿಗೆಳೆಯಿತು' ಎಂಬಂತಾದರೆ ಕಷ್ಟ. ಗಂಡುಹೆಣ್ಣಿನ ಸ್ವಭಾವಗಳು ಹೇಗೆ ಭಿನ್ನವಾಗಿರುತ್ತದೆ ಎಂಬುದನ್ನು ಇಲ್ಲಿ ನೋಡಬಹುದು. 'ನೀಕೊಡೆ ನಾಬಿಡೆ' ಎಂಬ ಪ್ರಬಂಧದಲ್ಲಿ ಹೆಣ್ಣಿನ ಚೌಕಾಸಿ ಸ್ವಭಾವವನ್ನು ತೆರೆದಿಟ್ಟಿದ್ದಾರೆ. ಇಂತಹ ಸ್ವಭಾವ ಸಂಸಾರದಲ್ಲಿ ಇರಬೇಕು, ಅದಕ್ಕೆ ಮುಖ್ಯಕಾರಣ ಸ್ತ್ರೀಗಿರುವ ಸಂಸಾರದ ಕಾಳಜಿ ಎಂದು ಅನಿಸುತ್ತದೆ. ಗಂಡನಿಗೆ ಚೌಕಾಸಿ ಸ್ವಭಾವ ಹಿಡಿಸುವುದಿಲ್ಲ. ಆದರೆ ಹೆಂಡತಿ ಚೌಕಾಸಿ ಸ್ವಭಾವದವಳು. ಸ್ತ್ರೀಯರು ಒಡವೆ, ಆಭರಣ, ಪ್ರಿಯರಾಗಿರುವುದರಿಂದ ಸ್ವಲ್ಪ ಚೌಕಾಸಿ ಸ್ವಭಾವ ಹೆಚ್ಚು !

ಸ್ತ್ರೀಯರು ಯಾವಾಗಲೂ ಇತರರು ನಮ್ಮನ್ನು ನೋಡಬೇಕು, ಗುರುತಿಸಬೇಕು ಎಂದು ಆಸೆ ಪಡುತ್ತಾರೆ. ಆದರೆ ಇದರ ಹೊರೆ ಹೊರುವ ಭಾರ ಮಾತ್ರ ಗಂಡಿನದಾಗಿರುತ್ತದೆ. ಗಂಡ ಹೆಣ್ಣಿನ ಆಕೆಯ ಆಸೆಯನ್ನು ಪೂರೈಸಬೇಕಾಗುತ್ತದೆ. ನಾಡಿಗೇರದ ಬಳಿಗೆ ಬಂದ ಆತನ ಸ್ನೇಹಿತ ತನ್ನ ಕಣ್ಣಿಗೆ ಧೂಳು ಕಸಬಿದ್ದು ಅದನ್ನು ತೆಗೆಸಲು ನರ್ಸಿಂಗ್ ಹೋಂನಲ್ಲಿ ರೂ.50/- ಖರ್ಚಾಯಿತು ಎಂದನಂತೆ. ನಾಡಿಗೇರರು ಕೂಡಲೇ ಅಯ್ಯೋ ಅದೆಷ್ಟೋ ವಾಸಿ ಬಿಡಿ, ಮೊನ್ನೆ ನನ್ನ ಹೆಂಡತಿ ಕಣ್ಣಿಗೆ ಚಿಕ್ಕಪೇಟೆಯಲ್ಲಿ ಒಂದು ರೇಷ್ಮೆ ಸೀರೆ ಬಿದ್ದು ನನಗೆ ರೂ.500/- ಖರ್ಚಾಯಿತು.[೨] ಅಂದರಂತೆ. ಹೀಗೆ ಹೆಣ್ಣು ಕಣ್ಣಿಗೆ ಕಂಡದ್ದನೆಲ್ಲಾ ಕೊಳ್ಳಬೇಕು ಎನ್ನುವ ಸ್ವಭಾವದವರಾಗಿರುತ್ತಾಳೆ.

ಸಂಸಾರ ತೂಗಿಸುವಲ್ಲಿ ಹೆಣ್ಣಿನ ಪಾತ್ರ ಮುಖ್ಯವಾದುದು. ಮನೆಯ ಯಜಮಾನ ತಾನು ಹೊರಗಡೆ ದುಡಿದು ತಂದು ಮನೆಯಾಕೆಗೆ ನೀಡಿದರೆ ಸಾಕು ತನ್ನ ಕೆಲಸ ಮುಗಿಯಿತು ಸಂಸಾರ ನಡೆಯುತ್ತದೆ ಎಂದು ತಿಳಿದಿರುತ್ತಾನೆ. ಆದರೆ ಸಂಸಾರ ನಡೆಸಲು ಮಹಿಳೆಯರು ಏನೆಲ್ಲಾ ಸರ್ಕಸ್ ಮಾಡುತ್ತಾರೆ! ಗಂಡ ನೀಡಿದ ಹಣವನ್ನು ಅಲ್ಪಸ್ವಲ್ಪ ಉಳಿಸಿ ದುಂದುವೆಚ್ಚಕ್ಕೆ ಕಡಿವಾಣ ಹಾಕಿ ಮಿತವ್ಯಯ ಮಾಡಬೇಕಾಗುತ್ತದೆ. ಇದಕ್ಕೆಲ್ಲಾ ತಾಳ್ಮೆ, ಸಹನೆ, ಬುದ್ಧಿವಂತಿಕೆ ಬೇಕಾಗುತ್ತದೆ. ಹಾಲಿನವಳ ಲೆಕ್ಕ ಪ್ರಬಂಧದಲ್ಲಿ ಹೊರಗಡೆ ದುಡಿದು ಬಂದ ಗಣಪತಿರಾಯ ನಿದ್ದೆ ಮಾಡುತ್ತಿದ್ದಾಗ ಹೆಂಡತಿ ಮನೆಯ ಕೆಲಸದಲ್ಲಿ ತೊಡಗಿರುತ್ತಾಳೆ. ಹಾಲಿನವಳು ಹಣ ಕೇಳಲು ಬಂದಾಗ ಆತ ದುಡ್ಡು ನೀಡಿ ಇಷ್ಟು ದಿನವಾದರು ಹಾಲಿನವಳಿಗೆ ಕೊಡದೆ ಏನು ಮಾಡುತ್ತಿದ್ದೆ

೧. ಸಂ. ತಾ.ರಾ. ನಾಗರಾಜ್, ಸ.ಲ.ಪ್ರ. ಅ.ರಾ.ಮಿತ್ರ. 'ನಾನೊಂದು ಮದುವೆ ಮಾಡಿಕೊಂಬೆ', ಪು-೩೩೪
೨. ಸಂ. ತಾ.ರಾ. ನಾಗರಾಜ್, ಸ.ಲ.ಪ. ಅ.ರಾ.ಮಿತ. 'ನೀಕೊಡೆ ನಾಬಿಡೆ, ಪು-೮೪

ಎಂದು ದಬಾಯಿಸುತ್ತಾನೆ. ಆದರೆ ಹೆಂಡತಿ ತಾಳ್ಮೆಯಿಂದಲೇ ಉತ್ತರಿಸುತ್ತಾಳೆ. ತಾನು ಹಾಲು ಕೊಂಡುಕೊಳ್ಳುವ ಲೆಕ್ಕವನ್ನು ಒಂದು ಕಡೆ ಬರೆದಿರುತ್ತಾಳೆ. ಇಲ್ಲಿ ಹೆಂಗಸಿನ ನೆನಪಿನ ಶಕ್ತಿ ಅಗಾಧವಾದುದು. ಅಲ್ಲಿ ಹಾಲಿನವಳ ಲೆಕ್ಕ, ಹೂವಿನ ಲೆಕ್ಕ, ಹೊಟ್ಟಿನ ಲೆಕ್ಕ ಎಲ್ಲವನ್ನು ಬರೆದಿರುತ್ತಾಳೆ. ಹೀಗೆ ಸಂಸಾರವನ್ನು ಲೆಕ್ಕಾಚಾರದಲ್ಲಿ ತೂಗಿಸುವ ಹೆಣ್ಣಿನ ಸ್ವಭಾವವನ್ನು ಮೆಚ್ಚಬೇಕಾದುದ್ದೆ. ಗಣಪತಿರಾಯ 'ಅದೇನ್ ಮಹಾ ಭಾಸ್ಕರಚಾರ್ಯ ಲೀಲಾವತಿಯ ಲೆಕ್ಕವೇ' ಎಂದು ಹೇಳಿ ಲೆಕ್ಕ ಸರಿಪಡಿಸಲಾಗದೆ ಪೇಚಿಗೆ ಸಿಲುಕಿ ಹಾವಿನ ಹುತ್ತಕ್ಕೆ ಕೈ ಹಾಕಿದೆ ಎಂದುಕೊಳ್ಳುತ್ತಾನೆ. ಮಾರನೆಯ ದಿನ ಹೆಂಡತಿ ಹಾಲಿನವಳಿಗೆ ಲೆಕ್ಕ ಮಾಡಿ ಹಣ ನೀಡಿದಾಗ ಆಕೆಯು ಸಂತೋಷದಿಂದ ಹೋಗುವಾಗ ಗೋಡೆಯ ಬಂಕಿನ ಮೇಲಿದ್ದ ಚಿನ್ನದ ಮೆಡಲ್ ಅವನನ್ನು ಅಣಕಿಸುತ್ತಿತ್ತು ಎನ್ನುವಾಗ ಗಂಡಿಗಿಂತಲೂ ಹೆಣ್ಣಿಗೆ ಸಂಸಾರದಲ್ಲಿ ಹೆಚ್ಚು ಜವಾಬ್ದಾರಿ ಎಂದು ತಿಳಿಸುತ್ತ ಗಂಡಿನ ಪದವಿಯನ್ನು, ವಿದ್ಯೆಯನ್ನು ಗೇಲಿ ಮಾಡುತ್ತಾರೆ. ಸಂಸಾರವನ್ನು ತೂಗಿಸುವಾಗ ಆಕೆಗೆ ತನ್ನ ಕುಟುಂಬದ ಸ್ಥಿತಿಗತಿಗಳ ಅರಿವಿರುತ್ತದೆ. ಗಂಡಸರು ದುಂದುವೆಚ್ಚ ಮಾಡಿದರೆ ಸ್ತ್ರೀಯರು ಉಳಿತಾಯದ ಹಾದಿ ಹಿಡಿಯುತ್ತಾರೆ. ಸಂಸಾರದ ಒಳಗುಟ್ಟನ್ನು ಸ್ತ್ರೀಯರು ಮಾತ್ರ ತಿಳಿಯಲು ಸಾಧ್ಯ. ಗಂಡಸರಿಗೆ ಅದರ ಮರ್ಮ ತಿಳಿಯುವುದಿಲ್ಲ ಎನ್ನುವುದನ್ನು ಗಣಪತಿರಾಯನಂತಹವರಿಂದ ತಿಳಿಯಬಹುದು.

ಒಂದು ಕಡೆ ವ್ಯಾಪಾರಕ್ಕೆಂದು ಹೋದಾಗ ವಸ್ತುಗಳನ್ನು ಖರೀದಿಸುವಾಗ ಗಂಡಸರು ವಸ್ತುಗಳಿಗೆ ಹೇಳಿದ ಬೆಲೆ ನೀಡಿ ಕೊಂಡುಕೊಳ್ಳುತ್ತಾರೆ. ತನ್ನ ಮನೆಗೆ ಏನು ಅವಶ್ಯಕತೆ ಇದೆ ಏನು ಬೇಕು ಬೇಡ ಎಂದು ತಿಳಿಯದೆ ಸಿಕ್ಕಿದ್ದನ್ನು ಕೊಂಡು ತರುತ್ತಾರೆ. ಕಂಡಿದ್ದನ್ನೆಲ್ಲಾ ಕೊಳ್ಳುವ ಮನಸಿದ್ದರೂ ಹಣವಿಲ್ಲದೆ ಪರಿತಪಿಸುವುದು ಮಧ್ಯಮ ವರ್ಗದಲ್ಲಿ ಕಂಡುಬರುವ ಸಾಮಾನ್ಯ ದೃಶ್ಯ. ಆದರೆ ಸ್ತ್ರೀಯರು ಮುಂದಾಲೋಚನೆಯಿಂದ ಯಾವ ವಸ್ತುವಿಗೆ ಎಷ್ಟು ಬೆಲೆ, ಎಲ್ಲಿ, ಹೇಗೆ, ಎಷ್ಟು ಕಡಿಮೆ ಬೆಲೆಗೆ ದೊರೆಯುತ್ತದೆಂಬುದನ್ನು ಹತ್ತಾರು ಕಡೆ ವಿಚಾರಿಸಿ ವಸ್ತುಗಳನ್ನು ಖರೀದಿಸುತ್ತಾರೆ. ದುಂದುವೆಚ್ಚಕ್ಕೆ ಕಡಿವಾಣ ಹಾಕಲು ಚೌಕಾಸಿ ನಡೆಸುತ್ತಾರೆ. ಸಂಸಾರದ ಬೇಕು ಬೇಡಗಳು ಗಂಡಸರಿಗೆ ತಿಳಿಯುವುದಿಲ್ಲವೆಂಬುದನ್ನ 'ನೀ ಕೊಡೆ ನಾ ಬಿಡೆ' ಎಂಬ ಪ್ರಬಂಧದಲ್ಲಿ ಹೆಂಡತಿ ಗಂಡನಿಗೆ ಈ ರೀತಿ ದಬಾಯಿಸುತ್ತಾಳೆ 'ಅದಕ್ಕೆ ನಿಮಗೆ ವ್ಯಾಪಾರ ಬರೋದಿಲ್ಲ ಎನ್ನುವುದು, ನಿಮಗೆ ಗಂಡುಕೊಳಗಳಿಗೆ ಒಂದು ಅಭಿರುಚಿಯೇ ಇಲ್ಲ. ಆಯ್ಕೆಯ ವಿಧಾನ ಗೊತ್ತಿಲ್ಲ. ವ್ಯಾಪಾರಕ್ಕೆ ನಿಂತುಕೊಳ್ಳುವಷ್ಟು ಸಮಯವೂ ಇಲ್ಲ, ನಿಮ್ಮ ಹತ್ತಿರ ದುಡ್ಡೇನು ಕೊಳ್ಳೆ ಹೊಡೆಯುವಷ್ಟು ಇದೆಯಾ'[೧] ಎಂದು ಪ್ರಶ್ನಿಸುತ್ತಾಳೆ. ತಮ್ಮ ಆಸೆ ಆಕಾಂಕ್ಷೆಗಳನ್ನು ಪೂರೈಸಿಕೊಳ್ಳಲು ಹಣ ಬೇಕೇ ಬೇಕು ಆದರೆ ಬೇಕಾಬಿಟ್ಟಿ ಖರ್ಚು ಮಾಡಿದರೆ ಸಂಸಾರ ನಡೆಯುವುದು ಹೇಗೆ ಎಂಬ ಆತಂಕ ಸ್ತ್ರೀಯರಿಗೆ ಹೆಚ್ಚು. ಬೇಜವಾಬ್ದಾರಿ ಗಂಡಸರಿಗೆ ಇದು ತಿಳಿಯುವುದಿಲ್ಲ. 'ನನಗೆ ಗೊತ್ತು ರೀ ನಿಮ್ಮ ಶುದ್ಧ ವ್ಯಾಪಾರ ಏನ್ ಬೇಕೋ ಕೊಳ್ಳುತ್ತೀರಿ. ಒಳ್ಳೆ ಬಕ್ರ ಸಿಕ್ಕಿದೆ ಅದ್ಕೊಂಡು ಆ ಮಾರಾಟದ ಹುಡುಗಿ ನಿಮ್ಮುಂದೆ ನಾಲ್ಕೈದು ಮಾದರಿ

೧. ಸಂ. ತಾ.ರಾ. ನಾಗರಾಜ್, ಸ.ಲ.ಪ್ರ. ಅ.ರಾ.ಮಿತ್ರ. 'ನೀಕೊಡೆ ನಾಬಿಡೆ, ಪು-೪೫

ಹಿಡಿಯುತ್ತಾಳೆ. ಅವಳ ಮುಖವನ್ನು ನೋಡುತ್ತಾ ಅವಳ ಹೊಗಳಿಕೆಯ ಶೂಲವನ್ನು ಏರಿ ಕೊನೆಗೇ ಆಕೆಯ ಆಯ್ಕೆಯನ್ನು ನಿಮ್ಮ ಆಯ್ಕೆ ಅಂತ ತಿಳಿದು ಕೇಳಿದಷ್ಟು ಹಣಕಕ್ಕಿ ತಂದು ಬಿಡುತ್ತೀರಿ. ಇದು ವ್ಯಾಪಾರ ಲಕ್ಷಣವೇನ್ರಿ[೧] ಎಂದು ರೇಗಿಸುತ್ತಾಳೆ. ಹೀಗೆ ಹೇಳುವಾಗ ಗಂಡಸರಿಗೆ ಪ್ರಾಪಂಚದ ಬುದ್ಧಿ ತಿಳಿದಿದೆ ವಿನಃ ಸಂಸಾರವನ್ನು ತೂಗಿಕೊಂಡು ಹೋಗುವ ಜವಾಬ್ದಾರಿ ಇಲ್ಲ ಎಂದು ಗಂಡಸಿನ ಸ್ವಭಾವವನ್ನು ತೆರೆದಿಡುತ್ತಾರೆ.

4.2.2 ಕುಟುಂಬದಲ್ಲಿ ಕಲಹ :

ಸಂಸಾರದಲ್ಲಿ ಉಂಟಾಗುವ ಸಣ್ಣಪುಟ್ಟ ಘಟನೆಗಳಿಗೆ ಕೋಪಗೊಂಡಾಗ ಜಗಳ ಆರಂಭವಾಗಿ ಮನಸ್ಸು ಕಹಿಯಾಗುತ್ತದೆ. ನನ್ನ ಮಾತೆ ಮನೆಯಲ್ಲಿ ನಡೆಯಬೇಕೆಂದು ಎಲ್ಲರ ಮೇಲೂ ಪ್ರಭುತ್ವ ಸ್ಥಾಪಿಸಲು ಹೊರಟಾಗ ಸಂಸಾರದಲ್ಲಿ ಅಶಾಂತಿ ಕಾಣಿಸಿಕೊಳ್ಳುತ್ತದೆ. ಇಂತಹ ಸನ್ನಿವೇಶಗಳನ್ನು 'ಮನೆ ಟೆಂಪ್ರೇಚರ್', 'ಬಸಪ್ಪನ ದೀಪಾವಳಿ' ಪ್ರಬಂಧಗಳಲ್ಲಿ ನೋಡಬಹುದು. ತನ್ನ ಅಣ್ಣ ಆಫೀಸ್‌ನಲ್ಲಿ ಮೀಟಿಂಗ್ ಇರುವುದರಿಂದ ಹೆಂಡತಿಗೆ ಬೆಳಗ್ಗೆ ಬೇಗ ಎಬ್ಬಿಸು ಎಂದು ಹೇಳಿರುತ್ತಾನೆ. ಆದರೆ ಆಕೆ ಎಬ್ಬಿಸದಿದ್ದಾಗ ಬಾಯಿಗೆ ಬಂದಹಾಗೆ ಬೈಯ್ದು ಅವಳೊಂದಿಗೆ ಜಗಳವಾಡುತ್ತಾನೆ. ತಮ್ಮ ವಿಶ್ವನಾಥ ನೈಟ್ ಡ್ಯೂಟಿ ಮುಗಿಸಿಕೊಂಡು ಬರಲು ಹೊತ್ತಾಗಿರುತ್ತದೆ. ಅವನಿಗೆ ಊಟ ಬಡಿಸಿ ಬಂದು ರಾತ್ರಿ 4 ಗಂಟೆಗೆ ಮಲಗಿದ್ದರಿಂದ ಬೆಳಗ್ಗೆ ಏಳುವುದು ತಡವಾಗುತ್ತದೆ. ಅದಕ್ಕಾಗಿ ಅಣ್ಣ-ಅತ್ತಿಗೆಯನ್ನು ಬೈಯ್ದ. ಅಣ್ಣನ ಹಿರಿಮಗನ ಅಜಾಗರೂಕತೆಯಿಂದ ಮಗು ನೀರಿನ ತೊಟ್ಟಿಯಲ್ಲಿ ಬಿದ್ದಿತು. ತಾನು ಬರುವುದು ಸ್ವಲ್ಪ ತಡವಾಗಿದ್ದರೂ ಮಗು ನೀರು ಪಾಲಾಗುತ್ತಿತ್ತು. ಅದಕ್ಕಾಗಿ ಅತ್ತಿಗೆ ಮಗುವಿಗೆ ಹೊಡೆದಳು. ಮಗು ಇದಕ್ಕೆಲ್ಲಾ ಅಜ್ಜಿಯ ಚಾಡಿಮಾತೆ ಕಾರಣ ಎಂದು ಅಜ್ಜಿಗೆ ಹೊಡೆಯಿತು. ಸೊಸೆಯ ಪಿತೂರಿಯೇ ಇದಕ್ಕೆ ಕಾರಣ ಎಂದು ಅಜ್ಜಿ ಅತ್ತಿಗೆಯೊಂದಿಗೆ ಜಗಳ ತೆಗೆದಳು. ಹೀಗೆ ಎಲ್ಲವನ್ನು ನೋಡಿ ಬೇಸರವಾಗಿ ಎಲ್ಲರನ್ನು ಬೈಯ್ದು ಬಂದೆ ಎಂದು ತನ್ನ ಕುಟುಂಬದಲ್ಲಿ ಉಂಟಾದ ಟೆಂಪ್ರೇಚರ್ ಬಗ್ಗೆ ಲೇಖಕರು ತನ್ನ ಸ್ನೇಹಿತನಿಗೆ ಹೇಳುತ್ತಾರೆ. ಆದರೆ ಸ್ನೇಹಿತನು ಸಹ ಮನೆ ಬಿಟ್ಟು ಬಂದು ಮೂರು ದಿನವಾಗಿರುತ್ತದೆ !

ಅದೇ ರೀತಿ ಬಸಪ್ಪನ ದೀಪಾವಳಿಯಲ್ಲಿ ಒಬ್ಬೊಬ್ಬರನ್ನು ಸಿಡಿಯುವ ಪಟಾಕಿಗಳಿಗೆ ಹೋಲಿಸುತ್ತ ಅವರ ಸ್ವಭಾವವನ್ನು ಚಿತ್ರಿಸುವ ರಿಟೈರ್ಡ್ ಆಗಿ ಮನೆಯಲ್ಲೇ ಇದ್ದ ಬಸಪ್ಪ ದೀಪಾವಳಿ ಹಬ್ಬದ ಶುಭಾಶಯ ಕೋರಲು ಬಂದ ತನ್ನ ಮಗ ವಿರೂಪಾಕ್ಷನ ಸ್ನೇಹಿತನಿಗೆ ತನ್ನ ಸಂಸಾರದವರ ಗುಣಸ್ವಭಾವಗಳನ್ನು ಹೇಳುತ್ತಾನೆ. 'ದೊಡ್ಡಮಗ' ವಿರೂಪಾಕ್ಷ ಪಟಾಕಿಯ ಹಾಗೆ ಎಲ್ಲರ ಮೇಲೂ ಸಿಡಿಸಿಡಿ ಅನ್ನುತ್ತಾನೆ. ಮಗಳು ಶಾಂತಾ ಸುರುಸುರುಬತ್ತಿ, ಹಿರಿಯ ಸೊಸೆ ಆಕಾಶದ ಬಾಣದ ಹಾಗೆ. ಅನಾಮತ್ತಾಗಿ ಯಾರ್‍ಯಾರ ಮೇಲೊ ರೇಗುತ್ತಾಳೆ. 'ಕಿರಿಯವಳೂ ತಾನೇ ಜಗಳಕ್ಕೆ ಬರೋದಿಲ್ಲ ಮಕ್ಕಳನ್ನು ಸಣ್ಣಪಟಾಕಿ ಕೈಯಲ್ಲಿ ಹಚ್ಚಿ ಡಬ್ ಅನ್ನೋಕೆ ಮುಂಚೆ ಎಸೆಯಲ್ಲವೆ ? ಹಾಗೆ ಮಕ್ಕಳನ್ನು ಹಚ್ಚಿ ಬಿಟ್ ಬಿಡ್ತಾಳೆ ಎಲ್ಲಾರ್ ಮೇಲೂ.[೨] ಮನೆಯ

೧. ಸಂ. ತಾ.ರಾ. ನಾಗರಾಜ್, ಸ.ಲ.ಪ್ರ. ಅ.ರಾ.ಮಿತ್ರ. ಪ್ರ: 'ನೀಕೊಡೆ ನಾಬಿಡೆ, ಪು-೮೫
೨. ಸಂ. ತಾ.ರಾ. ನಾಗರಾಜ್, ಸ.ಲ.ಪ್ರ. ಅ.ರಾ.ಮಿತ್ರ. ಪ್ರ: 'ಬಸಪ್ಪನ ದೀಪಾವಳಿ, ಪು-೩೧೭

ಯಜಮಾನತಿ ಊದುಕಡ್ಡಿ ಬೆಂಕಿಪಟ್ಟಣದ ಹಾಗೆ ನಮ್ಮ ಮನೆಯಲ್ಲಿ ಎಲ್ಲಾರನ್ನೂ ಹಚ್ಚಿ ಹಚ್ಚಿ ಒಂದರ ಮೇಲೆ ಒಂದು ಹಚ್ಚಿ ಉರಿಯೋ ಹಾಗೆ ಮಾಡುತ್ತಾಳೆ. ಒಟ್ಟಾರೆ ನಮ್ಮ ಮನೆ ಮದ್ದಿನ ಕಾರ್ಖಾನೆ ಅಂತ ಬಸಪ್ಪ ಹೇಳುತ್ತಾನೆ.

ಈ ಮೇಲಿನ ಎರಡೂ ಘಟನೆಗಳನ್ನು ಗಮನಿಸಿದಾಗ ಕದನಗಳು ಆರಂಭವಾಗಲು ಮನುಷ್ಯನ ಗುಣಸ್ವಭಾವಗಳು ಕಾರಣವಾಗುತ್ತದೆ ಎಂಬುದು ತಿಳಿದುಬರುತ್ತದೆ. ಮನೆ ಟೆಂಪ್ರೇಚರ್‌ನಲ್ಲಿ ಸಣ್ಣಪುಟ್ಟ ಘಟನೆಗಳಗೂ ಇನ್ನೊಬ್ಬರ ಮೇಲೆ ರೇಗುವ ಕಿಡಿಗಿಡಿ ಸ್ವಭಾವಗಳು ಕಾಣಿಸುತ್ತವೆ. ಮನೆಯ ಕೆಲಸ ನಿರ್ವಹಿಸಬೇಕಾದ ಹೆಂಡತಿ, ಹೊರಗೆ ಕೆಲಸ ಮಾಡಿ ಸಾಕಾಗಿ ಮನೆಗೆ ಬಂದ ಗಂಡ, ಲೇಟಾಗಿ ಮನೆಗೆ ಬರುವ ವಿಶ್ವನಾಥ ಇವರೆಲ್ಲರೂ ಯಾರಾರ ಮೇಲಿನ ಸಿಟ್ಟನ್ನು ಮತ್ತಾರಲ್ಲೋ ತೋರಿ ಜಗಳಕ್ಕೆ ಕಾರಣವಾಗುತ್ತಾರೆ. ಅಂತಹ ವೇಳೆಯಲ್ಲಿ ತಾಳ್ಮೆ ಮುಖ್ಯ. ಹಾಗೆ ಬಸಪ್ಪನ ದೀಪಾವಳಿಯಲ್ಲಿ ಅವರ ಸ್ವಭಾವವನ್ನು ಪಟಾಕಿಗಳಿಗೆ ಹೋಲಿಸಿ ಹೇಳುವುದು ಔಚಿತ್ಯವಾಗಿದೆ. ಪಟಾಕಿಗಳು ಸಿಡಿದು ಶಬ್ದಮಾಲಿನ್ಯ ಉಂಟು ಮಾಡುವ ಹಾಗೆ ಮನೆಯಲ್ಲಿ ಪ್ರತಿಯೊಬ್ಬರೂ ಸಿಡಿದು ಜಗಳವಾಗಲು ಕಾರಣವಾಗುತ್ತಾರೆ. ಹೀಗೆ ಸಂಸಾರದಲ್ಲಿ ಪ್ರತಿಯೊಬ್ಬರಲ್ಲೂ ಹೊಂದಾಣಿಕೆ, ತಾಳ್ಮೆ ಇಲ್ಲದೆ ಕಲಹ ಆರಂಭವಾಗಿ ಒಡಕು ಕಾಣಿಸಿಕೊಳ್ಳುತ್ತವೆ. ಕೆ.ಎಸ್.ಎನ್.ರವರು ಹೇಳುವಂತೆ

ಮುಗಿಯದ ಅರಮನೆ ಈ ಸಂಸಾರ

ಸದಾ ರಿಪೇರಿಗೆ ತಕ್ಕ ವಿಚಾರ

ಎಂಬ ಮಾತನ್ನು ತಮ್ಮ ಪ್ರಬಂಧದಲ್ಲಿ ಬಳಸಿರುವುದು ಔಚಿತ್ಯಪೂರ್ಣವಾಗಿದೆ.

4.3 ಇತರೆ ಅಂಶಗಳು :

4.3.1 ಶಿಕ್ಷಣ ವ್ಯವಸ್ಥೆ :

ವಿದ್ಯಾರ್ಥಿಗಳ ಸಾಧನೆಯನ್ನು ಅಳೆಯಲು ಪರೀಕ್ಷೆ ಒಂದು ಮುಖ್ಯ ಸಾಧನ. ಇಲ್ಲಿ ವಿದ್ಯಾರ್ಥಿಯ ಜ್ಞಾನವನ್ನು ಪರೀಕ್ಷೆಗೆ ಒಳಪಡಿಸಿ ಅವನ ಬುದ್ಧಿಮಟ್ಟವನ್ನು ಅಳೆಯಲಾಗುತ್ತದೆ. ವಿದ್ಯಾರ್ಥಿಗಳು ತಾವು ಶಿಕ್ಷಣದಿಂದ ಗಳಿಸಿಕೊಂಡ ಜ್ಞಾನವನ್ನು ಅಳೆಯಲು ಪರೀಕ್ಷಾ ಪದ್ಧತಿ 'ಮಾನ'ದಂಡವಾಗಿದೆ! ಈ ಪರೀಕ್ಷೆಗಳಲ್ಲಿ ಯಶಸ್ಸು ಗಳಿಸಲು ವಿದ್ಯಾರ್ಥಿಗಳು ಸತತ ಅಭ್ಯಾಸ ಮಾಡಿ ಪರೀಕ್ಷೆ ಬರೆದು ಉತ್ತಮ ಅಂಕಗಳನ್ನು ಪಡೆದು ಉತ್ತೀರ್ಣರಾಗುತ್ತಾರೆ. ಆದರೆ ಇಂದು ಈ ಪರೀಕ್ಷಾಗಳನ್ನು ವಿದ್ಯಾರ್ಥಿಗಳು ಯಾವ ರೀತಿ ಎದುರಿಸುತ್ತಾರೆ ಎಂಬ ಅಂಶಗಳನ್ನು ಅ.ರಾ. ಮಿತ್ರ ಅವರು ತಮ್ಮ 'ಪರೀಕ್ಷಾ ಜ್ವರ' ಮತ್ತು 'ಮೂರು ಗಂಟೆಗಳು' ಪ್ರಬಂಧದಲ್ಲಿ ತಿಳಿಸುತ್ತಾರೆ. ವಿದ್ಯಾರ್ಥಿಗಳಿಗೆ ಪರೀಕ್ಷೆ ಬಂತೆಂದರೆ ಜ್ವರ ಆರಂಭವಾಗಿ ಬಿಡುತ್ತದೆ. ಒಂದು ಕಡೆ ಓದಿಲ್ಲದ ವಿದ್ಯಾರ್ಥಿಗಳಿಗೆ ಪರೀಕ್ಷೆಯ ಬಗ್ಗೆ ಹೆದರಿಕೆಯ ಜ್ವರವಿದ್ದರೆ ಮತ್ತೆ ಕೆಲವರಿಗೆ ಓದಿ ಓದಿ ಜ್ವರ ಬಂದಿರುತ್ತದೆ. ವರ್ಷ ಪೂರ್ತಿ ಕಲಿತ ವಿಷಯವನ್ನು ಪರೀಕ್ಷಾ ಕೊಠಡಿಯಲ್ಲಿ 3 ಗಂಟೆ

ವಾಂತಿ ಮಾಡಿದರೆ ಪರೀಕ್ಷೆ ಎದುರಿಸಿದ ಹಾಗೆ ಎನ್ನುವ ಟಿ.ಪಿ.ಕೈಲಾಸಂರವರ ಮಾತು ಸತ್ಯ ಎನಿಸುತ್ತದೆ. ಪರೀಕ್ಷೆಯ ಸಮಯದಲ್ಲಿ ಏನೆಲ್ಲಾ ಸಂದರ್ಭ, ಸನ್ನಿವೇಶಗಳು ಎದುರಾಗುತ್ತವೆ ಎಂಬುದನ್ನು ಸ್ವತಃ ಅಧ್ಯಾಪಕರಾಗಿದ್ದ ಅ.ರಾ. ಮಿತ್ರ ತಿಳಿಸುತ್ತಾರೆ. ವಿದ್ಯಾರ್ಥಿಗಳ ಜ್ಞಾನವನ್ನು ಅಳೆಯುವಲ್ಲಿ ಇತರ ಅಂಶಗಳೆಲ್ಲವೂ ಗೂಡವಾಗಿ ಬರೀ ಪರೀಕ್ಷೆ ಬರೆಯುವುದೊಂದೆ 'ಮಾನ'ದಂಡವಾಗಿರುವುದು ವಿಪರ್ಯಾಸ! 'ವಿದ್ಯಾರ್ಥಿಯ ದೇಹದಾರ್ಢ್ಯ, ಮನೋಸ್ವಾಸ್ಥ್ಯ, ಕ್ರೀಡಾಭಿರುಚಿ, ಲೋಕಜ್ಞಾನ, ನಡವಳಿ ಮೊದಲಾದ ಯಾವ ಇತರ ಅಂಶಗಳು ಸಹಾಯಕ್ಕೆ ಬರುವುದಿಲ್ಲ.'[೧] ಎನ್ನುವಾಗ ಪರೀಕ್ಷೆಯ ನಿಜವಾದ ಅರ್ಥ ಕಳೆದು ಕೊಂಡಂತೆ ಭಾಸವಾಗುತ್ತದೆ. ಕೇವಲ ಪರೀಕ್ಷೆಯಲ್ಲಿ ಆತ ಗಳಿಸುವ ಅಂಕಗಳೇ ಅಂತಿಮವಾಗಿರುವುದರಿಂದ ವಿದ್ಯಾರ್ಥಿಗಳು ಇದರಲ್ಲಿ ಜಯಶೀಲರಾಗಲು ಏನೆಲ್ಲಾ ಮಾರ್ಗಗಳನ್ನು ಅನುಸರಿಸುತ್ತಾರೆ? ಎಂಬುದನ್ನು ತಿಳಿದರೆ ಆಶ್ಚರ್ಯವಾಗುತ್ತದೆ.

ಮೂರು ಗಂಟೆ ಪರೀಕ್ಷೆ ಎದುರಿಸಲು ಹಲವಾರು ವಿದ್ಯಾರ್ಥಿಗಳು ಹಲವು ರೀತಿಯಲ್ಲಿ ತಯಾರು ನಡೆಸಿರುತ್ತಾರೆ. ಕೆಲವರು ಕಳ್ಳದಾರಿಯ ಮೂಲಕ ನುಸುಳಿ ಉತ್ತೀರ್ಣರಾಗಲು ಹೊಂಚು ಹಾಕಿದರೆ ಮತ್ತೆ ಕೆಲವರು ಸತತ ಅಭ್ಯಾಸದಿಂದ ಪಾಸಾಗಲು ಸಜ್ಜಾಗಿರುತ್ತಾರೆ. ಪರೀಕ್ಷಾ ಸಮಯದಲ್ಲಿ ಒಂದು ಕಡೆ ವಿದ್ಯಾರ್ಥಿಗೆ ಬರೆಯುವ ಶಿಕ್ಷೆಯಾದರೆ ಮತ್ತೊಂದು ಕಡೆ ಹುಡುಗರು ನಕಲು ಮಾಡುವುದನ್ನು ತಡೆಯಲು ಶಿಕ್ಷಕರಿಗೆ ಶಿಕ್ಷೆಯನ್ನು ನೀಡುವಂತೆ ಮೇಲ್ವಿಚಾರಣೆಗೆ ಹಾಕಲಾಗಿರುತ್ತದೆ. ಪರೀಕ್ಷಾ ಕೊಠಡಿಯ ಮೇಲ್ವಿಚಾರಕರು ಗಸ್ತು ಹೊಡೆಯುತ್ತಾ, ಪೆರೆಡ್ ನಡೆಸುತ್ತಾ, ಎಲ್ಲರನ್ನು ಗಮನಿಸುತ್ತಿರುತ್ತಾರೆ. ಇವರ ಸ್ವಭಾವವು ವಿಚಿತ್ರವಾದುದೆ ಒಂದು ಕಡೆ ನಿಲ್ಲಲಾಗದೆ ಯಾರಾದರೂ ನಕಲಿ ಮಾಡುತ್ತಿರುತ್ತಾರ ಎಂದು ಎಲ್ಲರನ್ನು ಗಮನಿಸುತ್ತಿರುತ್ತಾರೆ ಕೆಲವರು ಪರೀಕ್ಷಾ ಕೊಠಡಿಯಲ್ಲಿ ನಿಂತು ನಿಂತು ಬೇಸರವಾಗಿ ಪಕ್ಕದ ಕೊಠಡಿಯವರೊಂದಿಗೆ ಹರಟುತ್ತ ಕಾಲ ಕಳೆಯುವ ಮಾತಿನ ಚಟವಿರುವ ಉಪಾಧ್ಯಾಯರು ಕಂಡು ಬರುವುದು ಒಂದು ಕಡೆಯಾದರೆ ಮತ್ತೊಂದು ಕಡೆ ಒಂದೇ ಕಡೆ ಕುರ್ಚಿಯಲ್ಲಿ ಅಲ್ಲಾಡದೆ ಕೂತುಬಿಟ್ಟಿರುತ್ತಾರೆ. ಎಲ್ಲಾ ಉಪಾಧ್ಯಾಯರು ಒಂದೇ ಸಮನಿರುವುದಿಲ್ಲ. ವಿದ್ಯಾರ್ಥಿಗಳಿಗೆ ನಕಲು ಮಾಡಲು ಅವಕಾಶ ನೀಡಿ ಅವರಿಂದ ಒಳ್ಳೆಯವರು ಎನಿಸಿಕೊಳ್ಳುವವರು ಕೆಲವರಿದ್ದರೆ, ನಕಲು ಮಾಡಲು ಅವಕಾಶ ನೀಡದ ದೂರ್ವಾಸನ ಮುನಿಯ ಸ್ವಭಾವದವರು ಕೆಲವರಿರುತ್ತಾರೆ. ಮತ್ತೆ ಮೂರನೇ ವರ್ಗದವರು ಅತೀ ಸದರವನ್ನು ಬಿಡದೆ ಅತ್ತ ಶಿಸ್ತಿನ ವಿಚಾರದಲ್ಲೂ ಕಟ್ಟುನಿಟ್ಟಾಗಿರಬೇಕೆಂಬ ಛಲವೂ ಇರದವರು ಇರುತ್ತಾರೆ. ಇಂತಹವರನ್ನು 'ಮುರಾರಿ' ಸ್ವಭಾವದವರೆಂದು ಗೇಲಿ ಮಾಡಿದ್ದಾರೆ. ವಿದ್ಯಾರ್ಥಿಗಳಿಗೆ ಶಿಸ್ತನ್ನು ಕಲಿಸಬೇಕಾದ ಉಪಾಧ್ಯಾಯರುಗಳೇ ಉಡಾಫೆಯ ಮನೋಭಾವ ವ್ಯಕ್ತಪಡಿಸುವುದು ವಿಷಾದ ಎನಿಸುತ್ತದೆ. ಒಂದರ್ಥದಲ್ಲಿ ವಿದ್ಯಾರ್ಥಿಗಳು ಹಾಳಾಗಲು ಶಿಕ್ಷಕ ವರ್ಗವು ಕಾರಣವೆಂದರೆ ತಪ್ಪಾಗುವುದಿಲ್ಲ.

೧. ಸಂ. ತಾ.ರಾ. ನಾಗರಾಜ್, ಸ.ಲ.ಪ್ರ. ಅ.ರಾ.ಮಿತ್ರ. ಪ್ರ: 'ಪರೀಕ್ಷಾ – ಜ್ವರ', ಪು-೩೯೪

ಪರೀಕ್ಷೆ ಬರೆಯುವ ವಿದ್ಯಾರ್ಥಿಗಳ ಸ್ವಭಾವ ಪರೀಕ್ಷಾ ಕೊಠಡಿಯಲ್ಲಿ ವಿಚಿತ್ರವಾಗಿದ್ದು ಶಿಸ್ತಿನ ಅರಿವಿಲ್ಲದ. ಭವಿಷ್ಯದ ಬಗ್ಗೆ ಕಾಳಜಿ ಇಲ್ಲದ. ಕಷ್ಟಪಟ್ಟು ಓದದ ಮಹಾನುಭಾವರು ನಕಲು ಮಾಡಿ ಪಾಸಾಗಬಹುದೆಂಬ ಮಹಾದಾಸೆಯನ್ನು ಹೊಂದಿವರಿಗೇನು ಕಡಿಮೆ ಇಲ್ಲ. ಇಂತವರು ಯಾವ ರೀತಿ ಜ್ಞಾನವನ್ನು ಪಡೆದಿರದ ದಂಡಪಿಂಡಗಳು ಪ್ರಶ್ನೆ ಪತ್ರಿಕೆಯನ್ನು ನೋಡಿದ ತಕ್ಷಣ ನಿಂತ ನೆಲವೆ ಕುಸಿದಂತೆ ಪರದಾಡುತ್ತಾರೆ. ಏಕೆಂದರೆ ಇವರಿಗೆ ಪರೀಕ್ಷೆ ಎದುರಿಸಬೇಕಾದರೆ ಮುಂಜಾಗ್ರತವಾಗಿ ಕೈಗೊಳ್ಳಬೇಕಾದ ಯಾವ ಕ್ರಮಗಳನ್ನು ಅನುಸರಿಸದೆ ಬಂದಿರುತ್ತಾರೆ. ಪರೀಕ್ಷೆ ಕೊಠಡಿಯಲ್ಲಿ ಇವರು ತೋರುವ ವರ್ತನೆ ನಗುತರಿಸುವಂತದ್ದು. ಪರೀಕ್ಷೆ ಒಂದು ಯುದ್ಧದಂತೆ ಬಾಸವಾಗುವುದು ಪರೀಕ್ಷೆಯ ಕ್ಲಿಷ್ಠತೆಯನ್ನು ತಿಳಸುತ್ತದೆ.

ದುರ್ಮಾರ್ಗದ ಮೂಲಕ ಪರೀಕ್ಷೆ ಬರೆಯಲು ತೊಡಗುವ ವಿದ್ಯಾರ್ಥಿಗಳ ಚಾಣಾಕ್ಷತೆಯನ್ನು ಮೆಚ್ಚಲೇಬೇಕು. ಚೀಟಿಗಳನ್ನು ಬಚ್ಚಿಟ್ಟಿರುವ ಸ್ಥಳಗಳು ವಿಸ್ಮಯ ಹುಟ್ಟಿಸುತ್ತವೆ. ಚೀಟಿಗಳನ್ನು ಹೇಗೆ ಬರೆದಿಟ್ಟುಕೊಳ್ಳಬೇಕು. ಅಧ್ಯಾಪಕರ ಕಣ್ಣು ಹೇಗೆ ತಪ್ಪಿಸಬೇಕು. ಎಲ್ಲಿ ಬಚ್ಚಿಟ್ಟುಕೊಳ್ಳಬೇಕು. ಯಾವ ಆಕಾರದ ಚೀಟಿ ಬರೆದಿಟ್ಟುಕೊಳ್ಳಬೇಕು ಎಷ್ಟೇ ಅಗಲ, ಉದ್ದ ಇರಬೇಕು ಎಂಬುದರ ಬಗ್ಗೆ ಆಸಕ್ತಿ ತೋರುವ ವಿದ್ಯಾರ್ಥಿಗಳು ಓದಿನ ವಿಷಯದಲ್ಲಿ ತೋರುವುದಿಲ್ಲ. ಮೇಲ್ವಿಚಾರಕರ ಕಣ್ಣುತಪ್ಪಿಸಿ ತಾವು ತಂದಿರುವ ಚೀಟಿಯನ್ನು ಬಳಸಲು ಯಾವೆಲ್ಲಾ ಆಲೋಚನೆಗಳನ್ನು ಮಾಡುತ್ತಾರೆ. 'ಪರೀಕ್ಷೆಯ ಜ್ವರಕ್ಕೆ ಚೀಟಿಯೇ ಮದ್ದು' ಎಂಬ ಭಾವನೆ ಹುಡುಗರಲ್ಲಿ ಬೆಳೆದುಬಿಟ್ಟಿದೆ. ಪರೀಕ್ಷೆ ಬರೆಯಲು ಬಂದ ವಿದ್ಯಾರ್ಥಿಗಳು ತಮ್ಮ ಅಲ್ಪಜ್ಞಾನವನ್ನು ಕೊಠಡಿಯಲ್ಲೂ ಪ್ರದರ್ಶಿಸುವುದನ್ನು ಗಮನಿಸಿದಾಗ ನಿಜವಾಗಲು ಬೇಸರ ತರಿಸುತ್ತವೆ. ಯಾವ ಅಭ್ಯಾಸವೂ ಇಲ್ಲದೆ, ತರಗತಿಗೆ ಹಾಜರಾಗದೆ ಹಾಜರಾತಿಯು ಮುಖ್ಯವಾಗಿರದೆ ಕೇವಲ ಮೋಜಿಗಾಗಿ, ಕಾಲಕಳೆಯಲೆಂದೇ ಶಾಲಾ-ಕಾಲೇಜಿಗೆ ಬರುವ ವಿದ್ಯಾರ್ಥಿಗಳಿಗೆ ಪರೀಕ್ಷೆ ಪರ್ವತಾರೋಹಣದಂತೆ ಕಷ್ಟ ಎನಿಸದೆ ಇನ್ನೇನು ? ಪರ್ವತಾರೋಹಿ ಏನೆಲ್ಲಾ ಕಷ್ಟಗಳು ಎದುರಾದರೂ ಅದಕ್ಕೆಲ್ಲ ಪೂರ್ವ ಸಿದ್ಧತೆ ಮಾಡಿಕೊಂಡಿರುತ್ತಾನೆ. ಆದರೆ ವಿದ್ಯಾರ್ಥಿಗಳಿಗೆ ಮುಂಬರುವ ಸಮಸ್ಯೆಗಳ ಅರಿವಿರದೆ, ಪರೀಕ್ಷೆ ಸಮಯದಲ್ಲಿ ಒಂದು ಹಾಳೆಯನ್ನು ಸ್ವಲ್ಪವು ಅಂದರೆ ಕಡೆದಂತೆ ಹೇಗಿರುತ್ತವೋ ಹಾಗೆ ಇದ್ದ ರೂಪದಲ್ಲೇ ಹಿಂತಿರುಗಿಸಿರುತ್ತಾರೆ. ಪೆನ್ನಿನ ಮಸಿಯು ಸ್ವಲ್ಪವೂ ಖರ್ಚಾಗದಂತೆ ಪರೀಕ್ಷಾ ಉತ್ತರ ಪತ್ರಿಕೆಯನ್ನು ಹಿಂದಿರುಗಿಸುವುದನ್ನ ನೋಡಿದಾಗ ವಿದ್ಯಾರ್ಥಿಗಳಿಗೆ ಪರೀಕ್ಷೆ ಬಗ್ಗೆ ಇರುವ ತಾತ್ಸಾರ ಮನೋಭಾವವನ್ನು ಕಾಣಬಹುದು. ಔಪಚಾರಿಕತೆಗೆ ಎಂಬಂತೆ ಹೋಂ ವರ್ಕ್ ಕಿರುಪರೀಕ್ಷೆ, ಮಧ್ಯಮ ಪರೀಕ್ಷೆ, ಎದುರಿಸದೆ ವಾರ್ಷಿಕ ಪಬ್ಲಿಕ್ ಪರೀಕ್ಷೆಯನ್ನು ಎದುರಿಸುವ ವಿದ್ಯಾರ್ಥಿಗೆ ನಿಜವಾಗಿರುವ ಕಷ್ಟ ಪದವೀಧರರನ್ನು ಉಳಲು ಬಿಟ್ಟ ಹಾಗೆ' ಏನೂ ಓದದ, ನಿರಂತರ ಅಭ್ಯಾಸವಿಲ್ಲದ ಸೋಮಾರಿಗಳು ಪರೀಕ್ಷೆ ಬರೆಯಲು ಹೇಗೆ ಸಾಧ್ಯವಾಗುತ್ತದೆ.

ವಿದ್ಯಾರ್ಥಿಯ ಜೀವನದಲ್ಲಿ ಶಿಸ್ತು ಮುಖ್ಯ. ಆದರೆ ಶಿಸ್ತಿನ ಅರಿವಿಲ್ಲದ ವಿದ್ಯಾರ್ಥಿಗಳಿಗೆ ಪರೀಕ್ಷಾ ಕೊಠಡಿಯಲ್ಲಿ ಶಿಸ್ತು ಬಂದು ಬಿಡುತ್ತದೆ. ಏಕೆಂದರೆ, ಹೇಗಾದರೂ ಮಾಡಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಬಿಡಬೇಕೆಂದು ಚೀಟಿಗಳನ್ನು ತಂದಿರುತ್ತಾರೆ. ಇಲ್ಲಿ ವಿದ್ಯಾರ್ಥಿಗಳ ಪರಿಶ್ರಮ ಗೌಣವಾಗಿ, ಕಳ್ಳ ದಾರಿಗಳಲ್ಲಿ ನುಸುಳಲು ಹವಣಿಸುತ್ತಿರುತ್ತಾರೆ. ಆದರೆ ಅದಕ್ಕೆ ಅವಕಾಶ ನೀಡದಿದ್ದಾಗ ಇನ್ನೇನು ಅಂತಿಮ ಗಂಟೆ ಬಾರಿಸಿತು ಎನ್ನುವಾಗ ಹಲವು ಭೂಪರು ರಿಜಿಸ್ಟಾರ್ ನಂಬರ್ ಬರೆಯುವ ಟ್ಯಾಗ್ ಮಾಡದ ಅಡಿಶಿನಲ್ ನಂಬರ್ ಬರೆಯದವರು ಇರುತ್ತಾರೆ. ಹಲವು ಮಂದಿಗೆ ಭಯ ಆವರಿಸಿ ಕೊಂಡಿರುವುದು ಒಂದು ಕಡೆಯಾದರೆ ಮತ್ತೊಂದು ಕಡೆ ಅವರಿವರ ಹತ್ತಿರ ಕದ್ದು ಉತ್ತರವನ್ನು ನೋಡಿ ಬರೆಯುವ ಆತರು ಈ ಆತುರಗಳ ಮಧ್ಯೆ ಬರಬಹುದಾದ ಉತ್ತರಗಳು ಮರೆತುಹೋಗುತ್ತವೆ. ಇಂತಹ ಸನ್ನಿವೇಶದಲ್ಲಿ ಉಪಾಧ್ಯಾಯರ ಕೈಕಾಲು ಹಿಡಿಯುವ, ಹಲ್ಲು ಗಿಂಜುತ್ತಾ ವಕ್ರದಂತಿ ಪ್ರದರ್ಶಿಸುವ ವಿದ್ಯಾರ್ಥಿಗಳು ಉಪಾಧ್ಯಾಯರ ಮನಗೆಲ್ಲಲು, ಅವರ ಔದಾರ್ಯಕ್ಕೆ ಒಳಗಾಗಲು ಪೀಠಿಕೆ ಹಾಕುತ್ತಾರೆ. ಮುಂತಾದ ಸನ್ನಿವೇಶಗಳು, ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಓದದಿರುವುದಕ್ಕೆ ಸಾಕ್ಷಿಯಾಗುತ್ತದೆ. ನಕಲು ಮಾಡುವಾಗ ಒಂದು ವೇಳೆ ಸಿಕ್ಕಿ ಹಾಕಿಕೊಂಡರೆ ಸಾಕ್ಷವನ್ನು ನಾಶಮಾಡುವ ಮಹಾಭೂಪರು ಏನೆಲ್ಲ ತೊಂದರೆಗಳನ್ನು ತಂಡೊಡ್ಡಬಹುದು ಎಂಬುದನ್ನು ನೆನಯಬಹುದು. 'ಕೆಲವರೂ ಯಾರ ಬೆದರಿಕೆಗಳಿಗೆ ಜಗ್ಗದ ಕೆರೆಯ ತೊಬೆತ್ತಿ ತಮ್ಮ ಗದ್ದೆಗೆ ಮಾತ್ರ ನೀರು ಬಿಟ್ಟಿಕೊಳ್ಳುವ ಯಾರ ಬೆದರಿಕೆಗೂ ಜಗ್ಗದ ಕೋಟೇಶ್ವರರು ಕಳ್ಳ ಬೆಳೆ ತೆಗೆಯಲು ಉತ್ಸಾಹದಲ್ಲಿರುತ್ತಾರೆ'.[೧]

ಹೀಗೆ ಅವರಿವರ ಉತ್ತರವನ್ನು ನೋಡಿ ಹೇಗಾದರು ಪಾಸಾದರೆ ಸಾಕು ಎನ್ನುವ ವಿದ್ಯಾರ್ಥಿಗಳು ಪರೀಕ್ಷೆಯನ್ನು ಒಂದು ಸಾಮಾನ್ಯ ಸಂಗತಿ ಎಂದು ತಿಳಿದಿರುವುದು ವಿಷಾದದ ಸಂಗತಿ. ಕೇವಲ ದುರ್ಮಾರ್ಗದಲ್ಲಿ ನಡೆಯ ಬಯಸುವ ವಿದ್ಯಾರ್ಥಿಗಳು ಉತ್ತಮ ಸಮಾಜದ ನಿರ್ಮಾತೃವಾಗಲು ಹೇಗೆ ಸಾಧ್ಯ ? ಇಂತವರಿಗೆ ಪರೀಕ್ಷೆ ಬಂದು ನೆಪ ಮಾತ್ರ. ಇಂತ ಪರೀಕ್ಷೆಗಳಿಂದ ವಿದ್ಯಾರ್ಥಿಗಳನ್ನು ಜ್ಞಾನವನ್ನು ಅಳೆಯಲು ಹೊರಟಿರುವುದು ವಿಪರ್ಯಾಸ. ವಿದ್ಯಾರ್ಥಿಗಳ ಪರೀಕ್ಷೆಗೆ ಸಜ್ಜುಗೊಳಿಸುವ ಬದಲು ತಂದೆ ತಾಯಿ, ಗುರು ಹಿರಿಯರು ವಿದ್ಯಾರ್ಥಿಗಳಿಗೆ ಜ್ಞಾನವನ್ನು ಗಳಿಸುವ ಮಾರ್ಗದರ್ಶನ ನೀಡಬೇಕೇ ಹೊರತು ಮಾರ್ಕ್ಸ್-ವಾದಕ್ಕೆ ಕಟ್ಟಿ ಬೀಳಬಾರದು. ಆಗ ಮಾತ್ರ ಪರೀಕ್ಷಾ ಕೊಠಡಿಯ ೩ ಗಂಟೆಗಳನ್ನು ವಿದ್ಯಾರ್ಥಿಗಳು ಸದುಪಯೋಗ ಪಡಿಸಿಕೊಳ್ಳುತ್ತಾರೆ. ಹೀಗೆ ಪರೀಕ್ಷಾ ಸಮಯದಲ್ಲಿ ವಿದ್ಯಾರ್ಥಿಗಳು ತೋರ್ಪಡಿಸುವ ಅಂಶಗಳನ್ನು ವಿಡಂಬಿಸಿ ಪರೀಕ್ಷಾ ಪದ್ಧತಿಯ, ಶಿಕ್ಷಣ ವ್ಯವಸ್ಥೆಯ ಲೋಪದೋಷಗಳನ್ನು ಬಯಲಿಗೆಳೆದಿದ್ದಾರೆ.

೧. ಸಂ. ತಾ.ರಾ. ನಾಗರಾಜ್, ಸ.ಲ.ಪ್ರ. ಅ.ರಾ.ಮಿತ್ರ. ಪ್ರ: 'ಪರೀಕ್ಷಾ – ಜ್ವರ', ಪು-೩೯೮

4.3.2 ಭಾಷಿಕ ವಿಡಂಬನೆ :

ಇಂದು ವಿದ್ಯಾವಂತ ವರ್ಗ ಉಪಾಧ್ಯಾಯರು ಕನ್ನಡದಲ್ಲಿ ವ್ಯವಹಾರ ನಡೆಸುವ ಅಧಿಕಾರಿಗಳು ಬಳಸುವ ಕನ್ನಡ ಭಾಷೆ ಶುದ್ಧವಾಗಿರದೆ, ಅನರ್ಥ ಬರುವ ರೀತಿ ಪದಗಳನ್ನು ಉಚ್ಚರಿಸುತ್ತಾರೆ. ಬರವಣಿಗೆಯಲ್ಲಿ ಸರಿಯಾದ ವಾಕ್ಯರಚನೆ, ಪದಬಳಕೆ ಬಳಸದೆ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳು ಮೌಲ್ಯಮಾಪಕರಿಗೆ ಕಂಗಾಲಾಗುವಂತೆ ಮಾಡುತ್ತಾರೆ. ಹೀಗೆ ವಿದ್ಯಾರ್ಥಿಗಳಿಗೆ ಭಾಷೆಯನ್ನು ನಮ್ಮ ಇಂದಿನ ಶಿಕ್ಷಣ ವ್ಯವಸ್ಥೆ ಕಲಿಸುತ್ತಿದೆ. ಅಲ್ಪಪ್ರಾಣ, ಮಹಾಪ್ರಾಣಗಳ ಬಳಕೆಯಲ್ಲಿ ವ್ಯತ್ಯಾಸ ತಿಳಿಯದೆ ಬಳಸಿದಾಗ ಅನರ್ಥಕ್ಕೆ ಕಾರಣವಾಗುತ್ತದೆ. ಚಿಕ್ಕಮಕ್ಕಳಿಗೆ ಸರಿಯಾದ ಕಾಗುಣಿತ ವಾಕ್ಯರಚನೆಯನ್ನು ಇಂದಿನ ಶಿಕ್ಷಕರು ಸರಿಯಾಗಿ ಅರ್ಥ ಮಾಡಿಸಿ ಕಲಿಸುವ ಅವಶ್ಯಕತೆ ಇದೆ. ನಾವು ಮಾತಾಡುವ ಭಾಷೆಗೂ ಹಾಗೂ ಬರವಣಿಗೆಯ ಭಾಷೆಗೂ ಸಾಕಷ್ಟು ವ್ಯತ್ಯಾಸಗಳಿದ್ದು ವ್ಯಾಕರಣ ದೋಷದಿಂದಾಗುವ ಅನರ್ಥವನ್ನು ಸರಿಯಾದ ಪದಗಳ ಬಳಕೆ, ಅಕ್ಷರಉಚ್ಚರಣೆ ವಾಕ್ಯರಚನೆ, ಛಂದಸ್ಸು, ಅಲಂಕಾರಗಳಿಗೆ ಸಂಬಂಧಪಟ್ಟ ಅಂಶಗಳನ್ನು 'ಶಬ್ಧ ಶುದ್ಧಿ', 'ಬೆಂಗಳೂರು Vs ಧಾರವಾಡ', 'ಛಂದೋವಿಹಾರ' 'ಪಂಡಿತನ ಸಂಕಟ', 'ಭಾಷಾಬಾಂಧವ್ಯ' ಪ್ರಬಂಧದಲ್ಲಿ ತೆರೆದಿಟ್ಟಿದ್ದಾರೆ.

ಭಾಷಾ ದೋಷಕ್ಕೆ ಕಾರಣವಾಗುವ ಅಂಶಗಳನ್ನು ಚರ್ಚಿಸಿ ಭಾಷಾ ದೋಷದ ಅಂಶಗಳನ್ನು ಸರಿಪಡಿಸುತ್ತ ತಪ್ಪಾಗಿ ಬಳಸುವ ಸನ್ನಿವೇಶವನ್ನು ಹಾಸ್ಯಸ್ಪದವಾಗಿ ವಿಡಂಬಿಸಿದ್ದಾರೆ. ಆಡು ಮಾತಿಗೂ ಬರವಣಿಗೆಯ ಮಾತಿಗೂ ಸಾಕಷ್ಟು ವ್ಯತ್ಯಾಸಗಳಿದ್ದು ನಾವು ನುಡಿದಂತೆ ಬರೆಯುವುದಿಲ್ಲ ನಿಜ, ಆದರೆ ಅಲ್ಪಪ್ರಾಣ ಮಹಾಪ್ರಾಣ ಬಳಕೆಯಲ್ಲಿ ವ್ಯತ್ಯಾಸವಾದಾಗ ಪದಗಳ ಅರ್ಥ ಕೆಟ್ಟು ಹೋಗುವುದು ಬರವಣಿಗೆಯಲ್ಲಿ ಮುಖ್ಯವಾಗಿ ಕಂಡು ಬರುತ್ತದೆ.

ಇಂಗ್ಲಿಷ್‌ನಲ್ಲಿ ಭಾಷಾದೋಷ ನಿವಾರಣೆಗೆ ಹಲವು ಪುಸ್ತಕಗಳಿದ್ದು ಕನ್ನಡಕ್ಕೆ ಅಂತಹ ಪುಸ್ತಕಗಳ ಅಗತ್ಯವಿದೆ ಹಾಗೂ ಭಾಷಾ ವಿಚಾರದ ಬಗ್ಗೆ ಚರ್ಚೆಗಳು ನಡೆದು ವಿಚಾರಸಂಕಿರಣಗಳನ್ನು ಹಮ್ಮಿಕೊಂಡು ಹೊಸ ಪದಗಳಿಗೆ ಸರಿಯಾದ ಅರ್ಥ ಕೊಡುವುದು ಇಂದು ಅಗತ್ಯವಾಗಿದೆ. ಅಸಂಖ್ಯಾತ ಬೇರೆ ಭಾಷೆ ಪದಗಳು ನಮ್ಮ ಭಾಷೆಗೆ ನುಸುಳುತ್ತಿದ್ದು ಅವುಗಳಿಗೆ ಸರಿಯಾದ ಅರ್ಥ ಕಲ್ಪಿಸಬೇಕಾದ ಅಗತ್ಯವಿದೆ ಈ ಕೆಲಸವನ್ನು ಇಂದಿನ ವಿದ್ವಾಂಸರು ಸರ್ವ ಸಮ್ಮತದಿಂದ ಮಾಡಬೇಕಾಗಿದೆ.

ನಾ ಹೇಳಿದ ಪದವೇ ಅಂತಿಮವಾಗಬೇಕು ಎಂಬ ಅಹಂಭಾವ ಬಿಟ್ಟು ಸರಿಯಾದ ಪದಗಳ ಅರ್ಥವನ್ನು ನೀಡಬೇಕಿದೆ. ಭಾಷಾ ದೋಷ ಸರಿಪಡಿಸುವ ಕೆಲವು ಪುಸ್ತಕಗಳು ಕನ್ನಡದಲ್ಲಿ ಇಲ್ಲವೆಂದಲ್ಲ. ಧಾರವಾಡಕರ 'ಭಾಷಾಶಾಸ್ತ್ರ', ಶ್ರೀ ಎಸ್.ಎಂ.ವೃಷಬೇಂದ್ರ ಸ್ವಾಮಿಯವರ 'ಬರೆಯುವದಾರಿ', ಶ್ರೀ ಎನ್. ಪ್ರಹ್ಲಾದರಾಯರವರ ಲೇಖನ 'ಕಲೆ',

ಮಾಸ್ತಿಯವರ 'ನಮ್ಮ ನುಡಿ'. ಹೆಚ್.ಎಂ. ಕೃಷ್ಣರಾವ್‌ರವರ 'ವಾಣಿಜ್ಯ ವಿಧಾನ' ಮುಂತಾದವುಗಳಲ್ಲಿ ಭಾಷೆ ಕುರಿತು ವಿಚಾರಗಳಿವೆ. ಉಳಿದ ಭಾಷೆಗಳಿಗೆ ಹೋಲಿಸಿದರೆ ವ್ಯಾಕರಣಾಂಶಗಳಿಗೆ ಸಂಬಂಧಪಟ್ಟಂತಹ ಕೃತಿಗಳು ಕನ್ನಡದಲ್ಲಿ ಹೊರಬಂದಿರುವುದು ಬಹಳ ಕಡಿಮೆ.

ಕನ್ನಡ ಅಶುದ್ಧ ಪದಬಳಕೆಗೆ ಹಲವಾರು ಕಾರಣಗಳಿರುತ್ತವೆ.

1) ಆಡು ಮಾತು ಮತ್ತು ಬರವಣಿಗೆ ಭಾಷೆಗಿರುವ ವ್ಯತ್ಯಾಸ.

2) ಪದಗಳ ವ್ಯತ್ಯಾಸ, ಉಚ್ಛರಣ ವ್ಯತ್ಯಾಸ.

3) ಧ್ವನಿ ಗ್ರಹಣದಿಂದಾಗುವ ವ್ಯತ್ಯಾಸ.

4) ಅನ್ಯದೇಶಿ ಪದಗಳು.

5) ಐಕ್ಯತೆಗಳ ವಿಚಿತ್ರ ಮಿಶ್ರಣ.

ಹೀಗೆ ಹಲವು ಕಾರಣಗಳಿಂದ ಭಾಷೆಯ ಉಚ್ಛಾರಣೆ ಮತ್ತು ಬರವಣಿಗೆಯಲ್ಲಿ ದೋಷ ಕಂಡು ಬರುವುದನ್ನು ತಮ್ಮ ಪ್ರಬಂಧದಲ್ಲಿ ಕಟ್ಟಿಕೊಟ್ಟಿದ್ದಾರೆ.

ಭಾಷಾ ಬಳಕೆಗೆ ಮೂಲ ಪದವನ್ನು ಅರಿಯುವ ಅಗತ್ಯವಿದೆ. ಸಾದೃಶ್ಯ ದೋಷದಿಂದ ಪದಗಳ ಬಳಕೆ ತಪ್ಪಾಗುತ್ತವೆ. ಐಕ್ಯ ಅಥವಾ ಏಕತೆ ಎನ್ನುವ ಬದಲಾಗಿ ಐಕ್ಯತೆ ಎಂದು ತಪ್ಪು ವಿಚಾರಣೆ ಮಾಡುತ್ತೇವೆ. ಹೀಗೆ ಕೆಲವು ಸಂದರ್ಭದಲ್ಲಿ ಸಾದೃಶ್ಯಕರಣದಿಂದ ಭಾಷೆಯಲ್ಲಿ ತಪ್ಪುಗಳನ್ನು ಎಸಗುತ್ತೇವೆ. ಒತ್ತಕ್ಷರಗಳ ಉಚ್ಛಾರಣೆಗೆ ಸ್ಪಷ್ಟವಾಗಿ ತಿಳಿಯದ 'ಶಬ್ದ' ಪದ ಬಳಕೆಗೆ 'ಶಬ್ಧ' ಎಂದು ಅಲ್ಪಪ್ರಾಣಕ್ಕೆ ಬದಲಾಗಿ ಮಹಾಪ್ರಾಣ ಬಳಸುತ್ತೇವೆ.

ಜ್ಯೋತಿಷ-ಜ್ಯೋತಿಷ್ಯ ಆಗಿ ಬಳಕೆಯಾಗಿದೆ. ಸೌಲಭ್ಯಕಾಂಕ್ಷೆಯಿಂದ ಸಾಹಿತಿಗಳು ಕೂಡ ಈ ರೀತಿ ತಪ್ಪು ಪದ ಬಳಸುತ್ತಾರೆ. ಶೃತಿ, ಶೃದ್ಧೆ, ವೃತ, ಶ್ರುತಿ, ಶ್ರದ್ಧೆ, ವ್ರತ

'ದುರ್ಯೋಧನನನ್ನು 'ದನದ' ಜಾತಿಗೆ ಮಹಾಭೀಮನನ್ನು 'ಬೀಮ' ಎಂದು ಪ್ರಾಣ ತೆಗೆದು ಬರೆಯುವುದು'[೧] ಹೀಗೆ ಭಾಷೆಯಲ್ಲಿ ಅಲ್ಪಪ್ರಾಣ ಮಹಾಪ್ರಾಣ ತಿಳಿಯದೆ ಪದ ಪ್ರಯೋಗಿಸುವುದನ್ನು ಕಾಣಬಹುದು.

ಶ ಕಾರ ಷ ಕಾರಗಳ ವ್ಯತ್ಯಾಸ ತಿಳಿಯದೆ ಹಲವು ಪದಗಳನ್ನು ಬಳಸುತ್ತೇವೆ. ರೋಷ, ದುಷ್ಟ, ವಿಷ, ವಿಷಯ ಇವುಗಳಲ್ಲಿ 'ಶ' ಕಾರ ಬಳಸುವುದನ್ನು ಕಾಣಬಹುದು.

ಮಹಾಪ್ರಾಣದ ನಂತರವೂ 'ಹ' ಕಾರ ಬರುವ ಉಚ್ಚರಣ ದೋಷದಿಂದಾಗುವ ಪ್ರಮಾದ ಈಶ್ವರ ಎಂದು ಉಚ್ಚರಿಸಬೇಕಾದ ಕಡೆ ಹೀಶ್ವರ ಎಂದು. ಹಿಮಾಲಯದಲ್ಲಿ ಬರೆಯಬೇಕಾದ ಕಡೆ ಇಮಾಲಯ ಎಂದು. ಹೊಕ್ಕಳು, ಹೊಟ್ಟೆ, ಹೋಗು ಮುಂತಾದ ಬರವಣಿಗೆಯಲ್ಲಿ 'ಒ' 'ಓ' ಕಾರವನ್ನು ಬಳಸುತ್ತಾರೆ. ಗ್ರಾಮ್ಯ ಕಥೆ, ಕಾದಂಬರಿಗಳ ಸಂಭಾಷಣೆಯಲ್ಲಿ ಬಳಸಿದರೆ ತಪ್ಪಾಗದು

೧. ಸಂ. ತಾ.ರಾ. ನಾಗರಾಜ್, ಸ.ಲ.ಪ್ರ. ಅ.ರಾ.ಮಿತ್ರ. ಪ್ರ: 'ಶಬ್ದಶುದ್ಧಿ', ಪು-೪೦೯

ಆದರೆ ಉಳಿದ ಪ್ರಬಂಧ ಕಾಗದ, ಪತ್ರವ್ಯವಹಾರದ ಸಂದರ್ಭದಲ್ಲಿ ಬಳಸಬಾರದು. ಹೀಗೆ ಅ, ಹ, ಹ ಆ ಗಳ ಇಂತಹ ಗೊಂದಲಗಳಿಂದ ಪಾರಾಗಬೇಕಾದ ಅಗತ್ಯವಿದೆ ಎಂದು ಸೂಚನೆ ನೀಡುತ್ತಾರೆ.

ಯಾವುದೇ ಭಾಷೆ ಶ್ರೇಷ್ಠವು ಅಲ್ಲ ಕನಿಷ್ಟವೂ ಅಲ್ಲ. ಪ್ರತಿಯೊಂದು ಭಾಷೆಗೂ ತನ್ನದೇ ಆದ ವಿಶಿಷ್ಟತೆ ಇರುತ್ತದೆ. ಒಂದು ಆ ಭಾಷೆ ಆ ಪ್ರದೇಶದ ಜನಾಂಗದ ಮೇಲೆ ಪ್ರಭಾವ ಬೀರುತ್ತದೆ. ಭಾಷೆಯಲ್ಲಿ ವ್ಯತ್ಯಾಸ ಕಾಣಿಸಿಕೊಳ್ಳಲು ಹಲವಾರು ಕಾರಣವಾಗಿರುತ್ತವೆ. ಪ್ರಾದೇಶಿಕ ಭಿನ್ನತೆ, ನದಿಗಳು, ಸಾರಿಗೆ ವ್ಯವಸ್ಥೆ ಮುಂತಾದವುಗಳಿಂದ ಭಾಷೆಯಲ್ಲಿ ವ್ಯತ್ಯಾಸ ಕಾಣಿಸುತ್ತವೆ. ಒಂದೇ ಭಾಷೆಯಾಡುವ ಪ್ರದೇಶಗಳಲ್ಲೂ ಹಲವಾರು ಉಪಭಾಷೆಗಳು ಹುಟ್ಟಿಕೊಳ್ಳುತ್ತವೆ. ಇದು ಭಾಷೆಯಲ್ಲಿನ ವೈವಿಧ್ಯತೆಯನ್ನು ತಿಳಿಸುತ್ತದೆ ಹೊರತು ಭಾಷಾ ದೋಷವಾಗುವುದಿಲ್ಲ. ಇಂತಹ ಪ್ರಾದೇಶಿಕ ಭಿನ್ನತೆಗೆ ಸಂಬಂಧಪಟ್ಟಂತೆ ಬೆಂಗಳೂರು/ಧಾರವಾಡ ಪ್ರಬಂಧವನ್ನು ನೋಡಬಹುದು. ಆಗತಾನೆ ದಾವಣಗೆರೆ ಬ್ಯಾಂಕಿಗೆ ವರ್ಗವಾಗಿ ಬಂದ ಗಂಗಾಧರಪ್ಪನಿಗೆ ಹಲವು ಪ್ರದೇಶದ ಜನ ಅಲ್ಲಿ ಕೆಲಸ ಮಾಡುವುದನ್ನು ಕಂಡು ಸಂತೋಷಗೊಂಡರು ಗಾಭರಿಯಾಗುತ್ತಾನೆ. ಅಲ್ಲಿ ವೀರೇಗೌಡ ಮೈಸೂರು ಪ್ರಾಂತ್ಯದವ. ತಗ್ಗಿಮನಿ ಧಾರವಾಡದವ, ಬ್ರಹ್ಮಾವರ್ ಮಂಗಳೂರು ಕಡೆಯವ ಇವರಾಡುವ ಮಾತುಗಳನ್ನು ಕಂಡು ಆಶ್ಚರ್ಯಗೊಳ್ಳುತ್ತಾನೆ 'ಇಲ್ಲೇ ಪುಟ್ಟ ಕರ್ನಾಟಕ ಇದೆಯಲ್ಲ' ಎಂದು ಗಂಗಾಧರಪ್ಪ ಹೇಳಿದಕ್ಕೆ ವೀರೇಗೌಡ 'ಕರ್ನಾಟಕ ಅಲ್ಲ ಸಾರ್, ವಿಶಾಲ ಮೈಸೂರು ಅಂತ ಹೇಳಿ' ಎಂದು ಹೇಳುತ್ತಾನೆ.[೧] ಒಂದು ಸಂದರ್ಭದಲ್ಲಿ ರಾಜರ ಆಡಳಿತಕ್ಕೆ ಒಳಪಟ್ಟಿದ ಕರ್ನಾಟಕವನ್ನು ಹೀಗೆ ಕರೆಯುತ್ತಿದ್ದರು. ಆದರೆ ಇಂದು ಕರ್ನಾಟಕ ಎಂದು ಕರೆಯಲಾಗುತ್ತಿದೆ. ಇಲ್ಲಿ ತಮ್ಮ ಭಾಷೆಯ ಬಗ್ಗೆ ಅಭಿಮಾನ ಹೊಂದಿರುವುದು ಸರಿ ಆದರೆ ಉಳಿದ ಭಾಷೆಗಳ ಬಗ್ಗೆ ನಿಷೇಧ ಹೇರುವುದು ತಪ್ಪು.

ಒಂದೊಂದು ಪದಕ್ಕೂ ಒಂದೊಂದು ಅರ್ಥ ವಿಶೇಷತೆ ಇರುತ್ತದೆ. ಒಂದೇ ಪ್ರದೇಶದಲ್ಲಿ ಬಳಸುವ ಭಾಷೆಯ ಅರ್ಥಕ್ಕೂ ಮತ್ತೊಂದು ಪ್ರದೇಶದಲ್ಲಿ ಬಳಸುವ ಭಾಷೆಯ ಅರ್ಥಕ್ಕೂ ವ್ಯತ್ಯಾಸವಿದ್ದು ಅಲ್ಪಪ್ರಾಣ ಮಹಾಪ್ರಾಣ ಬಳಕೆಯಲ್ಲಿ ವ್ಯತ್ಯಾಸವಿರುತ್ತದೆ. ಇದಕ್ಕೆ ಸಾಮಾಜಿಕ ವರ್ಗವು ಕಾರಣವಾಗಿದ್ದು ಸುಶಿಕ್ಷಿತ ಅಶಿಕ್ಷಿತರಾಡುವ ಭಾಷೆಗಳಲ್ಲೂ ಕಾಣಿಸಿಕೊಳ್ಳುತ್ತವೆ. ಕೆಲವು ಪ್ರದೇಶದ ಭಾಷೆಯ ವ್ಯತ್ಯಾಸಕ್ಕೆ ಹಲವು ಕಾರಣಗಳಿವೆ. ಅಲ್ಲಿ ಆಡಳಿತ ನಡೆಸಿದ ರಾಜಮನೆತನ, ನೆರೆ ಭಾಷೆಯ ಪ್ರಭಾವ, ಅನ್ಯಭಾಷೆಯ ಸ್ವೀಕರಣ ಮುಂತಾದವು ಕಾರಣವಾಗುತ್ತವೆ. ಕರ್ನಾಟಕದಲ್ಲಿ ತೆಗೆದುಕೊಂಡರೆ ಉತ್ತರಕರ್ನಾಟಕದಲ್ಲಿ ಮುಸ್ಲಿಂಮರು ಆಡಳಿತ ನಡೆಸಿದ್ದರಿಂದ ಉರ್ದು ಪದಗಳು ಹೆಚ್ಚು ಕಂಡು ಬರುತ್ತವೆ. ಹಾಗೆ ಮರಾಠಿ ಪ್ರಭಾವವನ್ನು ಕಾಣಬಹುದು ದಕ್ಷಿಣ ಕರ್ನಾಟಕದಲ್ಲಿ ತಮಿಳು, ತೆಲುಗು, ಇಂಗ್ಲಿಷ್ ಭಾಷೆಯ ಪ್ರಭಾವದಿಂದ ಅನ್ಯ ಭಾಷಾ ಪದಗಳು ಬಂದು ಸೇರಿಕೊಂಡಿವೆ.

೧. ಸಂ. ತಾ.ರಾ. ನಾಗರಾಜ್, ಸ.ಲ.ಪ್ರ. ಅ.ರಾ.ಮಿತ್ರ. ಪ್ರ: 'ಬೆಂಗಳೂರು Vs ಧಾರವಾಡ', ಪು-೨೮೫

ಬೆಂಗಳೂರು Vs ಧಾರವಾಡ ಪ್ರಬಂಧದಲ್ಲಿ ಬ್ಯಾಂಕ್, ಆಫೀಸಿನ ಗುಮಾಸ್ತನಿಗೆ ಗಲ್ಲದ ಕೆಳಭಾಗ ಊದಿಕೊಂಡಿತ್ತು. ಅದಕ್ಕೆ 'ಗದ್ದಕಟ್ಟಾಗಿದೆ ಅದಕ್ಕೆ ಶ್ರೀಗಂಧ ತೇಯ್ದು ಹಚ್ಚಿದೀನಿ' ಎರಡು ದಿನದಲ್ಲಿ ಇಳಿಯುತ್ತದೆ ಎಂದು ಹೇಳಿದ. ಇಲ್ಲಿ 'ಗದ್ದಕಟ್ಟು' ಎಂಬ ಪದ ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆ ಅರ್ಥದಲ್ಲಿ ಬಳಸುವುದನ್ನು ಕಾಣಬಹುದು. ಮಂಗಳೂರಿನವರು 'ಕಪ್ಪಟರಾಯ' ಎಂದರೆ ಬಳ್ಳಾರಿಯವರು 'ಊತಲಮಾರಿ ಮಂಗ್ಯಾನಬಾವು' ಎಂದು ಬೆಂಗಳೂರಿನವರು ಊತಲಮ್ಮ ಎಂದು ಹೇಳುತ್ತಾರೆ. ಹೀಗೆ ಒಂದೊಂದು ಪ್ರದೇಶದಲ್ಲಿರುವ ಸ್ಥಳೀಯ ಗ್ರಾಮದೇವತೆಗಳ ಪ್ರಭಾವ ಇರುವುದನ್ನು ಕಾಣುತ್ತೇವೆ. ಅದಕ್ಕೆ ಅನುಗುಣವಾಗಿ ಪದಗಳ ಬಳಕೆ ರೂಢಿಯಾಗಿದೆ. ಬೆಂಗಳೂರಿನ ಕಡೆ ನಳ ಅಂದ್ರೆ ನಲ್ಲಿ ಉತ್ತರಕರ್ನಾಟಕದ ಕಡೆ ನೀರು ಎಂಬ ಬಳಕೆ ಇದೆ.

ಉತ್ತರಕರ್ನಾಟಕಲ್ಲಿ ಮಾರಾಠಿ ಉರ್ದು ಪ್ರಭಾವದಿಂದ ಸಂಡಾಸ್, ಜುಣಕ, ಜಾವಳ ಅನ್ನುವ ಪದಗಳ ಬಳಕೆ ಸಾಮಾನ್ಯ. ಹಾಗೆ ಬೆಂಗಳೂರು ಮೈಸೂರಿನ ಜನ ತಮಿಳು ತೆಲುಗು ಇಂಗ್ಲೀಷ್ ಪ್ರಭಾವದಿಂದ ಧ್ವನಿಜಾರು ಪದಗಳನ್ನು ಹೆಚ್ಚಾಗಿ ಬಳಸುತ್ತಾರೆ. health ಹಾಳಾಗಿದೆ, work ಮಾಡು, personality ಇಲ್ಲ ಪದ ಎಂದು ಬೇರೆ ಬೇರೆ ಭಾಷೆ ಪದಗಳಿಗೆ ಪ್ರತ್ಯಯವನ್ನು ಹಚ್ಚಿ ಬಳಸುವುದನ್ನು ಕಾಣಬಹುದು.

ಮೈಸೂರು ಪ್ರಾಂತ್ಯದ ಕಡೆ ಅಮ್ಮ ಎಂದರೆ ತಾಯಿ ಎಂದರ್ಥ. ಆದರೆ ಧಾರವಾಡದ ಕಡೆ ಅಮ್ಮ ಎಂದರೆ ವಿಧವೆ ಎಂದರ್ಥ. 'ಕಸಗುಡಿಸಮ್ಮ ಅಂದಿದಕ್ಕೆ ಅಮ್ಮ ಅನ್‌ಬ್ಯಾಡ್ರಿ ಸಾಹೆಬ್ರೆ' ಎಂದು ಕೆಲಸದವಳು ಗದರಿಸುತ್ತಾಳೆ.

ಇಂತಹ ಸಂದರ್ಭದಲ್ಲಿ ಪದಬಳಸುವಾಗ ಭಾಷಿಕ ಅರ್ಥ ವ್ಯತ್ಯಾಸ ತಿಳಿದು ಪದಬಳಕೆ ಮಾಡಬೇಕಾಗುತ್ತದೆ. ಇಲ್ಲದೆ ಹೋದರೆ ಅನರ್ಥಗಳಾಗುತ್ತವೆ. ಬೆಂಗಳೂರು ಪ್ರಯಾಣಿಕನಿಗೆ ಧಾರವಾಡದ ಕಂಡಾಕ್ಟರ್ 'ಈ ಬಸ್‌ನಾಗ ಸೀಟ್ ಇಲ್ರಿ ಹಿಂದಗಡೆ ಬರ್ರಿ'[೧] ಎನ್ನುತ್ತಾನೆ. ಆತ ಪಾಪ ಹಿಂದಗಡೆ ಬಸ್ಸಿನ ಏಣಿ ಹಿಡಿದು ಬಂದನಂತೆ' ಇಂತಹ ಸಂದರ್ಭಗಳು ಹಾಸ್ಯವಾಗಿ ಕಂಡರೂ, ಅರ್ಥ ತಿಳಿಯದಿದ್ದಾಗ ಅನರ್ಥಕ್ಕೆ ಎಡೆ ಮಾಡಿ ಕೊಡುತ್ತವೆ. ಕೂನಾಯ್ತು ಎಂದರೆ ಗೊತ್ತಾಯ್ತು ಅಂತ. ಈ ಖೂನಾಯ್ತು ಎಂದು ಮಹಾಪ್ರಾಣ ಬಳಸಿದರೆ ಕೊಲೆಯಾಯಿತು ಎಂದು ಅರ್ಥ ಬರುತ್ತವೆ. ಇನ್ನು ಅಭ್ಯಾಸ ಬಲದಿಂದ ಕೆಲವು ಪ್ರದೇಶಗಳ ಕಡೆ ಕೆಲವು ಪದಗಳು ರೂಢಿಗೆ ಬಂದಿರುತ್ತವೆ. ಮಂಗಳೂರಿನ ಕಡೆ ಮಾರಾಯ, ಮೈಸೂರು ಕಡೆ ಒಂದು ಕೆಲ್ಸ ಮಾಡು ಅಂತ, ಧಾರವಾಡದ ಕಡೆ ಹತ್ಯಾನ ಎಂಬ ಪದವನ್ನು ಹೆಚ್ಚಾಗಿ ಬಳಸುತ್ತಾರೆ.

ಕೆಲವು ಶಬ್ದಗಳು ರೂಢಿಯ ಕಾರಣ ಒಂದೊಂದು ಪ್ರದೇಶದಲ್ಲಿ ಒಂದೊಂದು ಅರ್ಥದಲ್ಲಿ ಪ್ರಯೋಗವಾಗುವುದನ್ನು ಎಂ.ಹೆಚ್. ಕೃಷ್ಣಯ್ಯ ಈ ರೀತಿ ಗುರುತಿಸಿದ್ದಾರೆ. 'ಮೈಸೂರು ಕಡೆ ತಿಂಡಿ ಎಂದರೆ ಆಹಾರ, ತಿನಿಸು ಎಂದರ್ಥ. ಧಾರವಾಡದ ಕಡೆ ತಿಂಡಿ ಎಂದರೆ

೧ ಸಂ. ತಾ.ರಾ. ನಾಗರಾಜ್, ಸ.ಲ.ಪ್ರ. ಅ.ರಾ.ಮಿತ್ರ. ಪ್ರ: 'ಬೆಂಗಳೂರು Vs ಧಾರವಾಡ', ಪು-೨೮೮

ತೀಟೆ ಎಂದರ್ಥ. ಅದೇ ರೀತಿ ಮೈಸೂರು ಕಡೆ ತಿನಿಸು ಎಂದರೆ ಮೈಸೂರು ಕನ್ನಡದಲ್ಲಿ 'ತೀಟೆ' ಎಂದರ್ಥ. ಮೈಸೂರು ಕಡೆ ಬಚ್ಚಲು ಎಂದರೆ ಚರಂಡಿ. ಧಾರವಾಡದ ಕಡೆ ಸ್ನಾನದ ಮನೆ ಎಂದರ್ಥ'

ಹಲವು ಉಪಭಾಷೆಗಳಿರುವುದನ್ನು ಎಂ.ಹೆಚ್.ಕೃಷ್ಣಯ್ಯ ಹೀಗೆ ಗುರುತಿಸುತ್ತಾರೆ.

1) ಮೈಸೂರು ಕಡೆಯ ಸ್ವರ ಎ > ಇ ಎಂದು ಧಾರವಾಡದ ಕಡೆ ಕಂಡು ಬರುತ್ತದೆ. ಮನೆ–ಮನಿ, ಆನೆ–ಆನಿ, ಕುದುರೆ–ಕುದುರಿ.

2) ಮೈಸೂರು ಕನ್ನಡ ವ್ಯಂಜನಾಂತಗಳಿಗೆ ಹತ್ತುವ ಉ > ಅ ಎಂದಾಗಿ ಧಾರವಾಡ ಕನ್ನಡದಲ್ಲಿ ಕಾಣಬರುತ್ತದೆ. ಉದಾ: ಇಂಗ್ಲೇಂಡು > ಇಂಗ್ಲೇಡ, ಕಾಲೇಜು–ಕಾಲೇಜ, ಬಟ್ಟಲು–ಬಟ್ಟಲ, ಹೋಟೆಲು–ಹೋಟೆಲ ಎಂದು ಉಪಭಾಷೆಗಳನ್ನು ಗುರುತಿಸಿದ್ದಾರೆ.'[೧]

ಹೀಗೆ ಹಲವು ಭಾಷಿಕ ವ್ಯತ್ಯಾಸಗಳಿದ್ದು ಅವುಗಳನ್ನು ಅರಿಯುವ ಅಗತ್ಯ ಇದ್ದು ಇಂದಿನ ಸಂದರ್ಭದಲ್ಲಿ ಮುಖ್ಯವಾಗಿದೆ. ಒಂದೇ ಕಡೆ ಕೆಲಸ ಮಾಡುವ ಸಂದರ್ಭದಲ್ಲಿ ಹೀಗೆ ಭಾಷೆಯ ವೈವಿದ್ಯತೆ ಕಾಣುತ್ತೇವೆ. ಹಾಗೆ ನಮ್ಮ ಭಾಷೆಯ ಶ್ರೇಷ್ಠ ಎಂದು ವೀರೇಗೌಡನ ಹಾಗೆ ಮಾತಾಡುವವರು ತಮ್ಮ ಭಾಷಾದುರಾಭಿಮಾನವನ್ನು ಬಿಡಬೇಕಾದ ಅಗತ್ಯವಿದೆ.

ವಿದ್ಯಾರ್ಥಿಗಳಿಗೆ ತರಗತಿಯಲ್ಲಿ ಪಾಠ ಬೋಧಿಸುವ ಸಂದರ್ಭದಲ್ಲಿ ಅಲಂಕಾರ, ಛಂದಸ್ಸಿನ ಪಾಠ ಮಾಡುವ ಸಂದರ್ಭದಲ್ಲಿ ಮಕ್ಕಳಿಗೆ ಅರ್ಥಮಾಡಿಸುವುದು ತುಂಬಾ ಸವಾಲಿನ ಕೆಲಸ ಹಳೆಗನ್ನಡದ ಪದ್ಯಗಳನ್ನು ಉದಾಹರಿಸುತ್ತ ಹಳೆ ಪದ್ಯಗಳನ್ನೇ ಉರು ಒಡೆದು ಮಕ್ಕಳ ಮುಂದೆ ತಮ್ಮ ಪಾಂಡಿತ್ಯ ಪ್ರದರ್ಶಿಸುವ ಶಿಕ್ಷಕರು ಇಂದು ಮಕ್ಕಳಿಗೆ ಅರ್ಥವಾಗುವ ಸಾಮಾನ್ಯ ಕನ್ನಡದಲ್ಲಿ ಛಂದಸ್ಸಿನ ವ್ಯಾಕರಣಾಂಶಗಳನ್ನು ಅರ್ಥಪಡಿಸುವ ಅಗತ್ಯವಿದೆ ಎಂಬುದನ್ನು 'ಛಂದೋವಿಹಾರ' ಪ್ರಬಂಧದಲ್ಲಿ ತಿಳಿಸಿದ್ದಾರೆ.

ಕೇವಲ ಗಿಣಿಪಾಠದಂತೆ ಸೂತ್ರಗಳನ್ನು ಓದಿ ಗಣಗಳು ಎಂದಾಗ ಪಿಸುಮಾತಿನಲ್ಲಿ ವಿದ್ಯಾರ್ಥಿಗಳು 'ಹೆಗ್ಗಣ' ಎಂದು ಪಿಸುಗುಟ್ಟಿ ನಗುತ್ತಿದ್ದರು ಎನ್ನುವಾಗ ವಿದ್ಯಾರ್ಥಿಗಳಿಗೆ ಸರಿಯಾಗಿ ಪಾಠ ಅರ್ಥವಾಗದಿದ್ದಾಗ ಈ ರೀತಿ ಸನ್ನಿವೇಶಗಳು ಉಂಟಾಗುವುದನ್ನು ಕಾಣುತ್ತೇವೆ.

'ಯತಿ' ಎಂದರೆ ಸನ್ಯಾಸಿ ಎಂಬ ಅರ್ಥಗಳನ್ನು ಕಲ್ಪಿಸಿಕೊಳ್ಳುತ್ತಿದ್ದರು. ಮಾತ್ರಗಣ, ಅಂಶಗಣ, ಶಾರ್ದೂಲ, ಮತ್ತೇಬವಿಕ್ರಿಡಿತ ಮುಂತಾದವನ್ನು ಅರ್ಥ ಮಾಡಿಸುವಾಗ ಹುಡುಗರಿಗೆ ಗಾಬರಿಯಾಗುತ್ತಿತ್ತು. ಛಂದಸ್ಸಿನ ತರಗತಿ ಎಂದರೆ ಹೆದರುವ ಕಾವ್ಯವೆಂದರೆ ಗಾಬರಿಯಾಗುವ ಮಕ್ಕಳಿಗೆ ಅರ್ಥವಾಗುವ ರೀತಿ ಪಾಠಮಾಡುವುದು ಸವಾಲಿನ ಕೆಲಸ. ಆಗ ಸಾಮಾನ್ಯವಾಗಿ ನಾವಾಡುವ ದಿನ ನಿತ್ಯದ ಪದಗಳನ್ನು ಬಳಸಿ ಛಂದಸ್ಸನ್ನು ಭೋಧಿಸಿದಾಗ

೧. ಸಂ. ಎಂ.ಎಸ್. ಕೃಷ್ಣಯ್ಯ – ಸಂಕ್ಷಿಪ್ತ ಕನ್ನಡ ಭಾಷೆಯ ಚರಿತ್ರೆ, ಪು-೮೭

ವಿದ್ಯಾರ್ಥಿಗಳು ಬೇಗ ಅರ್ಥ ಮಾಡಿಕೊಳ್ಳುತ್ತಾರೆ. ಹಳೆಗನ್ನಡದಲ್ಲೇ ಛಂದಸ್ಸನ್ನು ತಿಳಿಸಬೇಕು ಎಂದು ಭಾವಿಸಬಾರದು ಕ್ರಿಯಾಶೀಲರಲ್ಲದ ಉಪನ್ಯಾಸಕರು ಹಳೆ ಕವಿಗಳ ಪದ್ಯಗಳನ್ನು ಓದಿ ಕಂಠ ಪಾಠ ಮಾಡಿ ವಿದ್ಯಾರ್ಥಿಗಳಿಗೆ ಹೇಳುತ್ತಾರೆ. ಆದರೆ ವಿದ್ಯಾರ್ಥಿಗಳು ಅಷ್ಟು ಜ್ಞಾನವನ್ನು ಗಳಿಸಿರುವುದಿಲ್ಲವಾದ್ದರಿಂದ ಹಳೆಗನ್ನಡ ಪದ್ಯಗಳನ್ನು ಓದಿ ಅರ್ಥ ಮಾಡಿಕೊಳ್ಳುವ ಸಾಮರ್ಥ್ಯ ಹೊಂದಿಲ್ಲದಿರುವುದರಿಂದ ಮೊದಲು ಸರಳತೆಯಿಂದ ಸಂಕೀರ್ಣತೆಯ ಕಡೆಗೆ ಸಾಗುವ ವಿಧಾನದ ಮೂಲಕ ಅವರಿಗೆ ಅರ್ಥ ಮಾಡಿಸಬೇಕು ಎಂದು ಲೇಖಕರಿಗೆ ಅವರ ಸ್ನೇಹಿತ ಹೇಳುವ ಉದಾಹರಣೆಗಳಿಂದ ತಿಳಿಯಬಹುದು. ಲಘು ಗುರು ಎಂದರೇನು ಎಂದು ತಿಳಿಸಲು ಬರಿ ಲಘುಗಳೆ ಬರುವ ಒಂದು ಪದ್ಯದ ಮೂಲಕ ಅವರಿಗೆ ಅರ್ಥ ಮಾಡಿಸಬೇಕು. ಹಾಗೆ ಒಂದು ಪದ್ಯವನ್ನು ಕಟ್ಟು ಎಂದಾಗ

‘ಎರಡೇಕೆ ಮೂರು ಸಾಲು ತಗೋ ಬರೀ ಲಘು ಬೇಕೋ’

ಕೆಲಸವು ಸುಲುಭದಿ ಜರುಗುವುದನ್ನು ಬಯಸುವಿರಿ’[1]

ಹಣವನ್ನು ಕಿಸೆಯಲ್ಲಿ ಇರಿಸದೆ ಹೊರಗಡೆ ತೆಗೆಯಿರಿ’.

ಗುರುಗಳ ಪದ್ಯ

‘ಸೌತೇಕಾಯಿ ಬೇಕಾಂತಾಳೆ

ಏನ್ಮಾಡ್ಲೀ ನನ್ ಮಗಳು

ಸೀಸನ್ನಲ್ಲಾ ಸಿಕ್ಕೋಲ್ಲುಮ್ಮ

ಅಂದ್ರೂನು ಬಿಡಲಾರ್ಳೂ’[2]

ಎಂಬಂತಹ ಸಾಮಾನ್ಯ ಕನ್ನಡ ಪದಗಳನ್ನು ಬಳಸಿ ಲಘುಗುರುಗಳನ್ನು ಅರ್ಥಮಾಡಿಸಬಹುದು. ಹೀಗೆ ಮಕ್ಕಳಿಗೆ ಅರ್ಥವಾಗುವ ರೀತಿ ಪಾಠ ಮಾಡುವ ಸೃಜನಶೀಲತೆಯನ್ನು ಇಂದಿನ ಅಧ್ಯಾಪಕರುಗಳು ಬೆಳಸಿಕೊಳ್ಳುವ ಅಗತ್ಯವಿದೆ. ಹೀಗೆ ಕಂದ ವೃತ್ತಗಳನ್ನು ಸಹ ಹೊಸ ಮಾದರಿಯ ಪದ್ಯಗಳನ್ನು ರಚಿಸಿ ಮಕ್ಕಳಿಗೆ ಅರ್ಥ ಮಾಡಿಸಬೇಕಾಗಿದೆ. ದಿನ ನಿತ್ಯ ನಾವಾಡುವ ಪದಗಳನ್ನು ಬಳಸಿ ನಮ್ಮ ಸುತ್ತಮುತ್ತ ಕಾಣುವ ವಸ್ತು ಸಂಗತಿಗಳನ್ನು ಬಳಸಿ ಮಕ್ಕಳಿಗೆ ಛಂದಸ್ಸನ್ನು ತಿಳಿಸಬೇಕು. ಚಂಪಕಮಾಲೆಗೆ ಉದಾಹರಣೆ:

ಮಿಡಿಯುವೆ ಜೀವ ತಂತಿಯನು ಎಂಬುದೆ ಸೊಳ್ಳೆಯ ಮಂತ್ರವಲ್ಲವೆ ? ಎಂಬ ಸಾಲುಗಳನ್ನು ಬಳಸಿ ಚಂಪಕ ಮಾಲೆಯ ಲಕ್ಷಣವನ್ನು ತಿಳಿಸಬಹುದು. ಅದು ಬಿಟ್ಟು ‘ನಜಬಜಜಂಜರಂಬಗೆಗೊಳುತ್ತಿರೆಚಂಪಮಾಲೆಯೆಂದಪರ್’ ಎಂದರೆ ವಿದ್ಯಾರ್ಥಿಗಳಿಗೆ ಅರ್ಥವಾಗುವುದು ಕಷ್ಟ. ಹೀಗೆ ಷಟ್ಪದಿ ಮಾಡುವಾಗ ಭಾಮಿನಿಷಟ್ಪದಿ ಬೋಧಿಸುವಾಗ ಅದರ

೧-೨ ಸಂ. ತಾ.ರಾ. ನಾಗರಾಜ್, ಸ.ಲ.ಪ್ರ. ಅ.ರಾ.ಮಿತ್ರ. ಪ್ರ: 'ಛಂದೋವಿಹಾರ', ಪು-೪೪೦

ಲಕ್ಷಣವನ್ನು ಹೇಳಿ 1. 2. 4. 5 ನೇ ಸಾಲುಗಳಲ್ಲಿ 3. 4. 3. 4 ಮಾತ್ರೆಗಣಗಳು ಬರುತ್ತವೆ. 3. 6 ನೇ ಸಾಲಿನಲ್ಲಿ 3. 4 ಮಾತ್ರೆಯ 6 ಗಣ ಬರುತ್ತವೆ ಎಂದು ತಿಳಿಸಿ ಸಾಮಾನ್ಯ ಪದ್ಯ ಬಳಸಿ ಹೇಳುವುದು ಉತ್ತಮ.

U U U - U U - U U U U U
'ಸಿ ಟಿ ಯ ಬ ಸ್ಸ ಲಿ ನಿಂ ತು ಪ ಯ ಣಿ ಸೆ

- U - U U - U - U U
ಬೂ ಟು ಗಾ ಲ ಮ ಹಾ ನು ಭಾ ವ ನು

– U - U U U U U - U U - U - U U -
ಮೆ ಟ್ಟಿ ಕಾ ಲ ನು ಕ್ಷ ಮಿ ಸಿ ರೆಂ ದ ನು ನೋ ಡ ಲಿ ಲ್ಲೆ ನು ತ್'[೧]

ಹೀಗೆ ಛಂದಸ್ಸನ್ನು ಬೋಧಿಸಬೇಕಾಗಿದೆ ಎಂದು ತಿಳಿಸುತ್ತಾರೆ.

ಅತಿಯಾದ ಪಾಂಡಿತ್ಯ ಗಳಿಸಿದ ಪಂಡಿತನೊಬ್ಬ ತರಗತಿಯಲ್ಲಿ ವ್ಯಾಕರಣ ಬೋಧಿಸಿ ಅವನಿಗೆ ಅಭ್ಯಾಸವಾದುದರಿಂದ ಆಸ್ಪತ್ರೆಯಲ್ಲಿ ಡಾಕ್ಟರ್‌ನೊಂದಿಗೆ ಕಾರಣವಿಲ್ಲದೆ ತಂದು ಆಸ್ಪತ್ರೆಗೆ ಸೇರಿಸಿದಾಗ ವ್ಯಾಕರಣ ಪದಗಳನ್ನು ಬಳಸಿ ತನ್ನ ಸಂಕಟವನ್ನು ವ್ಯಕ್ತಪಡಿಸುವುದು ತಮಾಷೆಯಾಗಿ ಕಂಡರು ಸಂಸಾರದಲ್ಲಿ ಅವನು ಎದುರಿಸಿದ ಎದುರಾದ ಸಂದರ್ಭವನ್ನು ವ್ಯಾಕರಣದ ಉಪಮೇಯದೊಂದಿಗೆ ಹೇಳುವುದು ಅವನ ಪಾಂಡಿತ್ಯವನ್ನು ತಿಳಿಸುತ್ತದೆ. ಉದಾ: '28 ವರ್ಷಗಳ ಹಿಂದೆ ಭೂತದಲ್ಲಿ ಪರಸ್ಪರ ನಮ್ಮಿಬ್ಬರ ದೃಷ್ಟಿಗಳು ಪರಸ್ಪರ ಸಂಧಿಸಿದವು. 'ಸಂಧಿ' ವ್ಯಾಕರಣ ಶಬ್ದ ಅಲ್ಲವೇ ಇನ್ನು ಆಗಬೇಕಾದ ವ್ಯಾಕರಣ ನಿಯಮಗಳೆಲ್ಲಾ ಆಗಿಯೇ ಹೋದವು. ನಾವಿಬ್ಬರು ಸೇರಿದೆವು ಪರಸ್ಪರ ಮಾತನಾಡಲಾರಂಭಿಸಿದೆವು. ಸ್ವರಕ್ಕೆ ಸ್ವರ ಸೇರಿತು ಬುದ್ಧಿಲೋಪವಾಯಿತು. ಹುಚ್ಚು ಅತಿರೇಕಗಳ ಆಗಮನವಾಯಿತು'.[೨] ಹೀಗೆ ತಾನು ಮೊದಲು ಆಕೆಯನ್ನು ವಿವಾಹವಾದ ಸಂದರ್ಭವನ್ನು ತಿಳಿಸುತ್ತಾನೆ. ಮನೆಯಲ್ಲಿ ಶಾಂತಿ ನೆಮ್ಮದಿ ಇಲ್ಲದಿರುವ ಜೀವನವೇ ಜಿಗುಪ್ಸೆ ಬಂದಿರುವ ಪಂಡಿತನಿಗೆ ಸಂಸಾರವೆಲ್ಲವೂ ವ್ಯಾಕರಣಾಂಶಗಳಂತೆ ಕಾಣಿಸಿಕೊಂಡಿದೆ. ಕಾಫಿ ತಿಂಡಿ ಮಾಡಿಕೊಡು ಎಂದಾಗ ಹೆಂಡತಿಯಿಂದ ಬರುವ ಉತ್ತರಗಳು ಕಂಠ್ಯೋಷ್ಟ್ಯವಾಗಿದ್ದು ಮಕ್ಕಳು ವರ್ಗದ ಅಂತ್ಯಾಕ್ಷರಿಯ ಹಾಗೆ ಬೆನ್ನು ಬಿಡದೆ ಬರುವಂತಹುದು ಎಂಬುದು ಆತನ ಭಾವನೆ. ನೆರೆಮನೆಯ ಆಕೆ ಒಟ್ಟುಸುಳಿ ಇದ್ದ ಹಾಗೆ ಎನ್ನುತ್ತಾನೆ. ಯಾವಾಗಲು ರಗಳೆಯೇ ಆಕೆಯ ಕೆಲಸ ಎನ್ನುವ ಹಾಗೆ. 'ಅದು ಈಗಲೇ ಬರೊಲ್ಲ ರಂಗಮ್ನೋರೆ ಒಂದು ವೇಳೆ ಬಂದ್ರು ಮತ್ತೆ ಮಾರ್ಕೆಟ್‌ಗೆ ಹೋಗುತ್ತೆ ಕೂತ್ಕೊಳಿ' ಎಂದು ಗಂಡನ ಬಗ್ಗೆ ತಾತ್ಸಾರದ ಮಾತುಗಳನ್ನಾಡುವ ಹೆಂಡತಿ ಪುಲ್ಲಿಂಗ ಬಳಸುವ ಬದಲಾಗಿ ಅದು ಇದು ಎಂದು ನಪುಂಸಕ ಪದವನ್ನು ಬಳಸಿ ಲಿಂಗ ವಚನ ಪಲ್ಲಟ ಮಾಡುತ್ತಾಳೆ ಎಂದು ಸಂಸಾರದಲ್ಲಿ ತನ್ನ ಸ್ಥಾನವನ್ನು ನೆನೆದು ಗೋಳಿಡುತ್ತಾನೆ. ಹೀಗೆ ಸಂಸಾರದ ತಾಪತ್ರೆಯದಲ್ಲಿ ಮುಳುಗಿರುವ ಮಧ್ಯಮ ವರ್ಗದ

೧. ಸಂ. ತಾ.ರಾ. ನಾಗರಾಜ್, ಸ.ಲ.ಪ್ರ. ಅ.ರಾ.ಮಿತ್ರ. ಪ್ರ: 'ಛಂದೋವಿಹಾಸ', ಪು-೪೭೪
೨. ಸಂ. ತಾ.ರಾ. ನಾಗರಾಜ್, ಸ.ಲ.ಪ್ರ. ಅ.ರಾ.ಮಿತ್ರ. ಪ್ರ: 'ಪಂಡಿತನ ಸಂಕಟ', ಪು-೧೩೪

ಒಬ್ಬ ಬಡ ಪಂಡಿತನ ಗೋಳು ಶಿಕ್ಷಕರ ಸ್ಥಿತಿಗತಿಗೆ ಹಿಡಿದ ಕನ್ನಡಿಯಂತೆ. ಈ ರಗಳೆ ಬಿಡಿಸಿಕೊಂಡು ಮನೆಗೆ ಬಂದ ಡಾಕ್ಟರ್ ತಂದೆಯು ಒಬ್ಬ ಛಂದಸ್ಸಿನ ಪಂಡಿತನಾದ್ದರಿಂದ ಆತ ಹೇಳುವ ಮಾತುಗಳನ್ನು ಕೇಳಿ ಮೂರ್ಛೆಹೋಗುತ್ತಾನೆ.

ಹೀಗೆ ಭಾಷೆಯ ಬಳಕೆಯ ಅನನ್ಯತೆಯನ್ನು ಅ.ರಾ.ಮಿತ್ರರವರು ತಮ್ಮ ಪ್ರಬಂಧದಲ್ಲಿ ಕಟ್ಟಿಕೊಡುತ್ತಾ ಭಾಷೆಯ ವ್ಯತ್ಯಾಸ, ಮಹತ್ವ, ಜ್ಞಾನವನ್ನು ತಿಳಿಸುತ್ತಾರೆ. ಭಾಷಾದೋಷ ವಿಡಂಬನೆ ಮಾಡುವುದನ್ನು ಕಾಣಬಹುದು.

4.3.3 ದೇಹದ ಅಂಗಾಂಗಳ ಅಭಿವ್ಯಕ್ತಿಯ ವಿಡಂಬನೆ :

ಮುಖ ಮನಸ್ಸಿನ ಕನ್ನಡಿ ಎಂದು ಹಿರಿಯರು ಹೇಳಿದ್ದಾರೆ. ನಮ್ಮ ಮುಖವನ್ನು ನೋಡಿದ ತಕ್ಷಣ ಕೆಲವರು ನಮ್ಮ ಸ್ವಭಾವವನ್ನು ಹೇಳಬಲ್ಲೆ ಎನ್ನುತ್ತಾರೆ. ನಮ್ಮ ಯೋಗ್ಯತೆ, ಸ್ಥಿತಿಗತಿಗಳನ್ನು ಅಳೆಯಲು ಮುಖವನ್ನು ಮಾನದಂಡವಾಗಿ ಬಳಸುತ್ತಾರೆ 'ಮುಖನೋಡಿ ಮಣೆ ಹಾಕು' ಎಂಬ ಗಾದೆ ಹುಟ್ಟಿಕೊಂಡಿದ್ದು ಬಹುಶಃ ಇದರಿಂದಲೇ ಇರಬೇಕು. ನಮ್ಮ ಯೋಗ್ಯತೆ, ಸ್ವಭಾವ, ನಡವಳಿಕೆ ಎಲ್ಲವನ್ನು ತಿಳಿಸುವ ಈ ಮುಖ ಅಂಗಾಂಗದಲ್ಲಿ ವ್ಯಕ್ತಿಯ ಮುಖ್ಯಭಾಗವಾಗಿದೆ. ಪಂಚೇಂದ್ರಿಯಗಳಲ್ಲಿ ನಾಲ್ಕು ಅಂಗಗಳು ಮುಖದಲ್ಲೇ ಇವೆ. ಈ ಮುಖ ಇಲ್ಲದ ಮನುಷ್ಯನ ದೇಹ ಅಪೂರ್ಣ. ಹೊಗಳಿಕೆ ತೆಗಳಿಕೆಯ ಸಮಯದಲ್ಲೂ ಮುಖವನ್ನು ಮುಖ್ಯವಾಗಿಟ್ಟುಕೊಂಡು ಮಾತನಾಡುತ್ತಾರೆ. 'ನನಗೆ ಮುಖ ತೋರಿಸಬೇಡ' ಮುಖದಲ್ಲಿ ಏನು ಕಳೆಯಿದೆ ! ಹೀಗೆ ನಾನಾ ರೂಪದಲ್ಲಿ ಮುಖದ ವಿಚಾರವಾಗಿ ಮಾತನಾಡುತ್ತಾರೆ. ಕಣ್ಣು, ಕಿವಿ, ಮೂಗು, ಬಾಯಿ, ಬಿಡಿ ಬಿಡಿ ಭಾಗಗಳು ಸೇರಿ ಮುಖಕ್ಕೆ ಪ್ರಾಧಾನ್ಯತೆಯನ್ನು ತಂದುಕೊಡುತ್ತವೆ. ಇಂತಹ ಮುಖದ ಅಂಗಾಗಗಳನ್ನು, ಮುಖವನ್ನು ಕುರಿತು ಅ.ರಾ.ಮಿತ್ರರವರು ಕೆಲವು ಪ್ರಬಂಧಗಳನ್ನು ಬರೆದಿದ್ದಾರೆ. ಮುಖಮಂಡಲದ ಲಕ್ಷಣವನ್ನು ಕುರಿತು ಹೇಳುತ್ತಾ ವ್ಯಕ್ತಿಯ ವ್ಯಕ್ತಿತ್ವವನ್ನು ಗುರುತಿಸುವಲ್ಲಿ ಮುಖವು ಹೇಗೆ ಪ್ರಮುಖವಾಗುತ್ತದೆ ಎಂಬುದನ್ನು ಮುಖಮಂಡಲ, 'ಮೂಗಿನತುದಿ', 'ಕಣ್ಣಿನ ಜಗತ್ತು', 'ಬಾಯಿ-ಕಿವಿ', 'ಕರ್ಣಾಮೃತ' ಪ್ರಬಂಧಗಳಲ್ಲಿ ತಿಳಿಸಿದ್ದಾರೆ.

ಮುಖ :

ನಮ್ಮ ವ್ಯಕ್ತಿತ್ವವನ್ನು ತಿಳಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ದೇಹದ ಎಲ್ಲಾ ಅಂಗಾಂಗಗಳನ್ನು ತಿಳಿಸುವ ರಿಮೋಟ್ ಕಂಟ್ರೋಲ್ ಇದ್ದ ಹಾಗೆ. ಮುಖವಿಲ್ಲದೆ ಮಾನವ ಅಪೂರ್ಣನೆನಿಸಿಕೊಳ್ಳುತ್ತಾನೆ. ಈ ಮುಖವನ್ನು ಆವರಿಸಿಕೊಂಡಿರುವ ಕಣ್ಣು, ಕಿವಿ, ಮೂಗು, ಬಾಯಿಗಳು ನಮ್ಮ ವ್ಯಕ್ತಿತ್ವದ ಮೇಲೆ ಏನೆಲ್ಲಾ ಪ್ರಭಾವ ಬೀರುತ್ತದೆ. ವ್ಯಕ್ತಿಯ ಅಂತರ್ಮುಖ ಮತ್ತು ಬರ್ಹಿಮುಖವನ್ನು ತಿಳಿಸುವ ಈ ಮುಖ ಕನ್ನಡಿ ಇದ್ದ ಹಾಗೆ. 'ಮುಖ ಮನಸ್ಸಿನ ದಿಕ್ಸೂಚಿ' ಎಂಬ ಗಾಥೆ ತಿಳಿಸುವಂತೆ 'ನಮ್ಮ ಮನಸ್ಸಿನ ಆಲೋಚನೆಗಳೆಲ್ಲವೂ ಮುಖಗಳಲ್ಲಿರುವ

ಅಂಗಗಳಿಂದ ವ್ಯಕ್ತವಾಗುತ್ತದೆ. ಮುಖ ಗಂಟಿಕ್ಕಿಕೊಂಡಾಗ ಕೋಪ ಬಂದಿರುವ ಸನ್ನಿವೇಶ ಕಾಣಬಹುದು. ಇಂತಹ ವೇಳೆಯಲ್ಲಿ ಕೋಪವನ್ನು ಪ್ರತಿಬಿಂಬಿಸಲು ಹಲವು ಹೆಸರುಗಳನ್ನು ಮುಖ ಪಡೆದುಕೊಳ್ಳುತ್ತದೆ. ಗಂಟುಮುಖ, ಉರಿಮುಖ, ಊದಿಸಿಕೊಂಡ ಮುಖ, ಹೀಗೆ ಹಲವು ಹೆಸರುಗಳನ್ನು ತಾಳಿ ಬರುತ್ತದೆ. 'ಪ್ರತಿಯೊಬ್ಬನ ಮುಖವು ಅವನ ಯೋಗ್ಯತೆಗೆ ತಕ್ಕಂತೆ ಇರುತ್ತದೆ'[೧] ಎಂದು ಆರ್‌ವೆಲ್ ಹೇಳುವ ಮಾತು ಸತ್ಯವೆಂದು ತೋರುತ್ತದೆ. ಮನಸ್ಸಿನ ಸೂಕ್ಷ್ಮ ಭಾವನೆಗಳು ಈ ಮುಖದಲ್ಲಿ ವ್ಯಕ್ತವಾಗುತ್ತದೆ. ಸಮಾಜದಲ್ಲಿ ಜನರನ್ನು ಮೆಚ್ಚಿಸಲು ನಾವು ವಿವಿಧ ಮುಖವಾಡಗಳನ್ನು ಹಾಕಿಕೊಂಡು ಬದುಕುತ್ತಿದ್ದೇವೆ. ನಿಜವಾಗಲು ನಮಗೆ ಸ್ವಂತ ಮುಖವೆಂಬುದೇ ಇಲ್ಲ. ಬೇರೆಯವರ ಮುಖವಾಣಿಯಾಗ ಬಯಸುತ್ತೇವೆ. 'ಹೀನಮುಖರಾದವರು ಮುಖಸ್ತೂತಿಯ ಮೂಲಕ ಮೇಲೇರಲು ಬಯಸುತ್ತಾರೆ'.[೨] ಎಂಬ ಮಾತು ಸತ್ಯವೆನಿಸುತ್ತದೆ. ನಮ್ಮ ಅಂತರಂಗದ ಮುಖವನ್ನು ತೋರಿಸಿಕೊಳ್ಳಳು ಇಷ್ಟಪಡದೆ ಬೇರೊಂದು ಮುಖವಾಡವನ್ನು ಧರಿಸಿಕೊಂಡು ಬದುಕುತ್ತಿರುವುದು ವಿಷಾದದ ಸಂಗತಿ. ನಾವು ಸೌಮ್ಯ ಸ್ವಭಾವದವರಾಗಿದ್ದಾಗ ಯಾವಾಗಲು ಸಪ್ಪೆ ಮುಖ ಹಾಕಿಕೊಂಡಿದ್ದರೆ ಬೇರೆಯವರು ಅದನ್ನು ಅಣಕಿಸಿಕೊಳ್ಳುತ್ತಾರೆ. ಕುಮಾರವ್ಯಾಸನ ಅರ್ಜುನ ತನ್ನ ಅಣ್ಣನಾದ ಧರ್ಮರಾಯನ ಮುಖ ಹೇಗಿತ್ತು ಎಂಬುದಕ್ಕೆ 'ನಿನ್ನ ಮೋರೆಯ ಬಲುಹ ಕಂಡೆ' ಧರ್ಮರಾಯನ ಮುಖ ಇದ್ದುದ್ದೇ ಹಾಗೆ ಏನನ್ನಾದರೂ ಕಿತ್ತುಕೊ ಇಲ್ಲವಾದರೆ ನನಗೆ ಹಿಂಸೆಯಾಗುತ್ತದೆ ಎಂದು ಕೌರವನಿಗೆ ಅರ್ಜಿ ಹಾಕಿಕೊಂಡಿದ್ದನಂತೆ'[೩] ಎಂಬಂತಹ ಮಾತು ಧರ್ಮರಾಯನ ಸಪ್ಪೆಮೋರೆಗೆ ಸಾಕ್ಷಿಯಾಗಿದೆ. ಕೆಲವರ ಮುಖ ಡಬ್ಬ? ಹರಳೆಣ್ಣೆ ಕುಡಿದವರ ಹಾಗೆ ಜೋಲು ಮೋರೆ ಹಾಕಿಕೊಂಡಿರುತ್ತಾರೆ. ಜೀವನದಲ್ಲಿ ಹುಮ್ಮಸ್ಸಿಲ್ಲದ ಚುರುಕಿಲ್ಲದವರನ್ನು ನೋಡಿದರೆ ಕೈಲಾಸಂ ಹೇಳುವ ಮಾತು ಸತ್ಯವೆನಿಸುತ್ತದೆ. 'ಬನ್ನಿ ಬನ್ನಿ ಸ್ವಲ್ಪ ಹೊತ್ತು ಗೋಳಾಡೋಣ' ಎನ್ನುವಂತೆ ಇರುವ ಮುಖಗಳು ಜೀವನವೇ ಬೇಡ ಎನ್ನುವ ಹಾಗೆ ಬದುಕುತ್ತಿರುತ್ತವೆ.

ತಮಗೆ ಇಷ್ಟವಿಲ್ಲದ ವಸ್ತುಗಳನ್ನು, ವ್ಯಕ್ತಿಗಳನ್ನು ಕಂಡಾಗ ಕೆಲವರು ಮುಖ ಗಂಟಿಕ್ಕಿಕೊಳ್ಳುತ್ತಾರೆ. ಉಪ್ಪಿಟ್ಟು ಕಂಡರೆ ಕೆಲವರ ಮುಖ ಕಪ್ಪಿಟ್ಟು ಬಿಡುತ್ತದೆ. 'ಮುಖ ಗಂಟಿಕ್ಕಿಕೊಂಡಾಗ-ಕೋಪ ವ್ಯಕ್ತಪಡಿಸುವುದು', ಗಂಟುಮುಖ-ಇಷ್ಟವಿಲ್ಲ, ಮಂಗಳಾರತಿ ಮುಖ, ಅವಮಾನ ಆಗಿರುವ ಸಂದರ್ಭ ತಿಳಿಸುತ್ತದೆ.

ಇಂತಹ ಮುಖಗಳಿಂದ ವ್ಯಕ್ತಿಯ ಮನಸ್ಥಿತಿಯನ್ನು ತಿಳಿಯಬಹುದು. ಸಂಸ್ಕೃತದಲ್ಲಿ ಮುಖ ಶಬ್ದದ ಮೂಲ ಅರ್ಥ ಬಾಯಿ. ಬಾಯಿ ಮಾತ್ರ ನಂತರ ಈ ಪದ ವಿಶಾಲಾರ್ಥವನ್ನು ಪಡೆದುಕೊಂಡು ಕಣ್ಣು, ಕಿವಿ, ತುಟಿ, ಮೂಗುಗಳಿಂದ ಕೂಡಿದ ಮುಖ ಎಂದು ಅರ್ಥವನ್ನು ಪಡೆದುಕೊಂಡಿದ್ದು ಭಾಷಿಕ ವಿಶಾಲಾರ್ಥವನ್ನು ವಿಸ್ತರತೆಯನ್ನು ತಿಳಿಯಬಹುದು. ಬೇರೆಯವರು ನಮ್ಮ ಮುಖವನ್ನು ಗಮನಿಸುತ್ತಿದ್ದಾರೆ ಎಂದರೆ ನಮ್ಮ ವ್ಯಕ್ತಿತ್ವವನ್ನು ಅಳೆಯುತ್ತಿದ್ದಾರೆ ಎಂದರ್ಥ. ಅಧಿಕಾರಿಗಳು, ವ್ಯಾವಹಾರಿಕ ಸಂದರ್ಭದಲ್ಲಿ ಹಲವು ಸನ್ನಿವೇಶಗಳು ಎದುರಾದಾಗ ವಿವಿಧ

೧-೨-೩. ಸಂ. ತಾ.ರಾ. ನಾಗರಾಜ್, ಸ.ಲ.ಪ್ರ. ಅ.ರಾ.ಮಿತ್ರ. 'ಮುಖಮಂಡಲ', ಪು-೩೨, ೩೩

ಮುಖಗಳು ಕಾಣಿಸಿಕೊಳ್ಳುತ್ತವೆ. ಗಡಿಗೆ ಮುಖ ಯಾರಾದರು ವಿಳಾಸ ಕೇಳಿದರೆ ರಾಚುವ ಮುಖ. ಮುಂತಾದವು ನಮಗೆ ಇಷ್ಟವಿಲ್ಲದ ಸಂಗತಿಗಳಿಗೆ ತೋರುವ ಪ್ರತಿಕ್ರಿಯೆ ಆಗಿರುತ್ತದೆ.

ಹೀಗೆ ಮುಖ ನಮ್ಮ ಅಂತರಂಗದ ಅಭಿವ್ಯಕ್ತಿಯ ಪ್ರತಿಬಿಂಬವಾಗಿರುವುದನ್ನು ಕೆಲವು ಗಾದೆ ಪದ್ಯಗಳನ್ನು ಉದಾಹರಿಸುವ ಮೂಲಕ ಮುಖ ವರ್ತಿಸುವ ಸ್ವರೂಪವನ್ನು ಕಾಣಬಹುದು.

ಕಣ್ಣು :

ಮುಖದಲ್ಲಿ ಪ್ರಮುಖ ಅಂಗವಾದ ಕಣ್ಣುಗಳು ನಮ್ಮ ಅಂದವನ್ನು ಹೆಚ್ಚಿಸುತ್ತವೆ ಈ ಕಣ್ಣುಗಳಿಲ್ಲದಿದ್ದರೆ ಬದುಕು ಅಂಧಕರವಾಗಿ ಬಿಡುತ್ತದೆ. ಈ ಕಣ್ಣುಗಳು ಸಹಜ ಸ್ವಭಾವದ ಗುಣಗಳನ್ನು ವ್ಯಕ್ತಿಗೆ ಕಲ್ಪಿಸಿಕೊಡುತ್ತವೆ. ನಾವು ಹುಟ್ಟಿನಿಂದ ಸಾಯುವವರೆಗೆ ಎಚ್ಚರಿಕೆಯ ಸಂದರ್ಭದಲ್ಲಿ ಕಣ್ಣುಗಳನ್ನು ತೆರೆದಿರುತ್ತವೆ. ಕಣ್ಣು ಮುಚ್ಚುವುದು ಎಂದರೆ ನಿದ್ದೆ ಸಮಯದಲ್ಲಿ ಮತ್ತು ಚಿರನಿದ್ರೆಗೆ ಜಾರಿದಾಗ. ಉಳಿದ ಸಂದರ್ಭದಲ್ಲಿ ಕಣ್ಣುಗಳು ಹೊರ ಜಗತ್ತನ್ನು ನೋಡುವುದರ ಜೊತೆಗೆ ವ್ಯಕ್ತಿಯ ಸೂಕ್ಷ್ಮ ದೃಷ್ಟಿಗೆ ಅರಿವಾಗುವ ಒಳನೋಟವನ್ನು ತಿಳಿಸುತ್ತವೆ. ಕಣ್ಣುಗಳ ಮೇಲೆ ಹಲವಾರು ಗಾದೆಗಳು ಹುಟ್ಟಿಕೊಂಡಿವೆ. ಮಾರಿಕಣ್ಣು ಹೋರಿಮ್ಯಾಲೆ 'ಕಳ್ಳನನ್ನ ನಂಬಿದರೂ ಮೆಳ್ಳಗಣ್ಣನನ್ನು ನಂಬಬೇಡ' 'ಅತ್ತೆ ಕಣ್ಣು ಕೊತ್ತಿಮ್ಯಾಗೆ' ಮುಂತಾದಂತ ಗಾದೆಗಳು ನಮ್ಮ ವ್ಯಕ್ತಿತ್ವವನ್ನು ತಿಳಿಸುವುದರ ಜೊತೆಗೆ ನಾವು ಬೇರೆಯವರನ್ನು ನೋಡುವ ದೃಷ್ಟಿಯನ್ನು ತಿಳಿಸುತ್ತವೆ. 'ಒಂದು ಕಣ್ಣಿಗೆ ಬೆಣ್ಣೆ ಒಂದು ಕಣ್ಣಿಗೆ ಸುಣ್ಣ' ಎನ್ನುವಾಗ ತಾರತಮ್ಯ ಸೂಚಕ ಸಲುವಾಗಿ ಬಳಸುತ್ತೇವೆ. ಯಾವತ್ತೂ ಈ ಕಣ್ಣುಗಳು ಒಂದಿನೊಂದು ನೋಡಿಕೊಳ್ಳಲು ಸಾಧ್ಯವಿಲ್ಲದಿರುವುದು ನಮ್ಮ ಅಂತರಂಗವನ್ನು ನಾವು ಅರಿಯಲು ಸಾಧ್ಯವಾಗದಿರುವುದಕ್ಕೆ ಉದಾಹರಿಸಬಹುದು. ಕನ್ನಡಿಯ ಹಾಗೆ ನಮ್ಮ ವ್ಯಕ್ತಿತ್ವವನ್ನು ತಿಳಿಸಲು ಕಣ್ಣುಗಳು ಸಾಕ್ಷಿಯಾಗಿ ನಿಲ್ಲಬೇಕು ಎಂಬುದನ್ನು ಅರಿತಾಗ ನಮ್ಮ ಆತ್ಮಶೋಧನೆಗೆ ಅರ್ಥ ಬರುತ್ತದೆ. ಕಣ್ಣು ಯಾವಾಗಲೂ ಸತ್ಯವನ್ನು ಹೇಳುತ್ತದೆ. ನಾವು ಪ್ರತ್ಯಕ್ಷವಾಗಿ ಕಂಡದನ್ನೆಲ್ಲವೂ ನಿಜ ಎಂದು ತಿಳಿಯುವ ಬದಲು ಅದನ್ನು ಪ್ರಾಮಾಣಿಕರಿಸಿ ನೋಡುವ ಅಗತ್ಯವೇ ಇದೆ.

ಕಣ್ಮಣಿ ಎನ್ನುವಾಗ ಆಕೆ ನಮಗೆ ಎಷ್ಟು ಆಪ್ಯಾಯಮಾನದವಳು ಎಂಬುದನ್ನು ವಿವರಿಸಬೇಕಾಗಿಲ್ಲ. 'ಕಣ್ಣಿನಲ್ಲಿ ಕಣ್ಣಿಟ್ಟು ನೋಡು' ಎಂದಾಗ ಸ್ಪಷ್ಟವಾಗಿ ಗಮನಿಸಬೇಕಾದ ಅಂಶವನ್ನು ತಿಳಿಯುತ್ತವೆ. ಅನುಮಾನದ ದೃಷ್ಟಿಯಲ್ಲೇ ಎಲ್ಲವನ್ನು ನೋಡಿದರೂ ತಪ್ಪೆನಿಸುತ್ತದೆ. ಕನ್ನಡಕ ಇದ್ದವರು ಅಕ್ಕಿ ಆರಿಸುವಾಗ ಕಣ್ಣಲ್ಲಿ ಕಣ್ಣಿಟ್ಟು ನೊಡಿದರೂ ಬೇರೆ ಎಂಬ ಅರ್ಥ ಬರುವಂತೆ ಬಳಸಿದರು. ಆದರೆ ಬೇರೆಯವರನ್ನು ವಂಚಿಸಿ ಮೋಸ ಮಾಡುವವರನ್ನು ಗಮನಿಸಲು ಈ ಕಣ್ಣಿನಲ್ಲಿ ಕಣ್ಣಿಟ್ಟು ನೋಡು ಎಂದು ಬಳಸಬಹುದಾಗಿದೆ ಈ ಕಣ್ಣು ಪಂಚೇಂದ್ರಿಯ ಕೆಲಸವನ್ನು ಮಾಡುತ್ತದೆ. ವಸ್ತುವನ್ನು ಮೂಸಬಲ್ಲದು. ಮುಟ್ಟಬಲ್ಲದು. ಕೇಳಬಲ್ಲದು. ನೋಡಬಲ್ಲದು ಈ ಎಲ್ಲವನ್ನು ಸೂಕ್ಷ್ಮ ದೃಷ್ಟಿ ಹೊಂದಿದ ಅನುಭವಗಳನ್ನು ಕಣ್ಣಿನ ಪರಿಭಾಷೆಯಲ್ಲಿ ಚಿತ್ರಿಸಲು ಸಾಧ್ಯವಿದೆ. ಬಡವ ಕಣ್ಣೀರಲ್ಲಿ ಕೂಳು ತಿನ್ನುವವರು ಎನ್ನುವಾಗ

ಬಡವ-ಶ್ರೀಮಂತರ ವ್ಯತ್ಯಾಸ ಗುರುತಿಸಬಹುದು ಶ್ರೀಮಂತರು ಬಡವರನ್ನು ಶೋಷಿಸುತ್ತಿದ್ದು ಅವರನ್ನು ತುಳಿಯುತ್ತಿರುವುದು ಸೂಚಕವಾಗುತ್ತದೆ. ಹೆಂಡತಿಯರು ಗಂಡದಿರನ್ನು ಅನುಮಾನಿಸಿ ನೋಡುವ ಸ್ವಭಾವದವರಾಗಿದ್ದಾಗ ಜೀವನದಲ್ಲಿ ನಂಬಿಕೆ ಕಳೆದುಕೊಂಡು ಸಂಸಾರ ಗೊಂದಲದ ಗೂಡಾಗುತ್ತದೆ. ಹೀಗೆ ನಮ್ಮ ವ್ಯಕ್ತಿತ್ವ ತಿಳುಸುವಲ್ಲಿ ಕಣ್ಣುಗಳು ಹೇಗೆ ವರ್ತಿಸುತ್ತವೆ ಎಂಬುದನ್ನು ಕೆಲವು ಗಾದೆಗಳನ್ನು ಉದಾಹರಿಸುವ ಮೂಲಕ ಕಣ್ಣಿನ ಪಾತ್ರವನ್ನು ವಿವರಿಸಿದ್ದಾರೆ.

ಮೂಗು :

ಮೂಗು ಮುಖದಲ್ಲಿ ವಾಸನೆಯನ್ನು ಗ್ರಹಿಸುವ ಒಂದು ಅಂಗ ಮಾತ್ರ ಆಗಿರದೆ ವ್ಯಕ್ತಿಯ ನಡವಳಿಕೆ ಸ್ವಭಾವವನ್ನು ತಿಳಿಸುತ್ತದೆ ಎಂಬುದನ್ನು 'ಮೂಗಿನ ತುದಿ' ಪ್ರಬಂಧದಲ್ಲಿ ನೋಡಬಹುದು. ಮೂಗಿನ ಬಾಹ್ಯರೂಪ ಸೌಮ್ಯವಾಗಿ ಕಂಡರು ಅದರ ಅಂತರ್ಮುಖ ಕರಾಳವಾದದ್ದು. ಈ ಮೂಗುಗಳಲ್ಲಿ ಹಲವು ಬಗೆಗಳಿವೆ. ಗಿಣಿ ಮೂಗು, ಗಣಿ ಮೂಗು, ಸಂಪಗೆ ಮೂಗುಗಳೆಂದು ಕರೆಯುತ್ತೇವೆ. ಮೂಗಿನ ತುದಿಯಲ್ಲಿ ಏನಿರುತ್ತದೆಂದು ತಿಳಿದರೆ ಬರಿ, ನತ್ತು ಮೂಗುಬಳೆ, ಮೂಗುತಿ ಎನ್ನುವ ಮಾತಿಗಿಂತ ಅಲ್ಲಿ ಕೋಪ ಇರುವ ಸಂಗತಿ ಯಾರಿಗೂ ಗೋಚರವಾಗುವುದಿಲ್ಲ. ಅದು ಯಾವಾಗ ಕಾಣಿಸಿಕೊಳ್ಳುತ್ತದೆಂದು ಹೇಳುವುದು ಕಷ್ಟ. ಇದನ್ನು ಕೋಪ ಎನ್ನುತ್ತಾರೆ. ಈ ಕೋಪದಿಂದ ದೇಹಕ್ಕಾಗಲಿ ದೇಶಕ್ಕಾಗಲಿ ಒಳ್ಳೆಯದಲ್ಲ. ಕೋಪ ಅನರ್ಥಕ್ಕೆ ಕಾರಣವಾಗುತ್ತದೆ. ನಮ್ಮ ಮನಸ್ಸಿನ ಶಾಂತಿಯನ್ನು ಕೆಡಿಸುತ್ತದೆ. ಕೋಪವನ್ನು ಬಿಡುತ್ತೇನೆಂದು ಹೇಳುವುದು ಸುಲಭ ಆದರೆ ಕಾರ್ಯರೂಪಕ್ಕೆ ತರುವುದು ಕಷ್ಟ. ಆದರೆ ಮನುಷ್ಯ ತಾಳ್ಮೆ ಬೆಳೆಸಿಕೊಳ್ಳುವುದು ಮುಖ್ಯ. 'ಯಾರೂ ಕಾಶಿಗೆ ಹೋಗಿ ಕೋಪ ಬಿಟ್ಟು ಬಂದೆ'! ಎಂದರಂತೆ ಇದು ನಿಜವೇ ? ಸತ್ಯವೇ ? ಹೌದೇ ? ಎಂದು ಪದೇ ಪದೇ ಪ್ರಶ್ನಿಸಿದಾಗ ಇನ್ನೊಂದು ಸಲ ಆ ವಿಚಾರ ಎತ್ತಿದರೆ ತಲೆ ಒಡದೇ ಬಿಡುತ್ತೇನೆ ಎಂದರಂತೆ ಹೀಗೆ ಕೋಪವನ್ನು ಎಲ್ಲಾ ಸಂದರ್ಭದಲ್ಲಿ ಹೊರಗೆಡಹುತ್ತದೆ. ಯಾರಾದರೂ ನಮ್ಮನ್ನು ಕೆಣಕಿದರೆ ನಮಗೆ ಮೂಗಿನ ತುದಿಯಲ್ಲೇ ಕೋಪ ಇದೆ ರೇಗಿಸಬೇಡ ಎಂದು ಎಚ್ಚರಿಸುತ್ತವೆ. ಇನ್ನೊಬ್ಬರು ನಮಗಿಂತ ಮುಂದೆ ಬೆಳೆಯುತ್ತಿದ್ದರೆ, ನಮಗೆ ಆಗದವರು ಇದ್ದರೆ ಹೀಗೆ ಎಲ್ಲಾ ಸಂದರ್ಭದಲ್ಲಿ ಕೋಪ ವ್ಯಕ್ತಪಡಿಸುವ ಸಂದರ್ಭವನ್ನು ಉದಾಹರಿಸಿದ್ದಾರೆ.

ಅತ್ತೆ-ಸೊಸೆ, ಅಧಿಕಾರಿ-ಗುಮಾಸ್ತ ಇವರೆಲ್ಲರೂ ತಮ್ಮ ಯಜಮಾನಿಕೆಯನ್ನು ತೋರ್ಪಡಿಸುವ ಸಲುವಾಗಿ ಇಲ್ಲಸಲ್ಲದ ನೆಪಹೂಡಿ ಕೆಳಗಿನವರ ಮೇಲೆ ಕೋಪಗೊಳ್ಳುತ್ತಿರುತ್ತಾರೆ. ಇಲ್ಲಿ ತಮ್ಮ ಯಜಮಾನಿಕೆ ಸ್ಥಾಪಿಸುವುದು ಮುಖ್ಯವಾಗಿರುತ್ತದೆ ಹೊರತು ಕೋಪಕ್ಕೆ ಕಾರಣ ಮುಖ್ಯವಾಗಿರುವುದಿಲ್ಲ ಇಂತಹ ಕೋಪವನ್ನು ಬಿಡುವುದು ಒಳ್ಳೆಯದು.

ಕೋಪವನ್ನು ಕಡಿಮೆ ಮಾಡಲು ಧ್ಯಾನ ಒಂದು ಮುಖ್ಯ ಸಾಧನವಾಗಿ ತೋರುತ್ತದೆ. ಕೆಲವರು ಸಣ್ಣ ಸಣ್ಣ ವಿಷಯಗಳಿಗೂ ಕೋಪಗೊಳ್ಳುತ್ತಾರೆ. ಸಹನೆ ಕಳೆದುಕೊಂಡು ಬಿಡುತ್ತಾರೆ. ಅಂಥವರು ಕೋಪವನ್ನು ಗೆಲ್ಲಲು ಇರುವ ಮಾರ್ಗವೆಂದರೆ ಧ್ಯಾನ. ಋಷಿಮುನಿಗಳು ಮುಂತಾದವರು ಕೋಪ ಕಡಿಮೆ ಮಾಡಿಕೊಳ್ಳಲು ಯೋಗ, ಧ್ಯಾನದ ಮೊರೆಹೋಗುತ್ತಿದ್ದನಂತೆ. ತಮ್ಮ ಮೂಗಿನ ತುದಿಯನ್ನೇ ನೋಡುತ ಅರೆಗಣ್ಣಿಗರಾಗಿ ಧ್ಯಾನಸಕ್ತರಾಗಿ ಕೋಪ ಕಡಿಮೆ ಮಾಡಿ ಕೊಳ್ಳುತ್ತಿದ್ದರಂತೆ. ಹಾಗೆ ಮನುಷ್ಯ ಇಂದು ಕೋಪವನ್ನು ಕಡಿಮೆ ಮಾಡಿಕೊಳ್ಳುವ ಅಗತ್ಯ ಇದೆ. ಇಲ್ಲಸಲ್ಲದ ವಿಷಯಗಳಿಗೂ ಕೋಪಗೊಳ್ಳುವ ಮುಂಗೋಪಿಗಳು ಕೋಪವನ್ನು ಬಿಡುವುದು ಉತ್ತಮ. ಮೂಗು ನಮ್ಮ ಅಸಹನೆಯನ್ನು ಚಿತ್ರಿಸುವ ಪ್ರತಿರೂಪವಾಗಿರುವುದನ್ನು ಈ ಪ್ರಬಂಧದಲ್ಲಿ ಕಾಣಿಸಿಕೊಂಡಿದೆ.

ಬಾಯಿ :

ಕೆಲವರಿಗೆ ಮಾತಿನ ಚಟವಿದ್ದು ತಾವು ಮಾತನಾಡುತ್ತಿರುವುದರ ಅರಿವೆ ಇಲ್ಲದೆ ಮಾತನಾಡುತ್ತಿರುತ್ತಾರೆ. ಮತ್ತೆ ಕೆಲವರಿಗೆ ನಾವು ಏನು ಕೇಳುತ್ತಿದ್ದೇವೆ ಎಂಬುದು ತಿಳಿಯದೆ ಕೇಳುವ ಕಾರ್ಯದಲ್ಲಿ ತೊಡಗಿರುತ್ತಾರೆ. ಇಂಥಹ ಸ್ವಭಾವದ ಸಭಿಕರು ಮತ್ತು ಭಾಷಣಕಾರರನ್ನು ಕಿವಿ ಬಾಯಿಗಳಿಗೆ ರೂಪಕವಾಗಿ ಬಳಸಿ ಹೇಳಿರುವುದನ್ನು 'ಬಾಯಿ-ಕಿವಿ' ಪ್ರಬಂಧದಲ್ಲಿ ಕಾಣಬಹುದು. ಭಾಷಣಕಾರರಿಗೆ ವೇದಿಕೆ ಸಿಕ್ಕಿದರೆ ಸಾಕು ಯಾವಾಗಲು ಬಾಯಿವದರಿಕೊಳ್ಳುತ್ತಿರುತ್ತಾರೆ. ತಾನು ಮಾತನಾಡಬೇಕಾಗಿರುವ ವಿಷಯ ಯಾವುದು? ತಾನು ಮಾತನಾಡುತ್ತಿರುವ ವಿಷಯ ಯಾವುದು ಎಂದು ತಿಳಿಯದೆ ಒಂದೇ ಸಮನೆ ಒದರುತ್ತಿರುತ್ತಾರೆ. ಮತ್ತೆ ಕೆಲವರು ಸಭಾ ಮರ್ಯಾದೆ ಇಲ್ಲದೆ ಹೇಳಿದ ವೇಳೆಗೆ ಬರದೆ ಸಮಯ ಶೂನ್ಯರಿರುತ್ತಾರೆ. ಕೆಲವರು ಗಂಟೆ ಗಟ್ಟಲೆ ಕಾಯಿಸಿ ಬರುವುದೇ ಇಲ್ಲ. ಒಂದು ವೇಳೆ ತಡವಾಗಿ ಬಂದರು ಕ್ಷಮೆಯಾಚಿಸುವುದಿಲ್ಲ. ಇವು ಇಂದಿನ ರಾಜಕಾರಣಿಗಳು ನಡೆದುಕೊಳ್ಳುವುದಕ್ಕೆ ಉತ್ತಮ ನಿರ್ದಶನವಾಗಿದೆ. ಇಂಥವರು ಎಂದಾದರು ತಮ್ಮ ತಪ್ಪುಗಳನ್ನು ತಿದ್ದುಕೊಂಡು ನಡೆಯುತ್ತಾರೆಂದು ಆಶಾಭಾವನೆ ಇದೆ. ಅದು ಒನಕೆ ಚಿಗುರಿತೆಂಬ ಆಶಾಭಾವನೆ (180).

ಒನಕೆ ಚಿಗುರುವುದು ಒಂದೆ ಇಂಥ ವಾಚಾಳಿ ಬಾಯಿಬಡುಕ ವ್ಯಕ್ತಿಗಳು ಬದಲಾಗುವುದು ಒಂದೆ. ಇದು ಬಾಯಿ ಭಾಷಣಕಾರರ ಗುಣವಾಗಿದೆ.

ಕಿವಿ :

ಇನ್ನು ಸಭಿಕರು, ಕೇಳುಗರು, ತಾವು ಸಭೆಯಲ್ಲಿ ನಡೆದುಕೊಳ್ಳುವ ರೀತಿ ನಾನಾ ಪರಿಯದಾಗಿರುತ್ತದೆ. ಸಭೆಯಮಧ್ಯೆ ಬಂದು ಕುಳಿತು ಇತರರೊಂದಿಗೆ ಹರಟುತ್ತಾ ಆ ಕಡೆ ಈ ಕಡೆ ನೋಡುತ್ತಾ ಗಾಳಿಬೀಸಿಕೊಳ್ಳುತ್ತ, ಉಸ್ಸು ಎನ್ನುತ್ತ, ತೊಣಚಿ ಹೊಕ್ಕವರ ಹಾಗೆ ಆಡುತ್ತಿರುತ್ತಾರೆ. ಮುಂದಿನ ಸಾಲುಗಳು ಖಾಲಿ ಇದ್ದರೂ ಹಿಂದಿನ ಸಾಲಿನಲ್ಲಿ ಕುಳಿತು ತಾನು

ಯಾವಾಗಬೇಕಾದರೆ ಆಗ ಹೋಗಬಹುದು ಎಂಬ ಲೆಕ್ಕಾಚಾರದಲ್ಲಿರುತ್ತಾರೆ. ಪರಿಚಿತರು ಕಂಡರೆ ಕೂಗುವ ಕೈಬೀಸುವ ಸ್ವಭಾವದವರು ಇರುತ್ತಾರೆ. ಹೀಗೆ ಸಭಿಕರು ಮತ್ತು ಭಾಷಣಕಾರರಿಗೂ ಸ್ಥಳದ ಮಹತ್ವ ತಿಳಿದಿರುವುದಿಲ್ಲ ಇಂಥವರು ಮೊದಲು ತಮ್ಮ ಸ್ವಭಾವವನ್ನು ತಿದ್ದುಕೊಳ್ಳುವುದು ಉತ್ತಮ ಎಂಬುದನ್ನು ಈ ಪ್ರಬಂಧದಲ್ಲಿ ತಿಳಿಸುತ್ತಾರೆ.

ಕಿವಿ ಕೇಳುವ ಆಲಿಸುವ ಕ್ರಿಯೆಯನ್ನು ನಿರ್ವಹಿಸುತ್ತದೆ. ಇದು ಆರೋಗ್ಯವಂತ ಕಿವಿ ಸರಿಯಾಗಿ ಕಾರ್ಯನಿರ್ವಹಿಸುತ್ತಿದ್ದಾಗ ಮಾತ್ರ ಸಾಧ್ಯ. ಇಂತಹ ಕಿವಿ ವ್ಯಕ್ತಿಯ ಮನಸ್ಸಿನ ಮೇಲೆ ಪ್ರಭಾವ ಬೀರಿ ಆತನ ವ್ಯಕ್ತಿತ್ವವನ್ನು ಬಿಂಬಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಮಿತ್ರರವರು ಈ ಕಿವಿ ಬಗ್ಗೆ ಕವಿಗಳ ಪ್ರಸ್ತಾಪವನ್ನು ಕುಮಾರವ್ಯಾಸ ಪಂಪಾದಿಗಳ ಕವಿಯ ಹೇಳೀರುವ ಕಿವಿಯು ಸ್ವಭಾವವನ್ನು ಉದಾಹರಿಸಿದ್ದಾರೆ.

ಅವನಿ ಪಾಲರು ತಂಗಳಂದವೆ

ಕಿವಿಗೆ ಕರವೊಳ್ಳದರು ಕಂಡುವ

ನವರು ಸಂಬರು ಕೊಂಡೆಯದ ನುಡಿ ಕೇಳಿ ನಂಬುವುದು[1]

ದ್ರೋಣಾಚಾರ್ಯರ ಶೌರ್ಯ ಪರಾಕ್ರಮಗಳನ್ನು ಕಣ್ಣಾರೆ ಕಂಡಿದ್ದರು ಅದನ್ನು ನಂಬದೇ ಯಾರೊ ಚಾಡಿಕೋರರರು ಹೇಳಿದ ಮಾತನ್ನು ನಂಬುತ್ತಿದ್ದೀಯಲ್ಲ ನಿನಗೆ ಯಾರೊ ಕಿವಿ ಕಿಡಿಸಿದ್ದಾರೆ ಎನ್ನುತ್ತಾರೆ. ಪಂಪ 'ಕಿವಿಗಿನಿದುಂ ಕೃಪಂಗೆ ತಮಲಂ ನುಡಿಯಲ್ಲಿರುವುದಿಲ್ಲ' ಎಂದು ಅರಣ್ಯವಾಸದಲ್ಲಿದ್ದ ಪಾಂಡವರ ಬಳಿ ಬೇಹುಗಾರ ಹೇಳುವ ಮಾತು.

ದೊರೆ, ಧರ್ಮರಾಯ ಪ್ರಭು ನಾನು ಹಸ್ತಿನಾವತಿಯಲ್ಲೆಲ್ಲಾ ಕಿವಿ ತೆರೆದುಕೊಂಡು ಸುತ್ತಾಡಿದೆ ಕೌರವನು ಊರ ಜನರಿಗೆಲ್ಲಾ ಏನೋ ಮಾಯೆ ಮಾಡಿರಬೇಕು. ಅಲ್ಲಿ ಧರ್ಮರಾಯ ನಿನ್ನನ್ನ ಹೊಗಳುವುದು ನಿನ್ನ ಹೆಸರನ್ನು ಎತ್ತುವವರು ಇರಲಿಲ್ಲ. ಎಂದನಂತೆ ಹೀಗೆ ಪಂಪ ಕುಮಾರವ್ಯಾಸರು ಕಿವಿಯ ಮಹತ್ವದ ಚರ್ಚೆಯನ್ನು ಎತ್ತಿದ್ದಾರೆ ಎನ್ನುವ ಕಿವಿಯ ಬಗೆಗಿನ ಘೋರ ಸ್ವಭಾವದ ಬಗ್ಗೆ ಉತ್ತಮ ನಿದರ್ಶನವನ್ನು ಮಿತ್ರ ನೀಡಿದ್ದಾರೆ.

ಈ ಮೇಲಿನ ಮಾತುಗಳಿಂದ ಎಂತಹ ವ್ಯಕ್ತಿತ್ವದ ಆರೋಪಗಳು ಬರುತ್ತವೆ ಎಂಬುದನ್ನು ಮೇಲೆ ಕಿವಿಯ ಪ್ರಭಾವವನ್ನು ತಿಳಿಯಬಹುದು. ಅವರಿವರ ಚಾಡಿ ಮಾತು ಕೇಳುವ ದುರ್ಯೋಧನ ನಂತವರು ಚಾಡಿ ಮಾತಿಗೆ ಪ್ರಾಮುಖ್ಯತೆ ನೀಡಿ ಬೇರೆಯವರನ್ನು ನಿಂದಿಸುತ್ತಿರುತ್ತಾರೆ. ಕಿವಿಯ ಬಾಹ್ಯರೂಪ ನಮ್ಮ ಸೌಂದರ್ಯವನ್ನು ಹೆಚ್ಚಿಸುತ್ತದೆ. ಕಿವಿಗಳಿಗೆ ತೊಡುವ ಆಭರಣಗಳು ನಮ್ಮ ಸೌಂದರ್ಯವನ್ನು ಹೆಚ್ಚಿಸುವುದರ ಜೊತಗೆ ನಮ್ಮ ಸಂಪ್ರದಾಯ ಆಚಾರ-ವಿಚಾರಗಳನ್ನು ತಿಳಿಸುತ್ತದೆ. 'ಸಾನಿಯಾಮಿರ್ಜಾ. ಒಳ್ಳೆಯ ಆಟಗಾರ್ತಿ ಸುಂದರ ಮುಖದವಳೆಂದು ಒಳ್ಳೆಯ ಆಟಗಾರ್ತಿ ಎಂಬುದನ್ನು ಒಪ್ಪುತ್ತೇನೆ. ಆದರೆ ಕಿವಿಯ ಆಭರಣದಿಂದ ಅವಳ ಸೌಂದರ್ಯ ಮತ್ತು ಆಟದ ಆಕರ್ಷಣೆ ಇಮ್ಮಡಿಸಿದೆ'. ಹೆಣ್ಣಿಗೆ ಕಿವಿ ಚುಚ್ಚಿ

೧. ಅ.ರಾ. ಮಿತ್ರ – ಅರತಕತೆ, ಪ: ಕರ್ಣಾಮೃತ – ಪು-೨೧೧

ಆಭರಣ ಧರಿಸುವುದರಿಂದ ಒದಗಬಹುದಾದ ಸೌಂದರ್ಯವನ್ನು ಈ ಮೇಲಿನ ವಾಕ್ಯ ತಿಳಿಸುತ್ತದೆ. ಹಾಗೆ ಹಿಂದೆ ಗಂಡು ಹೆಣ್ಣುಗಳೆಲ್ಲರಿಗೂ ಕಿವಿ ಚುಚ್ಚುತ್ತಿದ್ದರು. ಈಗ ಬೇರೊಂದು ಬಗೆಯ ಕಿವಿ ಚುಚ್ಚಾಟ ವಿಜೃಂಭಿಸಿದೆ.[೧] ಎಂದಾಗ ಅವರಿವರ ವಿಷಯವನ್ನು ಬೇರೆಯವರಿಗೆ ಹೇಳಿ ಜಗಳ ತಂದು ಹಾಕಿ ಮನೋರಂಜನೆ ಪಡೆಯುವ ಜನ ಇಂದು ಹೆಚ್ಚಾಗುತ್ತಿದ್ದಾರೆ. ಚಾಡಿ ಮಾತುಗಳನ್ನು ನಿಜವೆಂದು ನಂಬುವವರು ತಮ್ಮ ಮನಸ್ಸನ್ನು ಕೆಡಿಸಿಕೊಳ್ಳುತ್ತಿದ್ದಾರೆ. ಇಲ್ಲಿ ಚಾಡಿ ಹೇಳುವುದು ಮತ್ತು ಚಾಡಿಮಾತು ಕೇಳುವುದು ಎರಡು ತಪ್ಪು ಎಂಬುದನ್ನು ಗಮನಿಸಬೇಕು.

ಕಿವಿಹಿಂಡಿ ಬುದ್ಧಿ ಕಲಿಸು ಎಂಬ ಗಾದೆ ಮಾತನ್ನು ಸಾಮಾನ್ಯವಾಗಿ ಬಳಸುತ್ತೇವೆ. ಕೆಟ್ಟ ಮಾರ್ಗದಲ್ಲಿ ನಡೆಯುತ್ತಿದ್ದಾಗ ಹಾಗೂ ದುರ್ಬಲ ಮನಸ್ಸಿನವರೂ ಅನ್ಯಮಾರ್ಗದಲ್ಲಿ ನಡೆದಾಗ ಅವರನ್ನು ಸರಿದಾರಿಗೆ ತರಲು ಈ ಮಾತುಗಳನ್ನು ಬಳಸುತ್ತಾರೆ. ಬೇರೆಯವರ ಮಾತುಗಳನ್ನು ನಂಬಿ ಎಲ್ಲರೊಂದಿಗೂ ಮನಸ್ಥಾಪ ಕಟ್ಟಿಕೊಳ್ಳಬೇಕಾಗುತ್ತದೆ.

ಅವರಿವರ ಮಾತು ಕೇಳಿ ಎಲ್ಲವನ್ನು ನಂಬುತ್ತಾರೆ. ಇಂತಹವರನ್ನು ಹಿತ್ತಾಳೆ ಕಿವಿ ಎಂದು ಗೇಲಿ ಮಾಡಿದ್ದಾರೆ. ನಾವಾಡುವ ಮಾತುಗಳು ಬೇರೆಯವರಿಗೆ ಹಿತವನ್ನು ಉಂಟು ಮಾಡುವಂತಿರಬೇಕು. ಹಾಗಿದ್ದಾಗ ನಾವು ಎಲ್ಲರ ಕೃಪೆಗೆ ಪಾತ್ರರಾಗುತ್ತೇವೆ. ನಮ್ಮ ಮಾತುಗಳಿಂದ ಬೇರೆಯವರು ಸಂತೋಷಗೊಳ್ಳುವುದು ಈ ಕಿವಿಯಿಂದಲೇ ಒಳ್ಳೆಯ ಸವಿ ಮಾತುಗಳಾಡಿದರೆ ಕರ್ಣಾಮೃತ ಎನ್ನುತ್ತಾರೆ.

ಕೆಲವರು 'ಜಾಣಕಿವುಡರಾಗಿ' ವರ್ತಿಸುವುದುಂಟು. ಜಾಣ ಕಿವುದು ಎಂದರೆ ಕೇಳಿಸಿಯೂ ಕೇಳಿಸದಂತೆ ಬದುಕುತ್ತಿರುವರು. ಕೆಟ್ಟಮಾತು ವಿಷಯಗಳನ್ನು ನಮಗೆ ಅನಗತ್ಯವಾದ ವಿಷಯಗಳನ್ನು ಬೇಡವಾದಾಗ ಈ ರೀತಿ ವರ್ತಿಸುವುದು ತಪ್ಪಲ್ಲ. ಹಾಗೆ ಬಸ್ಸು, ಸಾರ್ವಜನಿಕ ಸಂದರ್ಭಗಳಲ್ಲಿ ಏರಿದ ಧ್ವನಿಯಲ್ಲಿ ಮಾತನಾಡುತ್ತಿರುತ್ತಾರೆ. ಬೇಕು ಬೇಡದ ಸರಸ, ಸಲ್ಲಾಪ ಪ್ರೇಮ, ಜಗಳ ಹೀಗೆ ಎಲ್ಲಾ ಬಗೆಯ ವಿಷಯಗಳು ಬಂದು ಹೋಗುತ್ತವೆ. ಇಂಥ ವೇಳೆ ಜಾಣಕಿವುಡರಾಗಿರುವುದು ಒಳ್ಳೆಯದು.

ಹೀಗೆ ಏರಿದ ಧ್ವನಿಯಲ್ಲಿ ಸಂಭಾಷಿಸುವ ಸ್ವಭಾವದವರನ್ನು ವ್ಯಂಗ್ಯವಾಡುತ್ತಾರೆ. 'ಕಿವಿಯೊಳಗೆ ಹುಳುಬಿಟ್ಟುಕೊ' ಎನ್ನುವ ಮಾತುಗಳನ್ನು ಕೇಳಿದ್ದೇವೆ. ಈ ಮಾತು ಕಿವಿಯೊಳಗೆ ಹುಳು ಬಿಟ್ಟುಕೊಂಡರೆ ಸದಾ ಕೊರೆಯುತ್ತಿರುತ್ತದೆ. ಉತ್ತರ ಸಿಗುವವರೆಗೂ ಮನಸ್ಸಿಗೆ ಸಮಾಧಾನವಾಗುವುದಿಲ್ಲ. ಇಂತಹ ಸ್ವಭಾವದವರು ಶಬ್ದದ ಬೆನ್ನ ಹತ್ತಿ ಹೋಗಿ ಹೊಸ ವಿಷಯವನ್ನು ಹೆಕ್ಕಿ ತರುತ್ತಾರೆ. ವಿಜ್ಞಾನಿಗಳು ಸಾಧಕರು, ಇಂಥ ಹುಳುಗಳನ್ನು ಪೋಷಿಸಿ ಶ್ರೇಷ್ಟ ಸಂಶೋಧನೆ ಮಾಡುತ್ತಾರೆ'[೨] ಇವರ ಹಾಗೆ ನಾವು ಯಾವಾಗಲು ಒಳ್ಳೆಯ ಸಂಗತಿಗಳನ್ನು ಕಿವಿಯ ಮೂಲಕ ಮನಸ್ಸಿಗೆ ಇಳಿಸಿಕೊಳ್ಳಬೇಕು ಆಗ ವ್ಯಕ್ತಿಯ ಬೆಳವಣಿಗೆ ಸಾಧ್ಯ. ಕ್ರಿಯಾಶೀಲರಾದವರು ಯಾವಾಗಲು ತಮ್ಮ ಕೆಲಸದಲ್ಲಿ ಯಶಸ್ಸಿನ ಗಳಿಸಲು ಈ ಹಾದಿಯನ್ನು ಹಿಡಿಯುತ್ತಾರೆ. ಅಂಥವರು ಉತ್ತಮ ಸಾಧನೆಯನ್ನು ಮಾಡುತ್ತಾರೆ. ಆದರೆ ಇಂಥ ವಿಷಯದ

೧. ಅ.ರಾ. ಮಿತ್ರ – ಅರತಕ್ಷತೆ, ಪ್ರ: ಕರ್ಣಾಮೃತ – ಪು-೨೧೭

ಕಡೆ ಗಮನ ಹರಿಸದೆ ಅನಗತ್ಯವಾದ ವಿಷಯವನ್ನು ಕಿವಿಗಳಿಗೆ ಬಿಟ್ಟುಕೊಂಡು ಮನಸ್ಸಿನ, ಶಾಂತಿಯನ್ನು, ಕಳೆದುಕೊಂಡು ಬದುಕುತ್ತಿದ್ದೇವೆ. ಇನ್ನಾದರೂ ಅವರಿರವರ ಮಾತು ಕೇಳುವುದು ಚಾಡಿ ಮಾತುಗಳನ್ನು ಕೇಳುವ, ಬೇರೆಯವರಿಗೆ ಕಿವಿ ಚುಚ್ಚುವ ಕೆಟ್ಟ ಚಾಳಿಗಳನ್ನು ಬಿಡುವುದ ಒಳ್ಳೆಯದೆನಿಸುತ್ತದೆ.

ಹೀಗೆ ಪಂಚೇಂದ್ರಿಯಗಳಲ್ಲಿ ಮುಖ್ಯವಾದ ಕಣ್ಣು, ಕಿವಿ, ಮೂಗುಗಳು ವರ್ತಿಸುವ ಸ್ವರೂಪದಿಂದ ಮನುಷ್ಯರಿಗೆ ವ್ಯಕ್ತಿತ್ವ ಗುಣಗಳು ಆರೋಪಿತವಾಗುತ್ತದೆ. ಅವು ನಮ್ಮ ವ್ಯಕ್ತಿತ್ವವನ್ನು ತೋರ್ಪಡಿಸಿ ಸಮಾಜದಲ್ಲಿ ನಮ್ಮ ಸ್ಥಾನಮಾನ ನಿರ್ಧಾರವಾಗಲು ಕಾರಣವಾಗುತ್ತದೆ. ಅದಕ್ಕಾಗಿ ಈ ಅಂಗಗಳನ್ನು ಹದ್ದುಬಸ್ತಿನಲ್ಲಿಟ್ಟುಕೊಂಡು ಬದುಕಬೇಕು. ಆಗ ಮಾತ್ರ ಒಳ್ಳೆಯ ಜೀವನ ನಡೆಸಲು ಸಾಧ್ಯ ಎಂಬುದನ್ನು ಇವರ ಪ್ರಬಂಧಗಳಲ್ಲಿ ಕಾಣಬಹುದು.

ಇಷ್ಟೇ ಅಲ್ಲದೆ ಮನುಷ್ಯನ ಸ್ವಭಾವದನ್ನು ಕುರಿತ ಅಂಶಗಳನ್ನು ಅಡ್ಡಗೋಡೆ, ಜೋಡಿದಾರ ಮುಂತಾದ ಪ್ರಮುಖ ಪ್ರಬಂಧಗಳಲ್ಲಿ ಕಟ್ಟಿಕೊಡುತ್ತಾರೆ. ನಾವು ಹೇಳದ ಒಂದು ಕೆಲಸಕ್ಕೆ ಮತ್ತೊಂದು ಪ್ರಶ್ನೆಗಳನ್ನು ಹಾಕುತ್ತಾ ಕೆಲಸ ನಿರ್ವಹಿಸದೆ ಸೋಮಾರಿತನವನ್ನು ಪ್ರದರ್ಶಿಸುವ ಸ್ವಭಾವದವರನ್ನು ಅಡ್ಡಗೋಡೆ ಮೇಲೆ ದೀಪವಿಟ್ಟಂತೆ ಮಾತನಾಡುವವರನ್ನು ಅಡ್ಡಗೋಡೆ ಪ್ರಬಂಧದಲ್ಲಿ ವಿಡಂಭಿಸಿದ್ದಾರೆ. ಹೀಗೆ ಜೋಡಿದಾರ ಪ್ರಬಂಧದಲ್ಲಿ ಮಕ್ಕಳನ್ನು ಕೆಲಸಕ್ಕೆ ಸೇರಿಸಿಕೊಂಡು ಶೋಷಿಸುವುದನ್ನೇ ಕಾಣಬಹುದು. ಕಾಲ ಕಳೆಯಲೆಂದು ಕ್ಲಬ್‌ಗೆ ಬರುವ ಜನರ ಸ್ವಭಾವವನ್ನು ಅರಿತಿದ್ದ ವಾಚಾಳಿಯಾಗಿದ್ದ ನಾಗಣ್ಣ ಒಂದು ಕೆಲಸ ಹೇಳಿದರೆ ಹತ್ತು ಪ್ರಶ್ನೆ ಕೇಳಿ ಸಾಕಾಗುವಂತೆ ಮಾಡುತ್ತಾನೆ. ಬಹಳ ವರ್ಷಗಳಿಂದ ಕೆಲಸ ಮಾಡುತ್ತಿರುವ ಅವನಿಗೆ ಶ್ರೀಮಂತರ ಸ್ವಭಾವ ಚೆನ್ನಾಗಿ ಅರ್ಥವಾಗಿರುತ್ತದೆ ಆದುದರಿಂದ ಒಂದು ಕೆಲಸಕ್ಕೆ ಹಲವು ಪ್ರಶ್ನೆ ಕೇಳುತ್ತಿರುತ್ತಾನೆ.

ಇಂದಿನ ದಿನಗಳಲ್ಲಿ ವಿದ್ಯಾರ್ಥಿಗಳಲ್ಲಿ ಓದುವ ಅಭ್ಯಾಸ ಕಡಿಮೆಯಾಗುತ್ತಿದ್ದು ಪುಸ್ತಕಗಳು ಬೇಡವಾಗಿವೆ. ಜ್ಞಾನವನ್ನು ಗಳಿಸುವಲ್ಲಿ ಈ ಪುಸ್ತಕಗಳು ಮಹತ್ವದ್ದಾಗಿವೆ. ಓದುವ ಚಟವನ್ನು ಬೆಳೆಸಿಕೊಳ್ಳುವ ಬಗ್ಗೆ 'ಪುಸ್ತಕ ಭೂಷಣ', 'ಸೆಕೆಂಡು ಹ್ಯಾಂಡ್ ಪುಸ್ತಕಗಳು' ಪ್ರಬಂಧಗಳಲ್ಲಿ ತಿಳಿಸುತ್ತಾರೆ.

ಬ್ರಹ್ಮಚರ್ಯ ಜೀವನದಲ್ಲಿ ಅಡಿಗೆ ಮಾಡಲು ಕಷ್ಟಪಡುವವರನ್ನು ಸ್ತ್ರೀ ಅಡುಗೆಯ ಕೈರುಚಿ ಮುಂತಾದ ಅಂಶಗಳನ್ನು 'ಸ್ವಯಂಪಾಕ' 'ಸ್ವಪಾಕ ರುಚಿ' ಪ್ರಬಂಧಗಳಲ್ಲಿ ಕಟ್ಟಿಕೊಡುತ್ತಾರೆ.

ಹೀಗೆ ಹಲವು ಪ್ರಬಂಧಗಳ ಮೂಲಕ ಮನುಷ್ಯನನ್ನು ಎಚ್ಚರಿಸುತ್ತ ಅವನ ಹೀನ ಕೆಟ್ಟ ಗುಣಗಳನ್ನು ವಿಡಂಬಿಸುತ್ತಾ ಬದುಕಿನ ಒಳ್ಳೆಯ ಅಂಶಗಳನ್ನು ಅಳವಡಿಸಿಕೊಳ್ಳುವ ಸೂಕ್ಷ್ಮ

ನೀಡುತ್ತಾ ಉತ್ತಮ ಜೀವನವನ್ನು ನಡೆಸಬೇಕೆಂಬ ಸೂಚನೆಗಳನ್ನು ತಮ್ಮ ಪ್ರಬಂಧದಲ್ಲಿ ಕಟ್ಟಿಕೊಡುತ್ತಾರೆ.

4.4 ಲಲಿತ ಪ್ರಬಂಧಗಳ ವಿಶಿಷ್ಟತೆ :

ಪ್ರಬಂಧ ರಚನೆ ವಿಶಿಷ್ಟವಾದ ಕಲೆಯಾಗಿದ್ದು ಭಾಷೆಯ ಪ್ರಯೋಗ ಖಚಿತತೆಯನ್ನು ಒಳಗೊಂಡಿರಬೇಕಾಗಿರುತ್ತದೆ. ಲೇಖಕ ಹೇಳಹೊರಟಿರುವ ವಿಷಯವನ್ನು ಸಾಮಾನ್ಯರಿಗೂ ಮನಮುಟ್ಟುವ ರೀತಿ ಹೇಳಬೇಕಾದದ್ದು ಸವಾಲಿನ ಕೆಲಸವಾಗಿರುತ್ತದೆ. ಲೇಖಕ ತನ್ನ ಆಲೋಚನೆ ಅಭಿಪ್ರಾಯಗಳನ್ನು ವ್ಯಕ್ತಪಡಿಸುವಾಗ ಕಲ್ಪನೆಗಿಂತ ವಾಸ್ತವಿಕತೆಗೆ ಹೆಚ್ಚು ಗಮನ ಹರಿಸಬೇಕಾದುದ್ದು ಮುಖ್ಯವಾಗಿದ್ದು. ಆಯ್ದುಕೊಂಡ ವಿಷಯವನ್ನು ಓದುಗರಿಗೆ ಮುಟ್ಟಿಸುವಲ್ಲಿ ಹಲವಾರು ಸವಾಲುಗಳಿದ್ದು ಅವುಗಳನ್ನು ಯಶಸ್ವಿಯಾಗಿ ಮೆಟ್ಟಿ ನಿಂತಾಗ ತನ್ನ ಪ್ರಯೋಗ ಸಾರ್ಥಕತೆ ಕಾಣಲು ಸಾಧ್ಯವಾಗುತ್ತದೆ. ಪ್ರಬಂಧದ ಖಚಿತತೆ, ನಿಖರತೆ, ಸ್ಪಷ್ಟತೆಯನ್ನು ಒಳಗೊಂಡಿರಬೇಕು, ಹಾಗಿದ್ದಾಗ ಮಾತ್ರ ಒಂದು ಪ್ರಬಂಧ ಓದುಗರನ್ನು ಹಿಡಿದಿಡಲು ಸಾಧ್ಯ. ಪರಿಣಾಮಕಾರಿಯಾದ ಭಾಷಾಪ್ರಯೋಗ ಸಮರ್ಪಕವಾಗಿದ್ದಾಗ ಪ್ರಬಂಧದಲ್ಲಿ ಒಂದು ತೂಕವಿರುತ್ತದೆ. ಬರಹಗಾರ ತನ್ನದೆಯ ವಿಶಿಷ್ಟ ಭಾಷಾಪ್ರಯೋಗವನ್ನು ಅಳವಡಿಸಿಕೊಂಡು ಪ್ರಬಂಧ ರಚಿಸಿದಾಗ ಮಾತ್ರ ಪ್ರಬಂಧಕ್ಕೆ ಮಹತ್ವ ಬರುತ್ತದೆ. ವಸ್ತುವಿನ ಆಯ್ಕೆ, ವಿಷಯಬೆಳವಣಿಗೆಯಲ್ಲಿ ವೈವಿಧ್ಯತೆಯನ್ನು ಒಳಗೊಂಡಿದ್ದಾಗ ಪ್ರಬಂಧ ಓದಿಸಿಕೊಂಡು ಹೋಗುತ್ತದೆ. ಹೀಗೆ ಪ್ರಬಂಧ ವೈಶಿಷ್ಟತೆಯನ್ನು ಕಾಣುತ್ತೇವೆ.

ಅ.ರಾ.ಮಿತ್ರರವರ ಪ್ರಬಂಧಗಳನ್ನು ಓದುತ್ತಾ ಹೋದಂತೆ ಈ ಮೇಲಿನ ಎಲ್ಲಾ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ಇವರ ಪ್ರಬಂಧಗಳಲ್ಲಿ ಮುಖ್ಯವಾಗಿ ಕಾಣಿಸಿಕೊಳ್ಳುವುದೆಂದರೆ ಹಾಸ್ಯ. ತಿಳಿ ಹಾಸ್ಯದ ಮೂಲಕ ಓದುಗರೊಂದಿಗೆ ಸಂಭಾಷಿಸುತ್ತ ವಿಷಯವನ್ನು ಹಣೆಯುವುದನ್ನು ಕಾಣುತ್ತೇವೆ. ವಿಷಯದ ಬೆಳವಣಿಗೆಗೆ ಗಾದೆ, ಕವಿವಾಣಿ, ಪುರಾಣ ಪಾತ್ರಗಳು ಬಳಸುತ್ತಾ ವಸ್ತುವಿನ ಆಯ್ಕೆಯಲ್ಲಿ ವೈವಿಧ್ಯತೆಯನ್ನು ಕಾಣುತ್ತ ಅಕ್ಷರ ಪಲ್ಲಟದೊಂದಿಗೆ ವಿಶಿಷ್ಯ ಹೊಸ ಭಾಷಾ ಪ್ರಯೋಗ ಮಾಡುತ್ತ ಸಾಗುವುದನ್ನು ಇವರ ಪ್ರಬಂಧದಲ್ಲಿ ಕಾಣುತ್ತೇವೆ. ಹಾಸ್ಯ ಪ್ರಮುಖವಾಗಿ ಕಂಡರೂ ಅದರಲ್ಲಿ ಒಳಾರ್ಥವಿದ್ದು ಓದುಗರನ್ನ ನಗೆಗಡಲಿನಲ್ಲಿ ಮೈಮರೆಸದೆ ಚಿಂತನೆಗೆ ಒಳಪಡಿಸುತ್ತದೆ. ಹಾಸ್ಯ ಮೂಲಕವೇ ಸಮಾಜವನ್ನು ವ್ಯಕ್ತಿಯನ್ನು ವಿಡಂಬಿಸುತ್ತಾ ವೈಚಾರಿಕ ದೃಷ್ಟಿಕೋನದಿಂದ ಸಲಹೆ ಸೂಚನೆಯನ್ನು ನೀಡುತ್ತಾರೆ. 'ಪ್ರಬಂಧಗಳನ್ನು ಒಂದು ಸಲ ಹತ್ತು ಸಲ ನಕ್ಕು ದಿಂಬಿಗೆ ಒರಗಿದಾಗ ಅನಿಸುವುದೇ ಬೇರೆ ಅವರಿಗೆ ದೇವರಿಗಿಂತ ಈ ಬದುಕು ದೊಡ್ಡದು. ಏನೆಲ್ಲಾ ಏಳು ಬೀಳು, ಒರಳು ಉರುಗಳುಗಳ ನಡುವೆ ಸಾಯದೆ ಬೇಯುವ, ಬದುಕುವ ಮನುಷ್ಯ ದೊಡ್ಡವನು'[೧] ಎಂದು ಎಂ.ಹೆಚ್. ಕೃಷ್ಣಯ್ಯ (ಮುನ್ನುಡಿ) ಅವರು ಹೇಳಿರುವ ಮಾತು ನಿಜಕ್ಕೂ ಅರ್ಥಪೂರ್ಣ ಎನಿಸುತ್ತದೆ. ಸಮಾಜದಲ್ಲಿ ಬುದಕುವ ಮನುಷ್ಯ ಹಲವಾರು ತಪ್ಪುಗಳನ್ನು

೧. ಸಂ. ತಾ.ರಾ. ನಾಗರಾಜ್, ಸ.ಲ.ಪ್ರ. ಅ.ರಾ.ಮಿತ್ರ. 'ಮುನ್ನುಡಿ', ಪು-XXI

ಎಸಗುತ್ತಾ ಜೀವನ ಸಾಗಿಸುತ್ತಿರುತ್ತಾನೆ. ಅಂತಹ ಉತ್ತರ ಕುಮಾರನನ್ನು ತಿದ್ದುವ ಅರ್ಜುನನಂತೆ ಅ.ರಾ.ಮಿತ್ರ ಕಾಣಿಸುತ್ತಾರೆ. ಮನುಷ್ಯನ ತಪ್ಪುಗಳನ್ನು ಹೆಕ್ಕಿ ತೋರಿಸುವುದರ ಜೊತೆಗೆ ಆ ತಪ್ಪುಗಳಿಗೆ ಚಿಕಿತ್ಸಾರೂಪದ ಸಲಹೆ ನೀಡುವುದನ್ನು ಇವರ ಪ್ರಬಂಧಗಳಲ್ಲಿ ಕಾಣುತ್ತವೆ. ಹೀಗೆ ಇವರ ಪ್ರಬಂಧದಲ್ಲಿ ಹಲವಾರು ವೈಶಿಷ್ಟ್ಯತೆಗಳಿವೆ ಅವುಗಳಲ್ಲಿ ಪ್ರಮುಖವಾದವುಗಳೆಂದರೆ :

4.4.1 ವಸ್ತುವಿನ / ವಿಷಯದ ಆಯ್ಕೆ

4.4.2 ವಿಷಯ ಬೆಳವಣಿಗೆ

4.4.3 ಭಾಷಾ ಪ್ರಯೋಗ

4.4.4 ಹಾಸ್ಯ ಪ್ರಜ್ಞೆ

4.4.1 ವಸ್ತುವಿನ / ವಿಷಯದ ಆಯ್ಕೆ :

ಯಾವುದೇ ಒಂದು ವಿಷಯವನ್ನು ತೆಗೆದುಕೊಂಡರು ಅದರಲ್ಲಿ ವೈವಿಧ್ಯತೆಯನ್ನು ಕಾಣಬಯಸುತ್ತೇವೆ. ಇದು ಮನುಷ್ಯನ ಸಹಜ ಗುಣ. ಒಂದೇ ವಿಷಯ, ವಸ್ತುವನ್ನು ಯಾವು ಇಷ್ಟಪಡುವುದಿಲ್ಲ. ಅದೇ ರೀತಿ ಮಿತ್ರರವರು ತಮ್ಮ ಲಲಿತ ಪ್ರಬಂಧ ರಚನೆಯಲ್ಲಿ ವೈವಿಧ್ಯತೆಯನ್ನು ಕಾಣಬಯಸುತ್ತಾರೆ ಎಂಬುದಕ್ಕೆ ಅವರ ಪ್ರಬಂಧಗಳ ಸಾಕ್ಷಿ. ಸುಮಾರು ನೂರಕ್ಕೂ ಹೆಚ್ಚು ಲಲಿತ ಪ್ರಬಂಧಗಳನ್ನು ರಚಿಸಿದ್ದಾರೆ. ಆದರೆ ಅವುಗಳು ಒಂದೇ ವಸ್ತು, ವಿಷಯವನ್ನು ಒಳಗೊಂಡವುಗಳಾಗಿರದೆ ಹಲವು 'ಬಗೆ'ಯವಾಗಿವೆ. ಇವರ ಪ್ರಬಂಧಕ್ಕೆ ಇಂಥದ್ದೆ ವಸ್ತು ವಿಷಯವಾಗಬೇಕೆಂದೇನಿಲ್ಲ. ನಮ್ಮ ಜೀವನದಲ್ಲಿ ನಡೆಯುವ ಘಟನೆಗಳಿಂದ ಹಿಡಿದು ದೈನಂದಿನ ನಿತ್ಯ ಬದುಕಿನ ಸಾಮಾನ್ಯ ಸಂಗತಿಗಳು ಸಹ ಇವರ ಪ್ರಬಂಧದ ಕಥಾ ವಸ್ತುವಾಗಬಲ್ಲವು. ನಮ್ಮ ಸುತ್ತಮುತ್ತಲಿನ ವಸ್ತುಗಳು ಸಜೀವ, ನಿರ್ಜೀವ, ಯಾವಾದರೂ ಸರಿ. ಕೊನೆಗೆ ಮನುಷ್ಯನ ಅಂಗಾಗಳಾದರೂ ಸರಿ ಅವನ್ನ ಕಥಾವಸ್ತುವನ್ನಾಗಿ ಆಯ್ಕೆ ಮಾಡಿಕೊಂಡು ಪ್ರಬಂಧ ರಚಿಸಿತೊಡಗುತ್ತಾರೆ.

ನಮ್ಮ ಜೀವನದಲ್ಲಿ ದಿನ ನಿತ್ಯ ಹಲವು ಘಟನೆಗಳನ್ನು ನೋಡುತ್ತಿರುತ್ತವೆ. ಸಾಕ್ಷಿಯಾಗುತ್ತಿರುತ್ತೇವೆ. ಆದರೆ ಅವನ್ನು ನಾವು ಅಷ್ಟು ಸೂಕ್ಷ್ಮವಾಗಿ ಗಮನಿಸಲು ಹೋಗುವುದಿಲ್ಲ. ಆದರೆ ಚೇತನಾಶೀಲರಾದ, ಕ್ರಿಯಾಶೀಲರಾದವರು ಮಾತ್ರ ಅಂತವುಗಳನ್ನು ಎಚ್ಚರಿಕೆಯಿಂದ ಗಮನಿಸುತ್ತಿರುತ್ತಾರೆ. ಅದು ಎಲ್ಲರಿಗೂ ಸಾಧ್ಯವಾಗುವುದಿಲ್ಲ. ಒಬ್ಬ ಸೃಜನಶೀಲ ವ್ಯಕ್ತಿ ಮಾತ್ರ ಅಂಥವನ್ನು ಸೂಕ್ಷ್ಮವಾಗಿ ಗಮನಿಸಬಲ್ಲ ಎಂಬುದಕ್ಕೆ ಅ.ರಾ.ಮಿತ್ರರವರ ಸಾಕ್ಷಿಯಾಗಿ ನಿಲ್ಲುತ್ತಾರೆ.

ಮಿತ್ರರವರು ವಸ್ತುವಿನ ಆಯ್ಕೆಯಲ್ಲಿ ಎಷ್ಟು ಸೂಕ್ಷ್ಮ ಎಂಬುದನ್ನು ಅವರ ಸೆಕೆಂಡ್ ಹ್ಯಾಂಡ್ ಪುಸ್ತಕ ಪ್ರಬಂಧವನ್ನು ನೋಡಬಹುದು. ದಿನಾ ನಾವು ತಿರುಗಾಡುವ ರಸ್ತೆಬದಿ ಹಲವು

ವಸ್ತುಗಳನ್ನು ಕಾಣುತ್ತೇವೆ. ಆದರೆ ಅದರ ಬಗ್ಗೆ ಅಷ್ಟು ಗಮನಹರಿಸುವುದಿಲ್ಲ. ಸೆಕೆಂಡ್ ಹ್ಯಾಂಡ್ ಪುಸ್ತಕಗಳು ರಸ್ತೆ ಬದಿಯಲ್ಲಿ ಬಿದ್ದಿರುತ್ತವೆ ಎನ್ನುತ್ತೇವೆ. ಬಿದ್ದಿರುವುದಿಲ್ಲ ಇಟ್ಟುಕೊಂಡು ಮಾರುತ್ತಿರುತ್ತಾರೆ ! ಅದನ್ನು ಎಷ್ಟು ಸೂಕ್ಷ್ಮವಾಗಿ ಗಮನಿಸುತ್ತಾರೆ ಎಂಬುದನ್ನು ಮುಂದಿನ ವಾಕ್ಯದಲ್ಲಿ ನೋಡಬಹುದು.

ಚಳಿಗಾಳಿಯಲ್ಲಿ, ಕೆಂಧೂಳಿನಲ್ಲಿ, ಬಿಸಿಲಬೇಗೆಯಲ್ಲಿ ನಡುಗುವ ತುಟಿಗಳಿಂದ ಇವು ಅಸಹಾಯಕ ಸ್ಥಿತಿಯಲ್ಲಿ ತಮ್ಮ ರೆಕ್ಕೆಗಳನ್ನು ಆ ಕಡೆ ಈ ಕಡೆ ಆಡಿಸಿ ಹಾಯಾಗಿ ಉಸಿರಾಡಬೇಕೆಂದು ಬಯಸುತ್ತವೆ. ಆಗ ಸೆಕೆಂಡ್ ಹ್ಯಾಂಡ್ ಪುಸ್ತಕಗಳ ಮಾಲಿಕ ಗರುಡನಂತೆ ಹಾರಿ ಬಂದು ಒಂದು ದಪ್ಪ ಕಲ್ಲಿನಿಂದ ನಾಲ್ಕಾರು ಪುಸ್ತಕಗಳ ಬಡಬೋಳು ನೆತ್ತಿಗಲನ್ನು ಕುಕ್ಕಿ ಮಲಗಿಸಿಬಿಡುತ್ತಾನೆ'[೧] ಹೀಗೆ ವರ್ಣನೆಯ ಮೂಲಕ ವಿಷಯವನ್ನು ಕಟ್ಟಿ ಕೊಡುತ್ತಾರೆ. ನಾವಾಗಿದ್ದರೆ 'ಕಲ್ಲು ತೆಗೆದು ಪುಸ್ತಕದ ಮೇಲಿಟ್ಟ ! ಎನ್ನುತ್ತಿದ್ದೆವು.

ಇಲ್ಲಿ ಒಂದು ಸೆಕೆಂಡ್ ಹ್ಯಾಂಡ್ ಪುಸ್ತಕವು ಇವರ ಕಥಾವಸ್ತುವಾಗುತ್ತದೆ. ಪುಸ್ತಕ ಅಂಗಡಿಗಳಲ್ಲಿ ಮೂಲ ಬೆಲೆಯನ್ನು ಕೊಟ್ಟುಕೊಂಡು ಓದಲಾಗದವರಿಗೆ ಅಪರಂಜಿಯಾಗಿ ಓದು ಮುಗಿದ ವಿದ್ಯಾರ್ಥಿಗಳಿಗೆ ಬೇಡದ ಕಸವಾಗಿ ಬಿಡುವ ಈ ಸೆಕೆಂಡ್ ಹ್ಯಾಂಡ್ ಪುಸ್ತಕ ಪ್ರಬಂಧದ ಕಥಾವಸ್ತುವಾಗಿದೆ.

ಅದೇ ರೀತಿ ಜೀವನದ ದಿನನಿತ್ಯದ ನಮ್ಮ ಸಂಸಾರದಲ್ಲಿ ನಡೆಯುವ, ಸರಸ, ವಿರಸ, ಮುನಿಸು, ಕೋಪ, ತಾಪ, ಮನೆ, ಮಡದಿ, ಹೆಂಡತಿ, ಮಕ್ಕಳು, ಸಂಬಂಧಿಕರು ಮುಂತಾದಂತವು ಇವರ ಆಲೋಚನೆಯಲ್ಲಿ ಜೀವ ಪಡೆದು ಕಥಾವಸ್ತುವಾಗಿ ಪ್ರಬಂಧವಾಗಿ ಮೂಡಿ ಬರುತ್ತವೆ ಎಂಬುದಕ್ಕೆ ಈ ಮುಂದಿನ ಪ್ರಬಂಧಗಳೆ ಸಾಕ್ಷಿ. 'ತಿಥಿಯರಿದ ಅತಿಥಿಗಳು', 'ಆಡಿ ಬಾ ನನಕಂದ', 'ನಾಂಪ-ನಾಂಪಿ', 'ಹಾಲಿನವಳಲೆಕ್ಕ', 'ಮನೆ ಟೆಂಪರೇಚರ್', 'ಕುಟುಂಬ ಯೋಜನೆ', 'ಸರಸ ದಾಂಪತ್ಯ', 'ಪಿಳ್ಳೆಗಳ ಸಂಸಾರ', 'ನೀ ಕೊಡೆ ನಾ ಬಿಡೆ', 'ನಾನೊಂದು ಮದುವೆ ಮಾಡಿಕೊಂಬೆ' ಮುಂತಾದ ಸಂಸಾರದ ಘಟನೆಗಳು ಪ್ರಬಂಧಗಳಾಗಿ ಕಾಣಿಸಿಕೊಂಡಿವೆ.

ದೇಹದ ಅಂಗಾಗಗಳು ವ್ಯಕ್ತಪಡಿಸುವ ಸ್ವರೂಪವನ್ನು ಕುರಿತು ಹಲವು ಪರಬಂಧಗಳನ್ನು ರಚಿಸಿ ಅವುಗಳ ವರ್ತನೆಯಿಂದ ಮನುಷ್ಯರಿಗೆ ಒದಗಬಹುದಾದ ಆಪಾದನೆ, ಹೊಗಳಿಕೆಯನ್ನು ಕುರಿತು ಪ್ರಬಂಧ ಬರೆದಿದ್ದಾರೆ. ನಮ್ಮ ದೇಹದ ಅಂಗಾಂಗಳು ಕೂಡ ಕಥಾವಸ್ತುಗಳಾಗಬಹುದು ಎಂಬುದನ್ನ ಇವರ 'ಮುಖಮಂಡಲ', 'ಕಣ್ಣಿನ ಜಗತ್ತು', 'ಮೂಗಿನ ತುದಿ', 'ಬಾಯಿ-ಕಿವಿ', 'ಕರ್ಣಾಮೃತ', 'ಗೊರಕೆ' ಮುಂತಾದ ಪ್ರಬಂಧಗಳನ್ನು ಕಾಣಬಹುದು.

ಬೇರೆ ವಸ್ತುಗಳಿರಲಿ ತನ್ನ ಸ್ವ ಅನುಭವಗಳನ್ನು ಘಟನೆಗಳನ್ನು ಕುರಿತಂತೆ ಕೆಲವು ಪ್ರಬಂಧಗಳನ್ನು ರಚಿಸಿದ್ದಾರೆ. 'ನಾನೇಕ ಕೊರೆಯುತ್ತೇನೆ', 'ಒಬ್ಬ ಹಾಸ್ಯ ಸಾಹಿತಿ', 'ನನ್ನ

೧-೨. ಸಂ. ತಾ.ರಾ. ನಾಗರಾಜ್, ಸ.ಲ.ಪ್ರ. ಅ.ರಾ.ಮಿತ್ರ. ಪ್ರ: 'ಸೆಕೆಂಡ್ ಹ್ಯಾಂಡ್ ಪುಸ್ತಕಗಳು, ಪು-೧೩೮

ರಸಫಳಿಗೆಗಳು', 'ಕಸಾನುಭವ', 'ಬಸಪ್ಪನ ದೀಪಾವಳಿ, 'ಸಾಲವನು ಕೊಂಬಾಗ, 'ಸ್ವಪಾಕ ರುಚಿ', 'ಹೊಸ ವರ್ಷದ ಸಂಕಲ್ಪ' ಮುಂತಾದವು.

ನಾವು ದಿನನಿತ್ಯ ಹಲವರೊಂದಿಗೆ ವ್ಯವಹರಿಸುತ್ತ ಮಾತಾಡುತ್ತಿರುತ್ತೇವೆ. ಆದರೆ ಮಾತನಾಡುವಾಗ ಭಾಷೆಯ ಸೂಕ್ಷ್ಮತೆಯನ್ನು ಗಮನಿಸಿರುವುದಿಲ್ಲ. ಉಚ್ಛಾರಣೆಯಲ್ಲಿ ಹಲವು ದೋಷ ಕಂಡು ಬರುತ್ತವೆ. ಅಲ್ಲದೆ ವಿವಿಧ ಪ್ರಾಂತ್ಯದ ಜನ ವಿವಿಧ ಭಾಷೆಯನ್ನು ಪ್ರಯೋಗಿಸುತ್ತಿರುತ್ತಾರೆ. ಇಂತಹ ವ್ಯಾಕರಣ, ಛಂದಸ್ಸಿಗೆ ಸಂಬಂಧಪಟ್ಟಂತೆ ಹಲವು ಪ್ರಬಂಧಗಳನ್ನು ರಚಿಸಿದ್ದಾರೆ. ಸ್ವತಃ ಅಧ್ಯಾಪಕರಾಗಿದ್ದ ಮಿತ್ರರು ಭಾಷೆ, ಛಂದಸ್ಸಿಗೆ ಸಂಬಂಧಿಸಿದಂತೆ 'ಪಂಡಿತನ ಸಂಕಟ' ಬೆಂಗಳೂರು / ಧಾರವಾಡ, ಶಬ್ದಶುದ್ಧಿ, ಛಂದೋವಿಹಾರ ಪ್ರಬಂಧಗಳನ್ನು ನೋಡಬಹುದು.

ವಿದ್ಯಾರ್ಥಿ ಜೀವನದಲ್ಲಿ ಎದುರಾಗುವ ಪರೀಕ್ಷೆಗಳಿಗೆ ಸಂಬಂಧಿಸಿದಂತೆ 'ಪರೀಕ್ಷಾ ಜ್ವರ', 'ಮೂರು ಗಂಟೆಗಳು', ಪ್ರಬಂಧಗಳು ಕಾಣಿಸಿಕೊಂಡರೆ ವ್ಯಕ್ತಿತ್ವ ಸ್ವಭಾವಕ್ಕೆ ಸಂಬಂಧಿಸಿದಂತೆ 'ಕಲಕಿದ ಕೊಳ', 'ಅಡ್ಡೆಗೋಡೆ', 'ಜೋಡಿದಾರ' ಪ್ರಬಂಧಗಳನ್ನು ನೋಡಬಹುದು.

ರಾಜಕಾರಣಿಗಳ ವಿಡಂಬನೆ, ಸರ್ಕಾರ, ಆಡಳಿತದ ಕಾರ್ಯವೈಖರಿಗಳನ್ನು ಕುರಿತಂತೆ, 'ಗೊರಕೆ', 'ಹುತ್ತದಲ್ಲಿ ಹುತ್ತ', 'ವರ್ಗಾವಣೆ', 'ನನ್ನ ಯಶಸ್ಸಿನ ಗುಟ್ಟು', 'ಕ್ಯೂ', 'ಕಿರುದಾರಿಗಳವೆ-ಎಚ್ಚರಿಕೆ', ಹೀಗೆ ದೇವರು, ಸಾಲ, ವ್ಯಕ್ತಿತ್ವ ಮುಂತಾದ ವಿಷಯಗಳಿಗೆ ಸಂಬಂಧಿಸಿದಂತೆ ಹಲವು ಪ್ರಬಂಧಗಳನ್ನು ರಚಿಸಿದ್ದಾರೆ. ಆದರೆ ಯಾವುದರಲ್ಲೂ ವಿಷಯ ಪುನರಾವರ್ತನೆ ಆಗಿಲ್ಲ. ಎಲ್ಲದರಲ್ಲಿಯೂ ವೈವಿಧ್ಯತೆಯನ್ನು ಉಳಿಸಿಕೊಂಡು ಪ್ರಬಂಧಗಳನ್ನು ರಚಿಸಿರುವುದು ಇವರ ನೆನಪಿನ ಶಕ್ತಿಗೆ ಸಾಕ್ಷಿಯಾಗಿದೆ.

4.4.2 ವಿಷಯ ಬೆಳವಣಿಗೆ :

ಯಾವುದೇ ಒಂದು ವಿಷಯವನ್ನು ಕಥಾವಸ್ತುವಾಗಿ ಆಯ್ಕೆ ಮಾಡಿಕೊಂಡ ನಂತರ ಆ ವಿಷಯವನ್ನು ಓದುಗನಿಗೆ ಮನಮುಟ್ಟುವಂತೆ ವಿಷಯವನ್ನು ಬೆಳೆಸುತ್ತ ಓದುಗನಲ್ಲಿ ಕುತೂಹಲವನ್ನುಂಟು ಮಾಡುತ್ತಾ ಸಾಗಬೇಕಾದರೆ ವಿಷಯದ ಬೆಳವಣಿಗೆ ಬಹಳ ಮುಖ್ಯವಾಗಿರುತ್ತದೆ. ಹಾಗೆ ಓದುವಾಗ ರಸಭಂಗವಾಗದಂತೆ ಓದಿಸಿಕೊಂಡು ಹೋಗುವ ಹಾಗೆ ಪ್ರಬಂಧಗಳನ್ನು ರಚಿಸಬೇಕಾಗುತ್ತದೆ. ಹಾಗೆ ರಚಿಸಬೇಕಾದರೆ ಲೇಖಕನಿಗೆ ಅಪಾರ ವಿದ್ವತ್ ಇರಬೇಕಾಗುತ್ತದೆ. ಘಟನೆಗಳಿಗೆ, ಸನ್ನಿವೇಶಗಳಿಗೆ ಉದಾಹರಣೆಗಳನ್ನು ನೀಡುತ್ತಾ ಉಪಮೆ, ರೂಪಕಗಳ ಮೂಲಕ ವಿಷಯವನ್ನು ಹೆಣೆಯುತ್ತಾ ಸಾಗಬೇಕಾಗುತ್ತದೆ. ಮಿತ್ರರವರ ಪ್ರಬಂಧಗಳನ್ನು ಓದುವಾಗ ವಿಷಯದ ಬೆಳವಣಿಗೆಗೆ ಅವರು ತೋರುವ ಜಾಣ್ಮೆಯನ್ನು ಮೆಚ್ಚಲೇಬೇಕು. ಪುರಾಣ ಘಟನೆಗಳನ್ನು, ಸನ್ನಿವೇಶವನ್ನು, ಪಾತ್ರಗಳನ್ನು ಉದಾಹರಣೆಯಾಗಿ ಹೋಲಿಸುತ್ತ ಹೋಗುವುದನ್ನು ಕಾಣುತ್ತೇವೆ. ಹಳೆ ಕವಿವಾಣಿಗೆ ಮರು ವ್ಯಾಖ್ಯಾನ ನೀಡುತ್ತಾ

ಗಾದೆಗಳನ್ನು ಬಳಸುತ್ತ ವಚನ, ಕೀರ್ತನೆ, ಕವಿವಾಣಿಯನ್ನು ಬಳಸುತ್ತಾ ವಿಷಯವನ್ನು ಬೆಳೆಸುತ್ತಾರೆ. ಉದಾ: ಉತ್ತರ ಕುಮಾರರು ನಮ್ಮ ಸುತ್ತಮುತ್ತ ಎಂಬ ಪ್ರಬಂಧದಲ್ಲಿ ಪುರಾಣದ ಉತ್ತರ ಕುಮಾರನನ್ನು ಪ್ರತಿಮೆಯಾಗಿ ತೆಗೆದುಕೊಂಡು ಇಂದಿನ ಕಾಲದಲ್ಲಿ ಉತ್ತರಕುಮಾರನಂತ ಸ್ವಭಾವದವರನ್ನು ವಿಡಂಬಿಸುವುದನ್ನು ಇಲ್ಲಿ ನೋಡಬಹುದು.

ರಾಜಕಾರಣಿಗಳ ಸ್ವಭಾವವನ್ನು ವಿಡಂಬಿಸಲು ಕೆ.ಎಸ್.ಎನ್.ರವರ ಪದ್ಯವನ್ನು ಉದಾಹರಿಸುತ್ತಾರೆ.

ಬರಿಕೊಡಗಳಿಗೆ ಸಮಾಧಾನ ಹೇಳುತಿದೆ

ನೀರಿಲ್ಲದ ನಲ್ಲಿ

ಮಟ ಮಟ ಮಧ್ಯಾಹ್ನದಲ್ಲಿ...

ಹೀಗೆ ಒಂದು ವಿಷಯವನ್ನು ಬೆಳೆಸಲು ಅದಕ್ಕೆ ಪೂರಕವಾದ ಅಂಶವನ್ನು ಹೇಳಲು ಸಂದರ್ಭಕ್ಕೆ ತಕ್ಕಂತೆ ಕವಿಗಳ ಹೇಳಿಕೆಗಳನ್ನು ಆಯ್ದು ಉದಾಹರಿಸುತ್ತಾ ವಿಷಯವನ್ನು ಬೆಳೆಸುತ್ತಾರೆ. ವ್ಯಕ್ತಿಯ ವ್ಯಕ್ತಿತ್ವಕ್ಕೆ ಹೋಲಿಕೆಯಾಗುವಂತಹ ಪುರಾಣ ಪಾತ್ರಗಳನ್ನು ಹೋಲಿಸುವುದಕ್ಕೆ ಮಾವನನ್ನು ಕಂಸನಿಗೆ ಹೋಲಿಸಿ 'ಕಂಸ ಮಾವ' ಎನ್ನುವುದು. ಮಾತ್ಸರ್ಯದ ವಿಷಯಕ್ಕೆ ಹೊಟ್ಟೆಕಿಚ್ಚಿಗೆ ಮತ್ಸರಕ್ಕೆ ಸಂಬಂಧಿಸಿದಂತೆ ಭರತ, ದುರ್ಯೋಧನ, ಭೀಮ, ಪಾತ್ರ ದಾರಿಗಳನ್ನು ಹೆಸರಿಸಿ ಅಶ್ವತ್ಥಾಮ ಉಪಪಾಂಡವರ ತಲೆ ಕಡೆದು ತಂದ ಸನ್ನಿವೇಶವನ್ನು ಉದಾರಿಸುವುದನ್ನು ಹೊಟ್ಟೆಕಿಚ್ಚು ಪ್ರಬಂಧವಿಲ್ಲಿ ನೋಡಬಹುದು (84) ಮರ ಕಡಿವರನ್ನು ದೃತರಾಷ್ಟ್ರಲಿಂಗನಕ್ಕೆ ಹೋಲಿಸುವುದು ಕಾಡು ಸರ್ವನಾಶವಾಗುತ್ತಿರುವುದಕ್ಕೆ 'ಹಸಿರಿಲ್ಲದ ಕೆಸರಿಲ್ಲದ ಉಸಿರಿಲ್ಲದ ನರಕ' ಎಂದು ಪದ್ಯದ ಮೂಲಕ ವಿಷಾದ ಸೂಚಿಸುವುದನ್ನು ಕಾಣುತ್ತೇವೆ. ಪುರಾಣ ಕಾಲದ ಕೃಷ್ಣ, ಬಲರಾಮ, ಭೀಮ, ಅರ್ಜುನ, ಧರ್ಮರಾಯ ಮುಂತಾದವರನ್ನು ಪಾತ್ರಗಳಿಗೆ ಹೋಲಿಸಿ ಹೇಳುತ್ತಾರೆ. ಸರ್ವಜ್ಞ, ವಿ.ಸಿ, ಬೇಂದ್ರೆ, ಕೆ.ಎಸ್.ಎನ್. ಪಂಪ, ಕುಮಾರವ್ಯಾಸ, ರತ್ನಾಕರವರ್ಣಿ, ಅಡಿಗ, ಟಿ.ಪಿ.ಕೈಲಾಸಂ, ಎಂ.ಎನ್.ಮೂರ್ತಿರಾಯ, ಡಿ.ವಿ.ಜಿ., ರಾಘವಾಂಕ ಪುರಂದರದಾಸ ಮುಂತಾದವರ ಉಕ್ತಿಗಳನ್ನು ಸಂದರ್ಭಕ್ಕೆ ತಕ್ಕಂತೆ ಬಳಸುತ್ತಾರೆ. 'ಸಾಲ ಮಾಡಿ ಬಡ್ಡಿ ತೀರಿಸಲಾಗದಿದ್ದ ಸಂದರ್ಭವನ್ನು' 'ಸಾಲ ಮಾಡಿ ಓಲೆ ತಂದ ಓಲೆ ಮಾರಿ ಬಡ್ಡಿ ತೀರಿಸಿದ' ಎಂಬ ಔಚಿತ್ಯಪೂರ್ಣ ಉದಾಹರಣೆ ನೀಡುತ್ತಾರೆ. 'ಒಳಗೆದಗೆ ಹೊರಗೆ ನಗೆ', 'ಕೋಪವೆಂಬುದನರ್ಥಸಾಧನಂ', 'ಸಾಲಮಾಡಬೇಡ ಸಾಲದು ಎನಬೇಡ, ನಾಳೆಗೆ ಇಡಬೇಡ' (ಪುರಂದರದಾಸ), 'ಗಾಣಿಗನ ಕೈ ಹುಟ್ಟಾನೆ ಸೊಟ್ಟ', 'ಬತ್ತಲಾಗದೆ ಬಯಲು ಸಿಕ್ಕದಲ್ಲ', 'ತಪ್ಪು ಮಾಡಿದವರನ್ನು ಕೂಪಕ್ಕೆ ಹಾಕಿ' ಮುಂತಾದ ಗಾದೆಗಳನ್ನು ಬಳಸುತ್ತಾ ಹೋಗುತ್ತಾರೆ.

ಹಾಗೆ ಜನಪದ ವಾಕ್ಯಗಳನ್ನು ಉದಾಹರಿಸುವುದನ್ನು ಕಾಣಬಹುದು. ಅಷ್ಟೇ ಅಲ್ಲದೆ ಆಡುನುಡಿಪದ, ಜೋಡುನುಡಿ ಮುಂತಾದ ಪದಗಳನ್ನು ಬಳಸುತ್ತಾ ವಿಷಯವನ್ನು ಬಳಸುತ್ತಾ ಓದುಗನಲ್ಲಿ ಕುತೂಹಲವನ್ನು ಮಂಡಿಸುತ್ತಾರೆ. ಜೊತೆಗೆ ಉದಾಹರಣೆ ನೀಡುವಾಗ ಅವುಗಳ ಆಯ್ಕೆಯನ್ನು ಮರೆಯದೆ ಹೇಳುತ್ತಾರೆ. ಇದರಿಂದ ಮೂಲ ಕೃತಿಯನ್ನು ಅನುಮಾನವಿದ್ದರೆ ಪರೀಕ್ಷಿಸಲು ಅನುಕೂಲವಾಗುತ್ತದೆ. ಪಾತ್ರಗಳ ಹೋಲಿಕೆಯು ಔಚಿತ್ಯವಾಗಿದ್ದು ಅವು ಸಂದರ್ಭಕ್ಕೆ ತಕ್ಕಂತೆ ಇರುತ್ತವೆ. ಧರ್ಮರಾಯ ನನ್ನ ಒಂದು ಕಡೆ ಸೌಮ್ಯವ್ಯಕ್ತಿತ್ವಕ್ಕೆ ಹೋಲಿಸಿದರೆ ಮತ್ತೊಂದು ಸಂದರ್ಭದಲ್ಲಿ 'ಸಪ್ಪೆ' ಮೋರೆಗೆ ಹೋಲಿಸುತ್ತಾರೆ. ಹೀಗೆ ವಿಷಯವನ್ನು ಬಳಸುತ್ತ ಸಮಸ್ಯೆಗಳಿಗೆ ಪರಿಹಾರದ ಸೂಚನೆ ಸುಳಿವುಗಳನ್ನು ನೀಡಿ ನಮ್ಮನ್ನು ಯೋಚನೆಗೆ ಒಳಪಡಿಸುತ್ತಾ ವಿಷಯವನ್ನು ಬೆಳೆಸುತ್ತಾ ಸಾಗುತ್ತಾರೆ.

4.4.3 ಭಾಷಾ ಪ್ರಯೋಗ :

ಸೃಜನಾತ್ಮಕ ಲೇಖಕನಲ್ಲಿ ಭಾಷೆಯ ಬಳಕೆ ವಿಶಿಷ್ಟತೆಯಿಂದ ಕೂಡಿದ್ದಾಗ ಸಾಹಿತ್ಯ ಲೋಕಕ್ಕೆ ಹೊಸ ಪದಗಳು ಸೇರ್ಪಡೆಯಾಗುತ್ತವೆ, ಹಳೆ ಪದಗಳಿಗೆ ಹೊಸ ಅರ್ಥಗಳು ಹುಟ್ಟಿಕೊಳ್ಳುತ್ತವೆ. ಮಿತ್ರರವರೂ ಕೂಡ ತಮ್ಮ ಪ್ರಬಂಧಗಳಲ್ಲಿ ಹೊಸ ಪದಗಳನ್ನು ಬಳಸಿದ್ದಾರೆ. ಪದಗಳಲ್ಲಿ ಅಕ್ಷರವನ್ನು ಸ್ಥಾನಪಲ್ಲಟಗೊಳಿಸಿ ಹೊಸ ಅರ್ಥ ಒದಗಿಸಿಕೊಟ್ಟಿದ್ದಾರೆ. ಅಧ್ಯಾಪಕರಾಗಿದ್ದ 'ಮಿತ್ರ'ರವರು ಹಲವು ವರ್ಷಗಳ ಕಾಲ ವಿದ್ಯಾರ್ಥಿಗಳಿಗೆ ಪಾಠ ಹೇಳಿ ಕೊಟ್ಟಿದ್ದರಿಂದ ಹೊಸ ಪದ ಪ್ರಯೋಗಗಳನ್ನು ಹುಟ್ಟು ಹಾಕಲು ಸಾಧ್ಯವಾಗಿದೆ.

ಛಂದಸ್ಸನ್ನು ಕೂಡ ಹಳೆ 'ಮಾರ್ಗ'ವನ್ನು ಬಿಟ್ಟು ಹೊಸ ಪ್ರಯೋಗದ ಮೂಲಕ ಸಾಮಾನ್ಯ ಕನ್ನಡದಲ್ಲಿ ಹೇಳಿದ್ದಾರೆ. ಇದು ಅವರ ಭಾಷಾ ಪ್ರಯೋಗಕ್ಕೆ ಉತ್ತಮ ಉದಾಹರಣೆಯಾಗಿದೆ. ಅಕ್ಷರ ಪಲ್ಲಟದಲ್ಲಿ ಕಾಣುವ ಪ್ರಯೋಗಗಳು ಮಾವನ ಜನ್ಮ ದೊಡ್ಡದು (ಮಾನವಜನ್ಮ ದೊಡ್ಡದು), ಸಾಲಾಯ ತಸ್ಮೈ ನಮಃ (ಕಾಲಾಯ ತಸ್ಮೈ ನಮಃ), ನಾ(ಲಾ)ಯಕ ಪಾತ್ರಧಾರಿ (ನಾಯಕ ಪಾತ್ರದಾರಿ), ಸರ್ಜನರ ಸಹವಾಸ ಹೆಜ್ಜೇನು ಕಡಿದಂತೆ (ಸಜ್ಜನರ ಸಹವಾಸ ಹೆಜ್ಜೇನು ಕಡಿದಂತೆ), ಸಂಸಾರ ಬಾರೋದಯ (ಸಂಸಾರ ಸಾರೋದಯ), ತೆರೆದ ಜೇಬಿನಿಂದ (ತೆರೆದ ಮನಸ್ಸಿನಿಂದ), ಹತ್ತ worry ಗೆ ಹೆಗ್ಗಣ ಮುದ್ದು (ಹೆತ್ತವರಿಗೆ ಹೆಗ್ಗಣ ಮುದ್ದು), ಬೀದಿಯ ಕಾಲಣ್ಣ (ಬೀದಿಯ ಕಾಮಣ್ಣ), ಬಾಲ್ಕನಿಯ ಬಂಧುಗಳು (ದೇವತೆಗಳು) ಉಪಘಾತ !! (ಅಪಘಾತ), ನಾಂಪ–ನಾಪಿ (ನಗರದಗಾಂಪ–ಗಾಂಪಿ) ಹೀಗೆ ಅಕ್ಷರ ಪಲ್ಲಟವನ್ನು ನೋಡಬಹುದು.

ಹಾಗೆ ಹೊಸ ಪದಗಳ ಬಳಕೆ–ಕೊರಮಾವದಿ, ಬಾಗಿಲು ಬಡಿವಜನ (ಅತಿಥಿಗಳು), ಕಂಸಮಾಸ, ಕೆಂಗಣ್ಣ ಕಿಚ್ಚು ನುಡಿಕಿಚ್ಚು, ಅಸೂಯಯಾಗ, ಮೌಲ್ಯಾಧಾರಿತ ಚರ್ಚಾ ಕೂಟ (ಚೌಕಾಸಿ) ನಗೆಕತ್ತರಿ (ಜೋಕ್) ಕುವಾರ್ಥ ಸಚೀವ (ನಾರದ) ಬಾಲ್ಕನಿಯ ಬಂಧುಗಳು

(ದೇವತೆಗಳು) ಕೆಕ್ಕರೆಗಣ್ಣು. ನಡೆಗಣ್ಣ. ವಾರೆಗಣ್ಣ. ನಿದ್ದೆಗಣ್ಣ. ಕೌಂಟಾಸನ. ಅರ್ಧಶಯವಾಸನ. ಪ್ರಕೃತಿ ಪುರುಷಾಸನ. ಗೊಂಡನಿದ್ರಾತನ. ಅರ್ಧ ಪೃಷ್ಠಾಸನ. ಅನಂತಶಯನಾತ್ಮಕ. ಚೀಟೇಶ್ವರ (ಕಾಫಿ ಚೀಟಿ ಹೊಡೆಯುವವನು / ಹೊಂದಿರುವವನು).

(ಬೇ)ಸತ್ತು-ಬೇಸತ್ತು. ಲಕ್ಷುರಿ-ಲಕ್ಷ-ಉರಿ-ಲಕ್ಷುರಿ. ಮೇದಾವಿ-ಮೇಧಾವಿ-ಬಹುವ್ರೀಸಮಾಸ=ಮೇಯಲು ದಾವಿಸಿ ಬರುವನು ಯಾವನೋ ಅವನೇ ಮೇದಾವಿ.

ಹೀಗೆ ಹೊಸ ಪದಗಳನ್ನು ಬಳಸುತ್ತಾರೆ. ಪದಗಳು ಅರ್ಥ ವಿಸ್ತರತೆಯನ್ನು ಪಡೆಯುವುದು ನಗುತರಿಸುವುದರ ಜೊತೆಗೆ ಶಬ್ದಾರ್ಥಕ್ಕೆ ಮೀರಿದ ವ್ಯಂಗ್ಯಾರ್ಥದ ಸ್ಥಾನ ಪಡೆದುಕೊಳ್ಳುತ್ತವೆ. ಇದು ಕವಿಯ ಪ್ರತಿಭೆಗೆ ಹಿಡಿದ ಕನ್ನಡಿ. ಇದಲ್ಲದೆ ಛಂದಸ್ಸಿನಲ್ಲಿ ಕಂದ. ಅಕ್ಷರ. ಮಂತ್ರ ವೃತ್ತಗಳಗೆ ಹೊಸ ಕನ್ನಡದಲ್ಲಿ ನಾವು ದಿನನಿತ್ಯ ಬಳಸುವ ಹೇಳಿಕೆಗಳನ್ನು ಪದ್ಯವಾಗಿ ಕಟ್ಟಿಕೊಟ್ಟಿರುವುದನ್ನು ನೋಡಬಹುದು. ಬರಿ ಗುರುಗಳೇ ಬರುವ ಪದ್ಯ ಕಟ್ಟಿಕೊಟ್ಟು ಛಂದಸ್ಸನ್ನು ಸುಲಭ ಮಾಡಿಕೊಟ್ಟಿರುವ ಹೊಸ ಪ್ರಯೋಗವನ್ನು ನೋಡಬಹುದು.

- - - - - -
'ಹೋರಾಟಾ ಹೋರಾಟಾ
- - - - - - -
ಸಾಯೋವರ್ಗೂ ಹೋರಾಟಾ
- - - - - -
ಧಿಕ್ಕಾರಾ ಧಿಕ್ಕಾರಾ
- - - - - - -
ಎಲ್ಲಾ ಗುರ್ಂನೂ ಧಿಕ್ಕಾರಾ
- - - - - - - - -
ಜಿಂದಾಬಾದ್ ಜಿಂದಾಬಾದ್
- - - - - - - -
ಹೋರಾಟಕ್ಕೆ ಜಿಂದಾಬಾದ್'[೧]

ಹೀಗೆ ಸಾಮಾನ್ಯ ಪದಗಳನ್ನು ಬಳಸಿ ಹೇಳುವುದು ಕಾಣಬಹುದು. ಇದು ಹೊಸ ಭಾಷಾ ಪ್ರಯೋಗಕ್ಕೆ ಸಾಕ್ಷಿಯಾಗಿದೆ.

4.4.4 ಹಾಸ್ಯ ಪ್ರಜ್ಞೆ :

ಹಾಸ್ಯ ಮನಸ್ಸನ್ನು ಉಲ್ಲಾಸಗೊಳಿಸುತ್ತದೆ. ನಾವು ಆರೋಗ್ಯಕರ ಜೀವನ ನಡೆಸಬೇಕಾದರೆ ಹಾಸ್ಯದ ಟಾನಿಕ್ಕನ್ನ ದಿನಾ ಸ್ವಲ್ಪ ಸ್ವಲ್ಪ ಸೇವಿಸುತ್ತಾ ಇರಬೇಕು. ಈ ಮಾತು ಸತ್ಯವೆನಿಸುವಂತೆ ಅ.ರಾ. ಮಿತ್ರವರು ತಮ್ಮ ಲಲಿತ ಪ್ರಬಂಧದಲ್ಲಿ ಹಾಸ್ಯವನ್ನು ಹೆಚ್ಚಾಗಿ ತರುತ್ತಾರೆ. ಲಲಿತ ಸಾಹಿತ್ಯದಲ್ಲಿ ಲಲಿತ ಪ್ರಬಂಧಕ್ಕೆ ವಾಲಿದ್ದು ಯಾಕೆ ? ಎಂದು ಮಿತ್ರರನ್ನು ಪ್ರಶ್ನೆ ಕೇಳಿದ್ದಕ್ಕೆ 'ಅದನ್ನ ಕೇಳೋಕೆ ನೀನ್ಯಾರು ? ಎಂದರಂತೆ. ಕಾರಣ ಅವರಿಗೆ ಮೊದಲಿನಿಂದಲೂ 'ಲಲಿತ' ಮತ್ತು ಪ್ರಬಂಧ ಎರಡ ಮೇಲು ಇಷ್ಟವಂತೆ. ಏಕೆಂದರೆ ಮಿತ್ರರವರ ಪತ್ನಿಯ ಹೆಸರು ಲಲಿತ ![೨] ಹೀಗೆ ಮಾತಿನ ಮೂಲಕವೆ ಚಮತ್ಕಾರದಿಂದ ಸ್ವಭಾವದವರು. ಒಮ್ಮೆ ಭಾರತೀಯ ವಿದ್ಯಾಭವನದಲ್ಲಿ ಹಾಸ್ಯ ಬ್ರಹ್ಮದವರು ನಡೆಸಿದ ವಿಚಾರಣ ಸಂಕಿರಣದಲ್ಲಿ

೧-೨. ಲೆ. ಕೃಷ್ಣಸುಬ್ಬರಾವ್ ಛಂದೋ ಮಿತ್ರ ಖ್ಯಾತಿಯ ಸಾಹಿತಿ, ಅ.ರಾ.ಮಿತ್ರ, ಪು-೧೬-೧೮

ಮಿತ್ರರವನ್ನು ಕುರಿತು 'ಕತ್ತೆ ಮೇದ ಮೇಲೆ..' ಎಂದು ಹೇಳುತ್ತಿದ್ದಂತೆ ಮಿತ್ರ ಪ್ರತಿಕ್ರಿಯಿಸುತ್ತ 'ನನ್ನ ತಂಗಿಯ ಈ ಮಾತನ್ನು ಒಪ್ಪಲೇಬೇಕು' ಎಂದು ಅವರ ಕಾಲೆಳೆದು ನಗುವಿನ ಅಲೆಯನ್ನು ಎಬ್ಬಿಸಿದರು[೧]

ಇಂತಹ ಹಾಸ್ಯ ಸ್ವಭಾವದ ಮಿತ್ರರು ತಮ್ಮ ಲಲಿತ ಪ್ರಬಂಧಗಳಲ್ಲಿ ಹಾಸ್ಯದ ಸಂದರ್ಭಗಳನ್ನು ಕಟ್ಟಿಕೊಟ್ಟಿದ್ದಾರೆ. ಸನ್ನಿವೇಶದ ಮೂಲಕ ಮಾತಿನ ಚಮತ್ಕಾರದಿಂದ ಹಾಸ್ಯವನ್ನು ಸೃಷ್ಟಿಸುವ ಇವರನ್ನು ಶತಾವಧಾನಿ ಡಾ. ಆರ್. ಗಣೇಶ್‌ರವರು ಕುಮಾರವ್ಯಾಸನ ಮಲ್ಲೀನಾಥ ಎಂದು ಕರೆದಿದ್ದಾರೆ.

ಜೋಡಿದಾರ ಪ್ರಬಂಧದಲ್ಲಿ ಮಾಣಿ ನಾಗಪ್ಪ ಯಾರಾದರು ಒಂದು ಕೆಲಸ ಹೇಳಿದರೆ ಅದಕ್ಕೆ ಹತ್ತು ಪ್ರಶ್ನೆ ಕೇಳುವ ಸಂದರ್ಭ ಹಾಸ್ಯವನ್ನು ಹುಟ್ಟಿಸುತ್ತದೆ.

'ನಾಗಪ್ಪ ಸಿಗರೇಟು ತಂದುಕೊಡ್ತೀಯ

ಯಾವ ಸಿಗರೇಟು ಬೇಕು ಹೇಳಿಸಾರ್

ಗೋಲ್ಡ್ ಪೇಕೆ ತಗೊಂಡು ಬಾರಯ್ಯ

ಗೋಲ್ಡ್ ಪೇಕಾ ? ಫಿಲ್ಟರ್‌ದೋ ಆರ್ಡಿನರೀದೋ ಸಾರ್ ?

ಫಿಲ್ಟರ್ ಕಣಯ್ಯ

ಸಾಮಾನ್ಯ ಸೈಜಿಂದೋ, ಕಿಂಗ್ ಸೈಜಿಂದೋ ಸಾರ್ ?

ಕಿಂಗ್ ಸೈ ಜಿಂದೇ ತಾರಯ್ಯ'

ಕ್ಲಬ್ ಅಂಗಡಿಲೋ ಹೊರಗಡೇನೋ ಸಾರ್ ?

ಕ್ಲಬ್ ಅಂಗಡೀಲೇ ತಗೊಂಡು ಬಾರಯ್ಯ

ಸಾಲಾನೋ ಕ್ಯಾಷೋ ಸಾರ್

ದುಡ್ಡು ಕೈಲಿ ಹಿಡಿದೇ ಇದ್ದೀನಲ್ಲಯ್ಯ, ತಗೋ'[೨]

ಆಯ್ತು ಸಾರ್ ತರ್ತಿನಿ.. ತರೋ ಸಮಯಕ್ಕೆ ನೀವು ಇಲ್ಲೇ ಇರ್ತಿರೋ ? ಅಥವಾ ಇಸ್ಪೀಟ್ ರೂಮಲ್ಲಿರ್ತಿರೋ

ಎಲ್ಲದ್ರೂ ಹುಡುಕ್‌ಕೊಂಡ್ ಬಾರಯ್ಯ'

ಹೀಗೆ ಮಾತಿನ ಸಂದರ್ಭದಲ್ಲಿ ಪ್ರಶ್ನೆಗಳ ಸುರಿಮಳೆ ಗೈಯುವ ಹಾಗೆ ಮಾತನ್ನೇ ಮುಖ್ಯ ಬಂಡವಾಳವಾಗಿಟ್ಟುಕೊಂಡಿರುವ ಮಿತ್ರರು ತಮ್ಮ ಪ್ರಬಂಧಗಳಲ್ಲಿ ಹಾಸ್ಯವನ್ನು ತರುತ್ತಾರೆ.

---

೧. ಲೆ. ಕೃಷ್ಣಸುಬ್ಬರಾವ್ ಛಂದೋ ಮಿತ್ರ ಖ್ಯಾತಿಯ ಸಾಹಿತಿ, ಅ.ರಾ.ಮಿತ್ರ, ಪು-೩೧
೨. ಸಂ. ತಾ.ರಾ. ನಾಗರಾಜ್, ಸ.ಲ.ಪ್ರ. ಅ.ರಾ.ಮಿತ್ರ. 'ಜೋಡಿದಾರ', ಪು-೮೩

ಪುರಂದರೋತ್ಸವಾಚನದಲ್ಲಿ ಗುಂಡನಿಗೆ ಬುದ್ಧಿ ಕಲಿಸಬೇಕೆಂದು 'ಪುರಂದರದಾಸರ ಕೀರ್ತಿನೆ'ಗಳ ಒಂದು ದೊಡ್ಡ ಪುಸ್ತಕವನ್ನು ಉಡುಗೊರೆಯಾಗಿ ಮದುವೆ ಸಂದರ್ಭದಲ್ಲಿ ನೀಡುತ್ತಾರೆ. ನಂತರ ದಿನಗಳಲ್ಲಿ ಲೇಖಕರು ಅವನನ್ನು ಭೇಟಿಯಾದಾಗ ಅವನ ಸಂಭಾಷಣೆ ಎಲ್ಲವೂ ಪುರಂದರ ಕೀರ್ತನೆಗಳಲ್ಲೆ ಸಾಗುತ್ತವೆ. ಕೊನೆಗೆ ಲೇಖಕರಿಗೆ ಬೇಸರ ತರುವಷ್ಟು. ಆತ ಕೀರ್ತನೆಗಳನ್ನು ಹೇಳುವ ಸಂದರ್ಭ ನಗೆ ತರಿಸುತ್ತದೆ.

ಸರಸ-ದಾಂಪತ್ಯ-ಪ್ರಬಂಧದಲ್ಲಿ ಹೆಂಡತಿ ಗಂಡನ ಹಿಂದೆ ನಿಂತು ಇಲ್ಲಿ ನೋಡಿ ಎಂದಾಗ 'ಅಲ್ಲ ಕಣೆ ಹಿಂದುಗಡೆ ಬಂದು ನಿಂತುಕೊಂಡು' ಇಲ್ಲ ನೋಡಿ ಎಂದರೆ ಹೇಗೆ ? ನೀನೆ ಎದುರುಗಡೆ ಬಂದು ಪ್ರತ್ಯಕ್ಷಳಾಗು ನೋಡೋಣ ಎನ್ನುವಂತದ್ದು ಗಂಡನ ಸ್ನೇಹಿತನನ್ನು ಹೆಂಡತಿ. ಹೆಂಡತಿ ಸ್ನೇಹಿತೆಯನ್ನು ಗಂಡ ಅಣಕಿಸಿಕೊಳ್ಳುವ ಸಂದರ್ಭಗಳು ನಗೆ ತರಿಸುತ್ತವೆ. 'ನಾ(ಲಾ)ಯಕ ಪಾತ್ರಧಾರಿ'ಯಲ್ಲಿ ನಟ ಗುಂಡಾಚಾರ್ ಸ್ಮರಣಶಕ್ತಿ ಕಡಿಮೆ ಇದ್ದು ಒಂದು ಪಾತ್ರ ಮಾಡುವಾಗ ಮತ್ತೊಂದು ಪಾತ್ರದ ಸಂಭಾಷಣೆ ಹೇಳುವುದು. ಉದಾ: ಕೌರವ ಊರುಭಂಗ ನಾಟಕದಲ್ಲಿ ದುರ್ಯೋಧನ ತೊಡೆ ಮುರಿದು ಬಿದ್ದಾಗ ಅಶ್ವತ್ಥಾಮ ಉಪಪಾಂಡವರ ತಲೆ ತಂದು ಕೌರವನ ಮುಂದೆ ಇಟ್ಟಾಗ 'ಎಂಥ ಕೆಲಸ ಮಾಡಿಬಿಟ್ಟೆ ನಿರಪರಾಧಿಗಳಾದ ಮಕ್ಕಳನ್ನು ಕೊಂದು ಹಾಕಿದ್ದರಿಂದ ಬಾಲವಧಾ ದೋಷ ಪ್ರಾಪ್ತವಾಯಿತು ಎಂದು ಸರಿಯಾಗಿ ಹೇಳಿ ಅನಂತರ ಇದಕ್ಕಿದ್ದ ಹಾಗೆಯೇ ಎದ್ದು ನಿಂತು ಕೊಂಡು ವಿಕಾರವಾಗಿ ರಾಕ್ಷಸ ನಗೆ ನಕ್ಕು' ಎಲ್ಲಿ ಈ ದುಷ್ಟನ ಬಾಲಕ್ಕೆ ಬೆಂಕಿಯನ್ನು ಹಚ್ಚಿ ಲಂಕೆಯಲ್ಲೆಲ್ಲಾ ಸುಟ್ಟನು' ಎನ್ನುವ ಸಂದರ್ಭ ನಗೆಯನ್ನು ಉಕ್ಕಿಸುತ್ತದೆ. ಅದೇ ರೀತಿ 'ಭಕ್ತಕನಕದಾಸ' ನಾಟಕದಲ್ಲಿ 'ಹಿರಣ್ಯ ಕಶಿಪು' ಆಗಿ ಮಾರ್ಪಾಡಾಗುವುದು ಮುಂತಾದ ಸನ್ನಿವೇಶವನ್ನು ನೋಡಬಹುದು.

ಹಾಗೆ ಅಡ್ಡಗೋಡೆ ಪ್ರಬಂಧದಲ್ಲಿ ಕೆಲಸ ಹೇಳಿದರೆ ಸೋಮಾರಿಯಾಗಿ ಯಜಮಾನನಿಗೆ ಜವಾಬು ನೀಡುತ್ತ ಕೆಲಸದಿಂದ ತಪ್ಪಿಸಿಕೊಳ್ಳಲು ಯತ್ನಿಸುವ ಸನ್ನಿವೇಶವನ್ನು ನೋಡಬಹುದು.

'ದಂಡಂ ದಶಗುಣಂ' ಪ್ರಬಂಧದಲ್ಲಿ ಮಂಗಾಪುರಕ್ಕೆ ವರ್ಗವಾಗಿ ಬಂದ ಹೊಸ ಮೇಷ್ಟ್ರುವಿಗೆ ಸೌಮ್ಯ ಸ್ವಭಾವದ ರಾಮು ತರಗತಿಯಲ್ಲಿ ನಡೆಯುವ ಸನ್ನಿವೇಶ ನಗುತರಿಸುತ್ತದೆ. ಕೊನೆಗೆ ಸ್ವಲ್ಪ ದಿನ ಕಳೆದ ಮೇಲೆ ಫೈಲ್ವಾನ್ ಪಿಳ್ಳೆಪ್ಪನ ಮಗನಿಗೆ ಹೊಡೆದಾಗ ಮುಂದೇನಾಗವುದು ಎಂಬ ಕುತೂಹಲದಲ್ಲಿದ್ದಾಗ ಎಲ್ಲರೂ ರಾಮು ಮೇಷ್ಟ್ರುವಿಗೆ ಊರು ಬಿಡಲು ಸಲಹೆ ಸೂಚಿಸುತ್ತಾರೆ. ಆದರೆ ಫೈಲ್ವಾನ್ ಪಿಳ್ಳಪ್ಪ ಮಗನಿಗೆ ಹೊಡೆದ್ದಕ್ಕೆ 'ನಿಮ್ಮ ಉಪಕಾರ ಮರೆಯೋ ಅಂಗಿಲ್ಲ ಸೋಮಿ' ಎನ್ನುವ ಸಂದರ್ಭವನ್ನು ನೋಡಬಹುದು.

ಉಡಘಾತ ! ಪ್ರಬಂಧದಲ್ಲಿ ಸ್ಕೂಟರ್‌ನಿಂದ ಕಾಲು ಮುರಿದುಕೊಂಡ ವ್ಯಕ್ತಿಯನ್ನು ನೋಡಲು ಬರುವವರೆಲ್ಲರಿಗೂ ಘಟನೆ ವಿವರಿಸಿ ಹೇಳಿ ಬೇಸರವಾಗಿ ಕೊನೆಗೆ ಮಾತನಾಡಬಾರದು ಎಂದು ತೀರ್ಮಾನಕ್ಕೆ ಬಂದಾಗ ಕೊನೆಯಲ್ಲಿ ನೋಡಲು ಬಂದವರು.

'ಪಾಪ.. ಗ್ರಹಚಾರ ಕೈಮುರಿದು ಹೋಗಿದ್ರೆ ಅಷ್ಟು ಚಿಂತೆಯಿಲ್ಲ ಆದರೆ ನಾಲಗೆ ಬಿದ್ದು ಹೋಗಿದೆ ನೋಡಿ ಪಾಪ.. ತುಂಬ ಅನ್ಯಾಯ..' ಎನ್ನುವ ಸನ್ನಿವೇಶಗಳು ನಗೆಯನ್ನು ಉಕ್ಕಿಸುತ್ತವೆ.

ಹೀಗೆ ಇವರ ಹಲವು ಪ್ರಬಂಧಗಳಲ್ಲಿ ನಗುವೆ ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ. ನಗುವಿನ ಜೊತೆಯಲ್ಲಯೇ ಕತೆಯನ್ನು ಬೆಳೆಸಿಕೊಂಡು ಹೋಗುತ್ತಾರೆ. 'ನಗೆ ಕೊಲ್ಲುವಂತೆ ಹಗೆ ಕೊಲ್ಲಲಾರದು ಗೆಳತಿ' ಎಂಬಂತೆ ಹಾಸ್ಯದ ಮೂಲಕ ಎಲ್ಲರನ್ನು ನಗಿಸುತ್ತ ಸಮಾಜ. ವ್ಯಕ್ತಿಯನ್ನು ವಿಡಬಿಸುತ್ತಾ ಸಾಗುವುದು ಇವರ ಪ್ರಬಂಧಗಳ ವೈಶಿಷ್ಟವಾಗಿದೆ ಪ್ರಬಂಧವನ್ನು ಓದುವಾಗ ಕಾಣಿಸಿಕೊಂಡ ನಗು 'ಮಳೆ ನಿಂತ ಮೇಲು ಮರದಿಂದ ಹನಿಗಳು ಬೀಳುವ ಹಾಗೆ ಸುಮ್ಮನೆ ಕುಳತಾಗಲೂ ನಗುವನ್ನು ತರಿಸುತ್ತವೆ. ನಕ್ಕರೆ ಅದೇ ಸ್ವರ್ಗ ಎಂಬ ವಾಕ್ಯದಂತೆ ನಗಿಸುವುದೇ ನಿನ್ನ ಕರ್ಮ ಎನ್ನುವ ಸ್ವಭಾವದವರಾದ ಅ.ರಾ.ಮಿತ್ರರು ಬಹುತೇಕ ಎಲ್ಲ ಪ್ರಬಂಧಗಳಲ್ಲಿ ಹಾಸ್ಯದ ಲೇಪನವನ್ನು ಹೊಂದಿಸುವುದನ್ನು ಕಾಣಬಹುದು.

ಅಧ್ಯಾಯ – 5

ವಿಡಂಬನೆಯ ಮೂಲಕ ಮನುಷತ್ವ ಮತ್ತು ಬದುಕಿನ ಮೌಲ್ಯಗಳ ಹುಡುಕಾಟ

ಜೀವನದಲ್ಲಿ ನಾವು ತಪ್ಪು ಮಾಡಿದಾಗ ಹಲವು ಮಂದಿ ಅದನ್ನು ಗುರುತಿಸಿ ನ್ಯಾಯಯುತವಾಗಿ ಧರ್ಮದಿಂದ ಸರಿಯಾಗಿ ಬದುಕು ಎಂದು ಸಲಹೆ ನೀಡುತ್ತಾರೆ. ಆಗ ಧರ್ಮ ಯಾವುದು ಅಧರ್ಮ ಯಾವುದು ? ಯಾವುದು ಸತ್ಯ ? ಯಾವುದು ಸುಳ್ಳು ? ಯಾವುದು ತಪ್ಪು ಯಾವುದು ಸರಿ ಎಂಬ ಪ್ರಶ್ನೆಗಳು ಕಾಡತೊಡಗುತ್ತವೆ. ಇಂಥಹ ನ್ಯಾಯ ಅನ್ಯಾಯ ಸರಿ ತಪ್ಪುಗಳನ್ನು ನಿರ್ಧರಿಸುವಂತಹವುಗಳೆ ಮೌಲ್ಯಗಳು. ಈ ಮೌಲ್ಯಗಳನ್ನು ತಿಳಿದುಕೊಂಡರೆ ನಮಗೆ ಸತ್ಯದ ಅರಿವಾಗುತ್ತದೆ. ಈ ಅರಿವನ್ನು ಮಾಡಿಸುವಂತದ್ದು ನಮ್ಮ ಸುತ್ತಮುತ್ತಲಿನ ಪರಿಸರ ಮತ್ತು ಸಮಾಜ. ನಮ್ಮ ಸಮಾಜದಲ್ಲಿ ಒಪ್ಪಿತವಾಗಿರುವ ಅಂಶಗಳ ಮೌಲ್ಯಗಳು. ಮೌಲ್ಯ ಎಂದರೇನು ಎಂಬುದನ್ನು ಒಂದು ವಾಕ್ಯದಲ್ಲಿ ಹಿಡಿದಿಡುವುದು ಕಷ್ಟ. ಮೌಲ್ಯ ಎಂಬುದರ ಸಾಮಾನ್ಯ ಅರ್ಥ ಬೆಲೆ (value) ಎಂದು ಕರೆಯುತ್ತೇವೆ ಒಂದು ವಸ್ತುವಿನ ಬೆಲೆಯನ್ನು ಹಣದಿಂದ ಅಳೆಯುತ್ತೇವೆ. ಆದರೆ ವ್ಯಕ್ತಿಯ ಮೌಲ್ಯವನ್ನು ಬದುಕಿನ ಮೌಲ್ಯವನ್ನು ಹಣದಿಂದ ಅಳೆಯಲು ಸಾಧ್ಯವಿಲ್ಲ. ಸಮಾಜ ಒಪ್ಪಿತವಾಗಿರುವ ಕೆಲವು ಆದರ್ಶ ಗುಣಗಳಿಂದ ವ್ಯಕ್ತಿಯ ಬದುಕಿನ ಮೌಲ್ಯವನ್ನು ಅಳೆಯಲಾಗುತ್ತದೆ. ಅಂತಹ ಮೌಲ್ಯಗಳನ್ನು ವ್ಯಕ್ತಿ ತನ್ನ ಜೀವನದಲ್ಲಿ ಅಳವಡಿಸಿಕೊಂಡು ಬದುಕಿದಾಗ ಉತ್ತಮ ಜೀವನ ನಡೆಸಲು ಸಾಧ್ಯ. ಮೌಲ್ಯ ಎಂದರೇನು ಎಂಬುದರ ಬಗ್ಗೆ ಕೆಲವು ತತ್ವಜ್ಞಾನಿಗಳು ತಮ್ಮದೇ ವಾಕ್ಯ ನೀಡಿದ್ದಾರೆ.

'ವ್ಯಕ್ತಿ ಮತ್ತು ಇತರರು ಯಾವುದನ್ನು ಬಯಸುತ್ತಾರೋ ಅದು ಮೌಲ್ಯ, ಆದರೆ ಬಯಸಿದುದೆಲ್ಲವೂ ಮೌಲ್ಯವಾಗಬೇಕಾಗಿಲ್ಲ'[೧]

– ಲಿಂಡ್ಸ್

'ಯಾವುದೇ ಒಂದು ಸಮಾಜ ಯಾವುದಕ್ಕೆ ಹೆಚ್ಚು ಮಹತ್ವ ಕೊಡುತ್ತದೋ ಯಾವುದನ್ನು ಒಂದು ಪೀಳಿಗೆಯಿಂದ ಇನ್ನೊಂದು ಪೀಳಿಗೆಗೆ ವರ್ಗಾಯಿಸಲ್ಪಡುವಷ್ಟು ಪ್ರಾಮುಖ್ಯವಾಗಿದೆಯೋ ಅದೇ ಮೌಲ್ಯ'.[೨]

– ಹ್ಯಾರಿ ಸ್ಕೊಫೀಲ್ಡ್

'ಯಾವುದಾದರೂ ಒಂದು ವಸ್ತು ವಿಷಯವನ್ನು ಇನ್ನೊಂದರೊಡನೆ ಹೋಲಿಸಿ ಅದರ ಬೆಲೆ ನಿರ್ಣಯಿಸುವ ಮೂಲಕ ಅವುಗಳನ್ನು ಉತ್ತಮವಾದುದು ಯಾವುದೆಂದು ಪರಿಗಣಿಸುವ ಕ್ರಿಯೆ ಮೌಲ್ಯ'.[೩]

– ಜಾನ್ ಡ್ಯೂಯ್

ಇನ್ನೊಬ್ಬರ ಬಗ್ಗೆ ಒಳ್ಳೆಯ ರೀತಿಯಲ್ಲಿ ವರ್ತಿಸಲು ಯಾವುದು ಸಹಾಯ ಮಾಡುತ್ತದೋ ಅದು ನೈತಿಕ ಮೌಲ್ಯ.

೧-೨-೩. ಲೇ: ವೈ.ಎಸ್.ಶ್ರೀಧರ್, 'ಶಿಕ್ಷಣದ ತಾತ್ವಿಕ ನೆಲೆ', ಪು-೩೪೦

ಈ ಮೇಲಿನ ವಾಕ್ಯಗಳನ್ನು ನೋಡಿದಾಗ ಮೌಲ್ಯ ಎಂಬುದು ವ್ಯಕ್ತಿಯ ಗುಣ. ನಡತೆಗಳಿಂದ ನಿರ್ಧರಿತವಾಗುತ್ತದೆ ಎಂಬುದನ್ನು ತಿಳಿಯಬಹುದು. ಸಮಾಜಕ್ಕೆ ತನ್ನದೇ ಆದ ಮಾನದಂಡಗಳಿರುತ್ತವೆ. ಅಂತವುಗಳನ್ನು ಮೌಲ್ಯ ಎಂದು ಗುರುತಿಸಬಹುದು. ನಮ್ಮ ಸಮಾಜದಲ್ಲಿ ಪ್ರತಿಪಾದಿತವಾಗಿರುವ ಮೌಲ್ಯಗಳು. ಒಳ್ಳೆ ನಡತೆ. ತಾಳ್ಮೆ. ಹೊಂದಾಣಿಕೆ. ಸಹಬಾಳ್ವೆ. ಗುರುಹಿರಿಯರನ್ನು. ತಂದೆ-ತಾಯಿಯನ್ನು ಗೌರವಿಸುವುದು. ಸ್ತ್ರೀಯರನ್ನು ಪೂಜನೀಯ ಭಾವನೆಯಿಂದ ನೋಡುವುದು. ಸುಳ್ಳು. ಕಳ್ಳತನ. ದರೋಡೆ. ಅತ್ಯಾಚಾರ ಮಾಡದಿರುವುದು. ಭಾರತೀಯ ಧರ್ಮ. ಭೂಮಿ. ರಾಷ್ಟ್ರವನ್ನು ಗೌರವಿಸುವುದು. ಇವುಗಳನ್ನು ಕಾಣಬಹುದು ಹಾಗೆ ಮನುಷ್ಯನಲ್ಲಿರುವ ಒಳ್ಳೆತನ. ತಾಳ್ಮೆ. ಅನುಕಂಪ. ಹೊಂದಾಣಿಕೆ. ಶಾಂತಸ್ವಭಾವ. ಸಹೃದಯತೆ. ದಯೆ. ಮನುಷತ್ವಗಳನ್ನು ಮಾನವೀಯ ಮೌಲ್ಯಗಳೆಂದು ಗುರುತಿಸಲಾಗಿದೆ. ಇಂತಹ ಅಂಶಗಳನ್ನು ಒಳಗೊಂಡಿದ್ದಾಗ ಮನುಷ್ಯ ಉತ್ತಮ ಜೀವನ ನಡೆಸಲು ಸಾಧ್ಯ. ಇವುಗಳನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡು ಮನುಷ್ಯ ಜೀವನ ನಡೆಸಬೇಕು. ಆದರೆ ಇಂದು ಭೋಗ ಜೀವನಕ್ಕೆ ಜೋತು ಬಿದ್ದಿರುವ ಮನುಷ್ಯರು ಸಮಾಜ ಒಪ್ಪಿತ ಮೌಲ್ಯಗಳನ್ನು ಬುಡಮೇಲು ಮಾಡುವಂತೆ ಮುಖವಾಡಧರಿಸಿಕೊಂಡು ಜೀವಿಸುತ್ತಿದ್ದಾರೆ ಅಂಥವರು ಇನ್ನಾದರು ತಮ್ಮ ಜೀವನದಲ್ಲಿ ಬದಲಾವಣೆ ತಂದುಕೊಂಡು ಬದುಕಬೇಕು. ಅವಶ್ಯಕತೆ ಇದೆ ಎಂಬುದನ್ನು ಅ.ರಾ.ಮಿತ್ರ ಅವರು ತಮ್ಮ ಪ್ರಬಂಧಗಳಲ್ಲಿ ಸೂಚಿಸಿದ್ದಾರೆ. 'ಕನ್ನಡ ಸಂಸ್ಕೃತಿಯೊಡನೆ ಗಾಢ ಸಂಬಂಧವಿರುವ ಮಿತ್ರರು ನಮ್ಮ ಸಾಹಿತ್ಯ ಪರಂಪರೆಯನ್ನು ಪ್ರೀತಿಯಿಂದ ಅಭ್ಯಾಸ ಮಾಡಿದವರು. ಆ ಬಗ್ಗೆ ಉತ್ಸಾಹದಿಂದ ಮಾತನಾಡಬಲ್ಲವರು. ಛಂದಸ್ಸು. ವ್ಯಾಕರಣ. ಮೀಮಾಂಸೆಗಳನ್ನು ಚೆನ್ನಾಗಿ ಅರಿತವರು ಸಮುದಾಯದಲ್ಲಿ ಸದಭಿರುಚಿಯನ್ನು ಉಳಿಸಿ ಬೆಳೆಸಬಲ್ಲಂಥಹ ಶಕ್ತರು ಆಗಿದ್ದಾರೆ'[೧] ಎಂದು ನರಹಳ್ಳಿ ಬಾಲಸುಬ್ರಹ್ಮಣ್ಯರವರು ಮಿತ್ರರವರ ಬಗ್ಗೆ ಹೇಳಿರುವ ಮಾತು ಔಚಿತ್ಯಪೂರ್ಣವಾಗಿದೆ. ಇಂತಹ ಮಿತ್ರರು ಸಮಾಜದಲ್ಲಿ ಮನುಷ್ಯ ಹೇಗೆ ಬದುಕಬೇಕು. ಎಂತಹ ವ್ಯಕ್ತಿತ್ವವನ್ನು ಅಳವಡಿಸಿಕೊಳ್ಳಬೇಕೆಂಬುದನ್ನು ತಮ್ಮ ಪ್ರಬಂಧಗಳಲ್ಲಿ ವಿಡಂಬಿಸಿ ಮೌಲ್ಯಗಳ ಪ್ರತಿಪಾದನೆ ಮಾಡಿದ್ದಾರೆ.

ಇವರ ಪ್ರಬಂಧಗಳಲ್ಲಿ ವಿಡಂಬನೆ ಮುಖ್ಯವಾಗಿ ಕಾಣಿಸಿಕೊಳ್ಳುತ್ತದೆ ವಿಡಂಬನೆ ಮೂಲಕವೇ ವ್ಯಕ್ತಿಯನ್ನು, ಸಮಾಜವನ್ನು ವಿಮರ್ಶೆಗೆ ಒಳಪಡಿಸುತ್ತಾರೆ. ತಿಳಿಹಾಸ್ಯದ ಮೂಲಕವೆ ಎಲ್ಲವನ್ನು ವಿಡಂಬಿಸುತ್ತ ಸಾಗುವುದನ್ನು ಇವರ ಪ್ರಬಂಧದಲ್ಲಿ ಕಾಣಿಸುತ್ತದೆ. ಮನುಷ್ಯ ತನ್ನ ಜೀವನದಲ್ಲಿ ಸಮಾಜಕ್ಕೆ ಹೊಂದಿಕೊಂಡು ಬಾಳುತ್ತಾ ಎಲ್ಲರನ್ನು ಪ್ರೀತಿಸುತ್ತಾ 'ಸರ್ವರಿಗೂ ಸಮಪಾಲೂ ಸರ್ವರಿಗೂ ಸಮಬಾಳು' ಎಂಬ ನಾಣ್ನುಡಿಯಂತೆ ಬದುಕಬೇಕು. ಆಗ ಮಾತ್ರ ಅವನ ಜೀವನ ನೆಮ್ಮದಿಯಿಂದ ಕೂಡಿರುತ್ತದೆ. ಸುಖ. ಶಾಂತಿ. ನೆಮ್ಮದಿಯನ್ನು ಹುಡುಕಿಕೊಂಡು ಹೋಗುವುದಲ್ಲ. ಅದನ್ನು ಆತ ತನ್ನ ಜೀವನದಲ್ಲಿ ಕಂಡುಕೊಳ್ಳಬೇಕು. ಹಾಗೆ ಕಂಡುಕೊಳ್ಳಬೇಕಾದರೆ ಅವನಲ್ಲಿ ಅನುಕಂಪದಿಂದ ಕೂಡಿದ ಹೃದಯ. ತಾಳ್ಮೆ. ಸಹನೆ. ಒಳ್ಳೆಯ

೧. ಅ.ರಾ. ಮಿತ್ರ – ಪು: ಒಳನೋಟಗಳು, ಮುನ್ನುಡಿ – ಪು-೫

ನಡತೆ, ಎಲ್ಲರೂ ತನ್ನಂತೆ ಎಂದು ಕಾಣುವ ಉದಾರ ಮನಸ್ಸಿರಬೇಕು ಇಂತಹ ಅಂಶಗಳನ್ನು ಮನುಷತ್ವ ಎಂದು ಕರೆಯುತ್ತೇವೆ. ಇಂತಹ ಗುಣಗಳನ್ನು ಮರೆತು ಮನುಷ್ಯ ಸ್ವಾರ್ಥ ಬುದ್ಧಿಯಿಂದ. ಎಲ್ಲವೂ ನನಗೆ ಬೇಕು ಎಂಬ ಲೋಲುಪತೆಯಿಂದ ಜೀವನವನ್ನು ಸಿಡಿಸುತ್ತಿದ್ದಾನೆ. ಅಂಥಹ ಗುಣಗಳುಳ್ಳವರಿಂದ ಸಮಾಜದ ಅವನತಿಯ ಹಾದಿಯಕಡೆಗೆ ಸಾಗುತ್ತದೆ. ಅದಕ್ಕೆ ಕಾರಣವಾಗುವ ವ್ಯಕ್ತಿಯ ಗುಣಗಳು ಹೇಗಿರುತ್ತವೆ? ಅಂಥವುಗಳನ್ನು ಹೇಗೆ ಬದಲಾಯಿಸಿಕೊಳ್ಳಬೇಕು ಎಂಬುದನ್ನು ತಮ್ಮ ಪ್ರಬಂಧದಲ್ಲಿ ಕಟ್ಟಿಕೊಡುತ್ತಾರೆ.

ತಾನು ಬದುಕುತ್ತಿರುವ ನೆಲವನ್ನು ಭಾಷೆಯನ್ನು ಜನರನ್ನು ಪ್ರೀತಿಸುವುದನ್ನು ಮನುಷ್ಯ ಕಲಿಯಬೇಕು. ಈ ಪ್ರೀತಿ ತೋರಿಕೆಯಾಗಿರಬಾರದು ಆಗಿದ್ದಾಗ ನಾವು ಹೃದಯ ಶೂನ್ಯರಾಗಿಬಿಡುತ್ತವೆ. ಇಂದು ಕನ್ನಡಿಗರೂ ಆ ಸ್ಥಿತಿಗೆ ಬಂದುಬಿಟ್ಟಿದ್ದಾರೆ. ಸರಿಯಾಗಿ ಕನ್ನಡ ಮಾತನಾಡದೆ, ಬರೆಯಲಾಗದೆ, ಕಾಗುಣಿತಗಳನ್ನು ತಿಳಿಯದೆ ಬಳಸುತ್ತಿದ್ದೇವೆ. ಇಂತವರು ಮೊದಲು ಕನ್ನಡವನ್ನು ಸರಿಯಾಗಿ ಕಲಿಯುವ ಅವಶ್ಯಕತೆ ಇದೆ. 'ಸಿರಿಗನ್ನಡಂ ಗೆಲ್ಗೆ, ಸಿರಿಗನ್ನಡಂ ಬಾಳ್ಗೆ' ಎಂದು ಘೋಷಣೆ ಕೂಗಿ, ಘೋಷಣೆಯನ್ನು ಬರೆಸಿ ಮೆರೆದಾಡುತ್ತಿದ್ದಾರೆ. ಕಾವೇರಿ ಗೋದಾವರಿ, ಕೃಷ್ಣೆಯನ್ನು ಬಿಟ್ಟು ಕೊಟ್ಟ ಬೆಂಗಳೂರು ಬೆಳಗಾಂಗಳನ್ನು ಕಾಸರಗೂಡು ಮಾಡುವ ಪ್ರಯತ್ನದಲ್ಲಿದ್ದಾರೆ ಎನ್ನುವಾಗ ಕನ್ನಡ ಭಾಷೆ, ನೆಲೆ, ಜಲದ ಬಗ್ಗೆ ಅಭಿಮಾನವಿಲ್ಲದವರನ್ನು ವಿಡಂಬಿಸುತ್ತಾ, ಇಂತಹ ಅಭಿಮಾನ ಶೂನ್ಯರನ್ನು ಎಚ್ಚರಿಸುತ್ತ ಬರೆಯುವ ಕಾರ್ಯದಲ್ಲಿ ತೊಡಗಿದ್ದೇನೆ ಎಂದು ಒಬ್ಬ ಸಾಹಿತಿಗೆ ಇರಬೇಕಾದ ವಿಶಾಲ ದೃಷ್ಟಿಕೋನವನ್ನು 'ನಾನೇಕೆ ಕೊರೆಯುತ್ತೇನೆ' ಎಂಬ ಪ್ರಬಂಧದಲ್ಲಿ ತಿಳಿಸಿದ್ದಾರೆ.

ಆಧುನಿಕತೆಯಿಂದ ಇಂದು ಕುಟುಂಬಗಳು ಚಿಕ್ಕದಾಗುತ್ತಿದ್ದು ಮನೆಗೆ ಬಂದವರನ್ನು ಸತ್ಕರಿಸಲು ಹಿಂದು ಮುಂದು ನೋಡುವ ಆರ್ಥಿಕವಾಗಿ ಲೆಕ್ಕಾಚಾರ ಹಾಕುವ ಮನುಷ್ಯ ಸ್ವಭಾವವನ್ನು 'ತಿಥಿಯರಿಯದ ಅತಿಥಿ' ಪ್ರಬಂಧದಲ್ಲಿ ತಿಳಿಸುತ್ತಾರೆ. 'ಅತಿಥಿದೇವೋಭವ' ಎಂದು ನಮ್ಮ ಹಿರಿಯರು ಹೇಳಿದ್ದಾರೆ. ಅತಿಥಿ ಬಂದಾಗ ಅವರಿಂದ ತೊಂದರೆ ಎಂದು ಬಗೆದು ಅವರನ್ನು ಬಾಗಿಲು ಬಡಿವ ಜನ ಎಂದು ಹೇಳಿ 'ತಾನು ಸಹ ಮುಂದಿನ ತಿಂಗಳು ಬರೋಡಾಕ್ಕೆ ಹೋಗೋಣವೇ ? ನಮ್ಮ ಮಾಧು ಮನೇಲೇ ಉಳಿದರಾಯ್ತು'12 ಎಂದು ಹೇಳುವಾಗ ಮನುಷ್ಯನ ಸ್ವಾರ್ಥ ಗುಣಗಳನ್ನು ವಿಡಂಬಿಸುತ್ತಾರೆ. ಇಂತಹ ಅತಿಥಿಗಳು ತಮ್ಮ ಮನೆಗೆ ಬೇರೆಯವರು ಬಂದಹಾಗೆ ನಾವು ಬೇರೆಯವರ ಮನೆಗೆ ಹೋಗಬೇಕಾಗುತ್ತದೆ ಎನ್ನುವುದನ್ನು ತಿಳಿದು ಸಂಬಂಧಗಳನ್ನು ಉಳಿಸಿಕೊಳ್ಳುವ ಅಗತ್ಯತೆಯನ್ನು ಸೂಚಿಸಿದ್ದಾರೆ.

ಜೀವನದಲ್ಲಿ ಹೇಗಾದರೂ ಬದುಕಿದರಾಯಿತು ಎಂಬ ಮನೋಧರ್ಮದವರು ಜೀವನ ಧರ್ಮವನ್ನು ಅರಿಯುವ ಅಗತ್ಯವಿದೆ. ಇದ್ದುದರಲ್ಲಿ ಸುಖ ಕಂಡುಕೊಳ್ಳುವ ಗುಣ ಬೆಳೆಸಿಕೊಳ್ಳಬೇಕಾಗಿದೆ. 'ಹಾಸಿಗೆ ಇದ್ದಷ್ಟು ಕಾಲು ಚಾಚು' ಎಂಬ ಗಾದೆಯನ್ನು ಅರಿತು ಜೀವನ ಸಾಗಿಸಬೇಕು ಆದರೆ ಇದನ್ನು ಮರೆತು ಸಿಕ್ಕಸಿಕ್ಕವರ ಹತ್ತಿರ ಸಾಲ ಮಾಡುತ್ತಾ ಮುಂದೆ

ಅದರಿಂದ ಆಗಬಹುದಾದ ಅನಾಹುತವನ್ನು ಅರಿಯದೆ ಸಾಲದ ಸುಳಿಯಲ್ಲಿ ಸಿಲುಕುವ ಜನ ಸಾಲಿಗನು ಬಂದು ಕೇಳಿದಾಗ ಕಿಬ್ಬದಿಯ ಕೀಲುಮುರಿದಂತೆ ಆಗುತ್ತಾನೆ. ಸಾಲ ಮಾಡುವುದು ತಪ್ಪು ಎಂದು ಹೇಳದೆ ಅಗತ್ಯತೆ ಅರಿವನ್ನು ಅರಿತು ಸಾಲ ಮಾಡಿ. ಅನಿವಾರ್ಯ ಕಾರಣಗಳಿಗೆ ಮಾಡಬೇಕಾದ ಸಂದರ್ಭದಲ್ಲಿ ಸಾಲ ಬೇಡಿದರೆ ತಪ್ಪಲ್ಲ ಕ್ಷಣಿತ ಸುಖಕ್ಕಾಗಿ ಸಾಲ ಮಾಡಿ ಸಾಲ ನೀಡಿದವನ ಗುಲಾಮನಾಗಬಾರದು ಎಂದು ಎಚ್ಚರಿಕೆ ನೀಡುತ್ತಾರೆ. ಏಕೆಂದರೆ ಸಾಲಿಗನು ಎಲ್ಲರ ಮುಂದೆ ನಮ್ಮ ಮಾನ ಮರ್ಯಾದೆ ಕಳೆದಾಗ ಸಮಾಜದಲ್ಲಿ ನಮ್ಮ ಸ್ಥಾನಮಾನ ಕುಸಿಯುತ್ತದೆ. ಆಗ ಆಡಿಕೊಳ್ಳುವವರ ಬಾಯಿಗೆ ಆಹಾರವಾಗಬೇಕಾಗುತ್ತದೆ. ಇದರಿಂದ ತಪ್ಪಿಸಿಕೊಳ್ಳಬೇಕಾದರೆ ನಮ್ಮ ಇತಿಮಿತಿಗಳನ್ನು ಅರಿತು ಬಾಳಬೇಕಾಗಿದೆ ಆ ಮೂಲಕ ಗೌರವಯುತ ಜೀವನ ನಡೆಸಬಹುದಾಗಿದೆ ಎಂದು ಗೌರವಯುತ ಜೀವನದ ಮಾರ್ಗವನ್ನು ಕಟ್ಟಿಕೊಡುತ್ತಾರೆ.

ಸೋಮಾರಿತನ ಎಂಬುದು ಮನುಷ್ಯನಿಗೆ ಅಂಟಿಕೊಂಡಿರುವ ಒಂದು ಜಾಡ್ಯ. ಈ ಸ್ವಭಾವದವರು ಕ್ರಿಯಾಶೀಲರಲ್ಲದವರು ಕಾಲದ ಮಹತ್ವವನ್ನು ಅರಿಯವರು ಕಾಲ ಕಳೆಯುತ್ತಾ ಹೇಗೋ ಬದುಕಿದರಾಯಿತು ಎಂದು ಬದುಕುವವರು ಇಂತವರು ಕಾಲದ ಮಹತ್ವವನ್ನು ತಿಳಿಯಬೇಕು ಏಕೆಂದರೆ 'ಕಳೆದು ಹೋದ ಕಾಲ ಮತ್ತೆ ಬರುವುದಿಲ್ಲ'. ಈ ಕಾಲದ ಮಹಿಮೆಯನ್ನು ಇಂದಿನ ವಿದ್ಯಾರ್ಥಿಗಳು, ಸಮಾಜದ ಜನ, ಅರಿಯುವ ಅಗತ್ಯವಿದೆ. ಬೆಳಗ್ಗೆ ಎದ್ದು ಓದಲಾಗದೆ ಕಾಲವನ್ನು ದೋಷಿಸುವ ವಿದ್ಯಾರ್ಥಿಗಳು ನಾಳೆ ಓದಿದರಾಯಿತು ಎಂದು ಮುಂದೂಡುತ್ತಾ ಸಾಗುತ್ತಾರೆ. ಹೀಗೆ ಕಾಲವನ್ನು ಮುಂದೂಡುವ ಸ್ವಭಾವದವರನ್ನು ರೀ ಗಂಟೆ ಎಷ್ಟು, ಏಳಯ್ಯ ಬೆಳಗಾಯಿತು ಪ್ರಬಂಧಗಳಲ್ಲಿ ನೋಡಬಹುದು. 'ಕಾಲ ಕೇಳುವಾಗ ಅಂಥ ಕುತೂಹಲವಿಲ್ಲ, ಕೇಳಿದ ಮೇಲೆ ಅಂಥ ಜಾಗೃತಿಯಿಲ್ಲ'[೧] ದ ಜನರು ಯಾವ ಕಾರ್ಯದನೆಯಲ್ಲೂ ತೊಡಗದೆ ನಾವು ಯಾತಕ್ಕಾಗಿ ಬದುಕುತ್ತಿದ್ದೇವೆ ಎಂಬುದರ ಅರಿವಿಲ್ಲದೆ ಕಾಲವಂಚನೆ ಮಾಡುತ್ತಿರುತ್ತಾರೆ. ಸೋಮಾರಿತನ ಮನುಷ್ಯನನ್ನು ಕಾರ್ಯವಿಮುಖನನ್ನಾಗಿ ಮಾಡುತ್ತದೆ. ಮತ್ತೆ ಕೆಲವರು ಎಲ್ಲಾ ಕೆಲಸವನ್ನು ದೇವರ ಮೇಲ ಹಾಕಿ ಕೈ ತೊಳೆದುಕೊಳ್ಳಲು ನೋಡುತ್ತಾರೆ. ಆದರೆ ಅವಕಾಶ ಕೈ ಚೆಲ್ಲಿ ಹೋದಾಗ ದುಃಖ ಪಡಬೇಕಾಗುತ್ತದೆ ಎಂಬುದನ್ನು 'ಪವಡಿಸು ಪರಮಾತ್ಮ' ಪ್ರಬಂಧದಲ್ಲಿ ಹೇಳುತ್ತರೆ. 'ಕಾಯಕವೆ ಕೈಲಾಸ' ಎಂಬುದನ್ನು ಮರೆತು ದೇವರೆ ಬಂದು ಕೆಲಸ ಮಾಡಲಿ ಎಂದು ಬಯಸುವವರು ಕಾಯಕದ ಮಹತ್ವ ಅರಿಯುವ ಅಗತ್ಯವಿದೆ. ಕಾಯಕದಲ್ಲಿ ಶಿವನನ್ನು ಕಾಣಬೇಕು ಎಂದು ವಚನಕಾರರು ತಿಳಿಸಿದರು. ಆ ಸ್ವಭಾವವನ್ನು ಇಂದು ನಾವುಗಳು ತಿಳಿಯುವ ಅಗತ್ಯವಿದೆ ಎಂಬುದನ್ನು ತಿಳಿಸಿದ್ದಾರೆ ಈ ಮೂಲಕ ಕಾಯಕನಿಷ್ಠೆ ಮೆರೆಯಬೇಕೆ ಹೊರತು 'ಮರೆಯ'ಬಾರದು ಎನ್ನುತ್ತಾರೆ.

ವ್ಯಕ್ತಿಯ ಸಾಧನೆಯಿಂದ ಅವರ ಹೆಸರು ಶಾಶ್ವತವಾಗಿ ಉಳಿಯುತ್ತದೆ. ಆದರೆ ಇಂದಿನ ಸಮಾಜದ ಕೆಲವು ವ್ಯಕ್ತಿಗಳು ನಮ್ಮ ಹೆಸರು ಶಾಶ್ವತವಾಗಿ ಉಳಿಯಲಿ ಎಂದು ನಾನು, ನನ್ನಿಂದ, ನನ್ನದು ಎಂಬ ಮನೋಭಾವ ಬೆಳೆಸಿಕೊಂಡು ತಾ ಮಾತ್ರ ಮುಂದೆ ಬರಬೇಕೆಂದು

೧-೨. ಸಂ. ತಾ.ರಾ. ನಾಗರಾಜ್, ಸ.ಲ.ಪ್ರ. ಅ.ರಾ.ಮಿತ್ರ. ಪ್ರ: ರೀ ಗಂಟೆ ಎಷ್ಟು ?, ಪು-೧೪೮

ಬಯಸುತ್ತಿದ್ದಾನೆ. ಇತರರನ್ನು ಲೆಕ್ಕಿಸದೆ ತಾ ಮಾತ್ರ ಮುಂದೆ ಬರಬೇಕೆ ಎನ್ನುವುದು ಎಷ್ಟು ಸರಿ? ಹೆಸರು ನಮ್ಮನ್ನು ಗುರುತಿಸುವ ಒಂದು ಸಾಧನವಷ್ಟು ಅದು ಶಾಶ್ವತವಾಗಿರಲಿ ಎಂದು ಬಯಸುವುದು ತಪ್ಪು ಹಾಗೆ ಶಾಶ್ವತ ಮಾಡಲೊರಟಾಗ ಇನ್ನೊಬರ ಸಮಾಧಿಯ ಮೇಲೆ ಮನೆ ಕಟ್ಟಿ ಜೀವನ ನಡೆಸಲು ಹೊರಟಂತಾಗುತ್ತದೆ. ಕೆಲವರು ಜೀವನದಲ್ಲಿ ಬೇರೆಯವರ ಹೆಸರುಗಳನ್ನು ಬಳಸಿಕೊಂಡು ತಮ್ಮ ಸ್ವಾರ್ಥ ಸಾಧಿಸಿಕೊಳ್ಳಲು ಮತ್ತೊಬ್ಬರಿಗೆ 'ನಾಮ ಹಾಕುತ್ತ ಬದುಕುತಿರುತ್ತಾರೆ. ಗಣೇಶನ ಉತ್ಸವಕ್ಕೆ, ಕನ್ನಡ ರಾಜ್ಯೋತ್ಸವಕ್ಕೆ, ದೇವಾಲಯ ನಿರ್ಮಾಣಕ್ಕೆ ಹೀಗೆ ಹತ್ತಾರು ಕೆಲಸಗಳಿಗೆ ಹೆಸರನ್ನು ಮುಖ್ಯವಾಗಿಟ್ಟುಕೊಂಡೆ ಹಣಗಳಿಸುವವರು ಹುಟ್ಟಿಕೊಂಡಿದ್ದಾರೆ. ಇಂತಹ ಮುಖವಾಡ ಪುರುಷರು ವೇಷ ಕಳಚುವ ಅವಶ್ಯಕತೆ ಇದೆ. ಇಂತವರನ್ನು 'ಸಂಸ್ಥೆಯ ಅಥವಾ ನಾಯಕ ಮೂರ್ತಿಯನ್ನು ಹೊತ್ತಿಕೊಂಡೆ ಈ ವೇಷಧಾರಿಗಳು ಮೆರೆಯುತ್ತಾರೆ'[೧] 'ನಾಮದ ಬಲವೊಂದಿದ್ದರೆ ಸಾಕೊ' ಎಂಬ ಪ್ರಬಂಧದಲ್ಲಿ ನಾಮನ ಮುಖವಾಡವನ್ನು ಹಾಕಿಕೊಂಡವರನ್ನು ಟೀಕಿಸುತ್ತಾ ಮನುಷ್ಯ ಈ ವ್ಯಾಪಾರ ಬುದ್ಧಿಯನ್ನು ಬಿಡಬೇಕು ಎಂದು ಹೇಳಿದ್ದಾರೆ.

ಸಾಮಾಜಿಕ ಕಳಕಳಿಯನ್ನು ಮನುಷ್ಯ ಬೆಳೆಸಿಕೊಳ್ಳಬೇಕು ತಮ್ಮ ಸುತ್ತಮುತ್ತಲಿನ ಪರಿಸರವನ್ನು ಕಾಪಾಡುವುದರೊಂದಿಗೆ ಎಲ್ಲವನ್ನು ಉಳಿಸಿ ಬೆಳೆಸಿ ಮುಂದಿನ ಪೀಳಿಗೆಗೆ ಉಳಿಸುವ ಅಗತ್ಯವಿದೆ. ತನ್ನ ಸ್ವಾರ್ಥದಿಂದ ಇಂದು ಅರಣ್ಯವೆಲ್ಲ ನಾಶವಾಗುತ್ತದೆ. ಮನೆಕಟ್ಟಲು ಅಣೆಕಟ್ಟುಕಟ್ಟಲು ಕಾರ್ಖಾನೆ ನಿರ್ಮಿಸಲು ನಾನಾ ಕಾರಣಗಳಿಂದ ಕಾಡನ್ನು ಸರ್ವನಾಶ ಮಾಡುತ್ತಿದ್ದಾನೆ. ಈ ರೀತಿ ಅರಣ್ಯನಾಶವಾಗುತ್ತಾ ನಡೆದರೆ ಮುಂದೊಂದು ದಿನ ತಾನು ಉಸಿರಾಡುವುದೇ ಕಷ್ಟವಾಗುತ್ತದೆ ಎಂಬ ಸತ್ಯವನ್ನು ತಿಳಿದು ಮರಗಳನ್ನು ಉಳಿಸಿ ಬದುಕಬೇಕಾದ ಅಗತ್ಯವಿದೆ. ಸ್ವಾರ್ಥ ಜೀವನಕ್ಕಿಂತ ಸಹಜೀವನ ಮುಖ್ಯ. ಅದಕ್ಕಾಗಿ ಮರಗಳನ್ನು ಉಳಿಸಬೇಕು ಮರಗಳನ್ನು ಪ್ರೀತಿಯ ಅಪ್ಪುಗೆಯಿಂದ ಉಳಿಸಬೇಕಾದ ಅಗತ್ಯತೆಯನ್ನು ಸೂಚಿಸುತ್ತ ಸಮಾಜಕ್ಕೆ ಮುಂದಾಗಬಹುದಾದ ದುರಂತದಿಂದ ಪಾರಾಗಲು ಈಗಿನಿಂದಲೇ ಕಂಕಣಬದ್ಧರಾಗಬೇಕಾದ ಅನಿವಾರ್ಯತೆಯನ್ನು 'ಅಪ್ಪಿಕೊ' ಪ್ರಬಂಧದಲ್ಲಿ ಸೂಚಿಸುತ್ತಾರೆ.

ಮನುಷ್ಯನನ್ನು 'ಹೊಟ್ಟೆಕಿಚ್ಚು' ಹಾಳು ಮಾಡುತ್ತದೆ. ತನಗಿಂತಲೂ ಯಾರಾದರೂ ಮೇಲೆ ಬಂದರೆ ಅದನ್ನು ಸಹಿಸದ ವ್ಯಕ್ತಿಗಳು ಮಾತ್ಸರ್ಯದಿಂದ ಬೇರೆಯವರ ಮೇಲೆ ಹಗೆ ಸಾಧಿಸುತ್ತ ತಮ್ಮ ಮನಸ್ಸನ್ನು ಹಾಳು ಮಾಡಿ ಕೊಳ್ಳುತ್ತಿದ್ದಾರೆ. ಈ ಮಾತ್ಸರ್ಯದಿಂದ ದುರ್ಯೋಧನ ರಾವಣಾದಿಗಳ ಗತಿ ಏನಾಯಿತು ಎಂಬ ಉದಾಹರಣೆಗಳೊಂದಿಗೆ ನಮ್ಮ ಅಸೂಹೆ ಬುದ್ಧಿಯಿಂದ ಮುಂದೆ ಒದಗಬಹುದಾದ ದುರಂತವನ್ನು ಹೊಟ್ಟೆಕಿಚ್ಚು ಪ್ರಬಂಧದಲ್ಲಿ ತೆರೆದಿಡುತ್ತಾರೆ ಬೇರೆಯವರ ಮೇಲೆ ಸದಾ ವಿಷಕಾರುವುದು ತಪ್ಪು ಈ ಹೊಟ್ಟೆಕಿಚ್ಚಿನ ಬುದ್ಧಿ ಕೊನೆಗೆ ನಮ್ಮನ್ನು ಹೇಗೆ ಹಾಳು ಮಾಡುತ್ತದೆ ನಾವೇ ಅದಕ್ಕೆ ಹೇಗೆ ಬಲಿಯಾಗ ಬೇಕಾಗುತ್ತದೆ

೧-೨. ಸಂ. ತಾ.ರಾ. ನಾಗರಾಜ್, ಸ.ಲ.ಪ್ರ. ಅ.ರಾ.ಮಿತ್ರ. ಪ್ರ: ನಾಮದ ಬಲವೊಂದಿದ್ದರೆ ಸಾಕು, ಪು-೫೨

ಎಂಬುದನ್ನು 'ಹುತ್ತದಲ್ಲಿ ಹುತ್ತ' ಪ್ರಬಂಧದಲ್ಲಿ ಕಟ್ಟಿಕೊಡುತ್ತಾರೆ. ವನಜ ಆರಾಧ್ಯನನ್ನ ತಪ್ಪಿಗೆ ಸಿಕ್ಕಿಸಲು ಹೋಗಿ ಕೊನೆಗೆ ತಾನೆ ಸಿಕ್ಕಿಹಾಕಿಕೊಂಡು ಕೆಲಸ ಕಳೆದುಕೊಳ್ಳುವುದನ್ನು ನೋಡಿದಾಗ ಈ ಹೊಟ್ಟೆಕಿಚ್ಚಿನ ಕಿಡಿ ಸಮಾಜಕ್ಕೆ ಎಷ್ಟು ಅಪಾಯಕಾರಿ ಎಂಬುದು ತಿಳಿಯಬಹುದು. ಅಂಥಹ ಆದ್ದರಿಂದ ನಮ್ಮ ಮನಸ್ಸೆಂಬ ಸಿಗಡಿಗೆ ಅಸೂಹೆಯ ಕಿಡಿಯನ್ನು ಹಾಕದೆ ಪ್ರೀತಿಯ ಕಿಡಿಗಳಿಂದ ಮನಸ್ಸೆಂಬ ಸಿಗಡಿ ಹಾರಿಹೋಗದ ಹಾಗೆ ನೋಡಿಕೊಳ್ಳಬೇಕಾದ ಅಗತ್ಯತೆಯನ್ನು ಇವರ ಪ್ರಬಂಧದಲ್ಲಿ ನೋಡಬಹುದು.

ಮನುಷ್ಯನ ಸ್ವಾರ್ಥ ಬುಧ್ಧಿಯಿಂದ ಸಮಾಜ ಹೇಗೆ ಕಲುಷಿತಗೊಳ್ಳುತ್ತಿದೆ ಇದಕ್ಕೆ ಕಾರಣರಾದವರನನು ತಮ್ಮ 'ಕಿರುದಾರಿಗಳಿವೆ–ಎಚ್ಚರಿಕೆ'. 'ನನ್ನ ಯಶಸ್ಸಿನ ಗುಟ್ಟು'. 'ಸೊಳ್ಳೆ ಪರದೆ'. ಪ್ರಬಂಧಗಳಲ್ಲಿ ಕಟ್ಟಿಕೊಡುತ್ತಾರೆ. ಇದಕ್ಕೆ ಕಾರಣರಾದ ರಾಜಕಾರಣಿಗಳು. ಸರ್ಕಾರಿ ಅಧಿಕಾರಿಗಳು ಏನೆಲ್ಲಾ ದುರ್ಮಾಗದ ಹಾದಿ ಹಿಡಿದು ತಮ್ಮ ಸ್ವಾರ್ಥಕ್ಕಾಗಿ ಸಮಾಜವನ್ನು ಹಾಳು ಮಾಡುತ್ತಿದ್ದಾರೆ. ರಾಜಕಾರಣಿಗಳು ಕೆ.ಎಸ್.ಎನ್.ರವರ ಪದ್ಯದಂತೆ ನೀರಿಲ್ಲದ ನಲ್ಲಿಗಳಂತೆ. ಸಮಾಜದ ಜನತೆಯ ಮೂಗಿಗೆ ತುಪ್ಪ ಸವರುತ್ತಿದ್ದಾರೆ. ಇಂಥ ರಾಜಕಾರಣಿಗಳು ಸಮಾಜವನ್ನು ಹೇಗೆ ಮುಂದಕ್ಕೆ ತೆಗೆದುಕೊಂಡು ಹೋಗಲು ಸಾಧ್ಯ ? ಎಂದು ಪ್ರಶ್ನಿಸುತ್ತಾರೆ. ಅಧಿಕಾರಿ ವರ್ಗದವರು ಕಳ್ಳದಾರಿಯ ಮೂಲಕ ಹಣಗಳಿಸುವ ಮಾರ್ಗ ಹಿಡಿದು ಜನರ ದಿಕ್ಕು ತಪ್ಪಿಸುವ ಕೆಲಸದಲ್ಲಿ ತೊಡಗಿದ್ದಾರೆ. ಸಮಾಜ ಇಂತವರಿಂದ ಯಾವ ರೀತಿಯ ಸತ್ಕಾರ್ಯಗಳನ್ನು ಬಯಸುತ್ತದೆ ? ಇಂತಹ ರಾಜಕಾರಣಿಗಳು, ಅಧಿಕಾರಿಗಳು ಹುಟ್ಟಲು ನಾವೇಕಾರಣ ಅಂಥವರು ತಪ್ಪು ಮಾಡಿದಾಗ ತಿದ್ದಿ ಬುದ್ದಿಕಲಿಸದೆ 'ಬೆನ್ನ ಹಿಂದೆ ಹೊಗಳುತ್ತಾ ಉತ್ತರಕುಮಾರರನ್ನು ಸೃಷ್ಟಿಸುತ್ತಿದ್ದೇವೆ ಅನಿಸುತ್ತದೆ' ಇಂತವರು ಉತ್ತರಕುಮಾರರಿಗಿಂತ ಅಪಾಯಕಾರಿ ಎಂದಾಗ ಉತ್ತರಕುಮಾರರು ಬದಲಾಗುವುದರ ಜೊತೆಗೆ ಅರ್ಜುನನಂಥ ಸಮಾಜ ತಿದ್ದುವವರು ಹುಟ್ಟಿಕೊಳ್ಳಬೇಕಾದ ಅನಿವಾರ್ಯತೆಯನ್ನು ತಿಳಿಸುತ್ತಾ. ಆ ಮೂಲಕ ಸಮಾಜದಲ್ಲಿ ರಾಜಕಾರಣಿಗಳು ಅಧಿಕಾರಿಗಳು ಅರ್ಜುನನ ಮನೋಭಾವ ಬೆಳೆಸಿ ಕೊಳ್ಳುವ ಅಗತ್ಯವನ್ನು ತಿಳಿಸುತ್ತಾರೆ. 'ನಾನು' ಅನ್ನುವುದನ್ನು ಬಿಟ್ಟು 'ನಾವೆಲ್ಲ' ಎನ್ನುವ ಮನುಷತ್ವ ಗುಣವನ್ನು ಬೆಳೆಸಿಕೊಳ್ಳಬೇಕಾಗಿದೆ. ಸ್ವಾರ್ಥ ಮನೋಭಾವದ ರಾಜಕಾರಣಿಗಳನ್ನು ಪುರಾಣ ಕಾಲದ ಉತ್ತರಕುಮಾರರಿಗೆ ಹೋಲಿಸಿ ವಿಡಂಬಿಸುತ್ತದೆ. ಇಂತಹ ಹೊಗಳು ಭಟ್ಟರಿಂದ ಸಮಾಜ ಮುಕ್ತವಾಗಬೇಕಾದ ಸೂಚನೆ ನೀಡುತ್ತಾರೆ. ಈ ಮೂಲಕ ಸಮಾಜದಲ್ಲಿ ಅರ್ಜುನ ಮನೋಭಾವದವರ ಅನಿವಾರ್ಯತೆಯನ್ನು ತಿಳಿಸುತ್ತಾರೆ. ಅರ್ಜುನನಂಥವರು ಉತ್ತರಕುಮಾರರನ್ನು ಬದಲಿಸುವ ಗುಣ ಬೆಳೆಸಿಕೊಂಡು ಉತ್ತಮ ಸಮಾಜ ನಿರ್ಮಾಣದಲ್ಲಿ ತೊಡಗಬೇಕಾದ ಅಂಶಗಳನ್ನು ತಮ್ಮ ಪ್ರಬಂಧಗಳಲ್ಲಿ ಕಟ್ಟಿಕೊಡುತ್ತಾರೆ.

ಮನುಷ್ಯನ ಎಲ್ಲಾ ಕಾರ್ಯಚಟುವಟಿಕೆಗಳ ಮೇಲೆ ನಮ್ಮ ದೇಹದ ಅಂಗಾಂಗಳು ಪ್ರಭಾವ ಬಿರುತ್ತದೆ. ಮನುಷ್ಯನ ವ್ಯಕ್ತಿತ್ವ ರೂಪಿಸುವಲ್ಲಿ ಅಂಗಾಂಗಗಳ ಪಾತ್ರ ಮಹತ್ವವಾದವು.

ನಮ್ಮ ದೇಹದ ಸೌಂದರ್ಯದ ಗುರುತಾದ ಮುಖ. ಪ್ರಪಂಚವನ್ನು ನೋಡಿ ಆನಂದಿಸುವ ಕಣ್ಣು. ರುಚಿಯನ್ನು ಆಸ್ವಾದಿಸುವ ಬಾಯಿ. ವಾಸನೆಯನ್ನು ಗ್ರಹಿಸುವ ಮೂಗು ಸುಮಧುರ ವಾಣಿಯನ್ನು ಕೇಳುವ ಕಿವಿ ಹೀಗೆ ಎಲ್ಲವೂ ನಮ್ಮ ದೇಹದ ಮುಖ್ಯ ಅಂಗಾಂಗಗಳು ಆದರೆ ಇವು ಇಷ್ಟನ್ನು ಮಾತ್ರ ಮಾಡದೆ ವ್ಯಕ್ತಿಗೆ ಇನ್ನು ಹಲವು ಗುಣಗಳನ್ನು ದೊರಕಿಸಿ ಕೊಡುತ್ತವೆ. ವ್ಯಕ್ತಿತ್ವ. ಗುಣ. ಸ್ವಭಾವ. ನಡತೆ ಎಲ್ಲವನ್ನು ಇವು ತಂದುಕೊಡುತ್ತವೆ. ನಮಗೆ ಪ್ರಾಪ್ತವಾಗುವ ಒಳ್ಳೆಯ ಕೆಟ್ಟಗುಣಗಳು ನಮ್ಮ ವರ್ತನೆಯಿಂದಲೇ ಬರುತ್ತವೆ. ನಮ್ಮ ವರ್ತನೆಗಳನ್ನು ಈ ಅಂಗಾಂಗಗಳ ಮೂಲಕ ತೋರ್ಪಡಿಸುತ್ತೇವೆ. ಹಾಗೆ ತೋರ್ಪಡಿಸುವಾಗ ನಮ್ಮ ವ್ಯಕ್ತಿತ್ವ ಅನಾವರಣಗೊಳ್ಳುತ್ತದೆ. ಹೀಗೆ ಅಂಗಾಂಗಗಳ ವರ್ತನೆಯಿಂದ ನಮಗೆ ವ್ಯಕ್ತಿತ್ವ ಆರೋಪಿಸಲ್ಪಡುತ್ತದೆ ಎಂಬುದನ್ನು ತಮ್ಮ 'ಮುಖಮಂಡಲ'. 'ಬಾಯಿ-ಕಿವಿ'. 'ಕಣ್ಣಿನ ಜಗತ್ತು'. 'ಕರ್ಣಾಮೃತ'. 'ಮೂಗಿನತುದಿ' ಪ್ರಬಂಧದಲ್ಲಿ ತೋರಿಸಿ ಕೊಟ್ಟಿದ್ದಾರೆ.

ಮನುಷ್ಯನ ವ್ಯಕ್ತಿತ್ವ ರೂಪಿಸುವಲ್ಲಿ ಪ್ರಮುಖ ಪಾತ್ರವಹಿಸುವ ಈ ಅಂಗಾಗಳಾದ ಕಣ್ಣು. ಕಿವಿ. ಮೂಗು. ಬಾಯಿ ಈ ನಾಲ್ಕು ಅಂಗಗಳು ಪಂಚೇಂದ್ರಿಯಗಳಲ್ಲಿ ಮುಖ್ಯವಾದವು. ಮನುಷ್ಯ ಪಂಚೇಂದ್ರಿಯಗಳನ್ನು ನಿಗ್ರಹಿಸಿ. ಹತೋಟಿಯಲ್ಲಿ ಇಟ್ಟುಕೊಂಡಾಗ ಉತ್ತಮ ಜೀವನ ನಡೆಸಲು ಸಾಧ್ಯ ಎಂಬುದನ್ನು ಈ ಮೇಲಿನ ಪ್ರಬಂಧಗಳಲ್ಲಿ ತಿಳಿಸುತ್ತಾರೆ.

ಮಾತಿನಿಂದ ನಮಗೆ ಒದಗಬಹುದಾದ ವ್ಯಕ್ತಿತ್ವವನ್ನು ಬಾಯಿಕಿವಿಯಲ್ಲಿ ತೆರೆದಿಡುತ್ತಾರೆ. ಮಾತಿನ ಮಹತ್ವವನ್ನು ಅರಿಯದ ಭಾಷಣಕಾರರು ತಾವು ಮಾತಾಡುತ್ತಿರುವ ವಿಷಯದ ಬಗ್ಗೆ ಅರಿವಿಲ್ಲದೆ ಬರಿ ವಾಚಾಳಿಗಳಾಗಿರುತ್ತಾರೆ. ನಮ್ಮ ರಾಜಕಾರಣಿಗಳು ಇದಕ್ಕೆ ಮುಖ್ಯ ಉದಾರಹಣೆ. ಕೇಳುವ ಶತ್ರುಗಳಿಗೆ ಅಹಿತವಾಗುವ ಹಾಗೆ ಮಾತಾಡುತ್ತಿರುತ್ತಾರೆ. ಕಾಲ. ಕ್ರೀಯಿ. ಸ್ಥಳದ ಮಹತ್ವವಿಲ್ಲದ ಇಂತಹ ವಾಚಾಳಿಗಳು ಸಮಯದ ಮಹತ್ವ ಅರಿಯದವರಾಗಿದ್ದು ಬರಿ ಬೊಗಳೆ ಮಾತನಾಡುತ್ತಿರುತ್ತಾರೆ. ಈ ಬಾಯಿಯ ಸ್ವಭಾವವನ್ನು ಕಿವಿ. ಕಿವಿಯ ಸ್ವಭಾವವನ್ನು ಬಾಯಿ ಒಂದನ್ನೊಂದು ಅವುಗಳ ವರ್ತನೆಯನ್ನು ಹೀಯಾಳಿಸುವ ಮೂಲಕ ಸಭಿಕರು ಮತ್ತು ಭಾಷಣಕಾರರ ಗುಣ ಸ್ವಭಾವಗಳನ್ನು ತೆರೆದಿಡುತ್ತಾರೆ. ಇಬ್ಬರಿಗೂ ಸಭ ಮರ್ಯಾದೆ ಒದಗುವ ಸನ್ನಿವೇಶವನ್ನು ತಿಳಿಸುತ್ತಾರೆ. ಕಿವಿ (ಸಭಿಕರು) ಸಭಾಮರ್ಯಾದೆ ಅರಿತು ನಡೆಯಬೇಕು ಭಾಷಣ ಮಾಡುವಾಗ ಮಾತನಾಡದೆ. ಆಕಳಿಸದೆ. ಜಿಗುಪ್ಸೆ ಪಟ್ಟುಕೊಳ್ಳದೆ. ಚಪ್ಪಾಳೆ ತಟ್ಟಿ ಕರೆಯದೆ ಮರ್ಯಾದೆಯಿಂದ ವರ್ತಿಸುವ ಗುಣವನ್ನು ಸಭಿಕರು ಹಾಗೂ ಮಾತನಾಡುವಾಗ ಯಾವ ವಿಷಯವನ್ನು ಹೇಗೆ ಮಾತನಾಡಬೇಕು ಎಂದು ಬಾಯಿ (ಭಾಷಣಕಾರ) ತಿಳಿಯಬೇಕು ಎಂಬುದನ್ನು ಸೂಚಿಸುತ್ತ ಬಾಯಿ. ಕಿವಿಯ ವರ್ತನೆಗಳನ್ನು ವಿಡಂಬಿಸುತ್ತಾ ಹೇಳುವುದನ್ನು ಕಾಣಬಹುದು.

ಮೂಗಿನ ಮೂಲಕ ನಮ್ಮ ಸ್ವಭಾವವನ್ನು ಅಳೆಯುತ್ತಾರೆ. ಮೂಗು ಬಾಹ್ಯ ರೂಪಕ್ಕೆ ಸಣ್ಣ. ಗಿಡ್ಡ. ಗಿಣಿ. ಮುಂತಾದವುಗಳಿಂದ ಕರೆಸಿಕೊಂಡರು ಅದರ ಸ್ವಭಾವ ವಾಸನೆ

ಗ್ರಹಿಸುವುದಾದರು ಮೂಗಿನ ತುದಿಯಲ್ಲಿ ಇರುವುದು ಮಾತ್ರ 'ಕೋಪ' ಈ ಕೋಪವನ್ನು ಬಿಡಬೇಕು ಮೂಗಿನ ತುದಿಯಲ್ಲೇ ಕೋಪವಿದೆ ಎನ್ನುವಾಗ ಈ ಕೋಪದ ಕೈಗೆ ಬುದ್ಧಿಕೊಟ್ಟರೆ ಆಗುವ ಅನಾಹುತವನ್ನು ತಿಳಿಯಬಹುದು. 'ಕೋಪವೆಂಬುದನರ್ಥ ಸಾಧನ' ಎನ್ನುವಾಗ ಈ ಕೋಪದಿಂದ ದೇಹಕ್ಕಾಗಲಿ ದೇಶಕ್ಕಾಗಲಿ ಒಳ್ಳೆಯದಾಗುವುದಿಲ್ಲ ಎಂಬ ಕಿವಿಮಾತು ಹೇಳುತ್ತಾರೆ. ಕೋಪವನ್ನು ಬಿಡುತ್ತೇನೆ ಎಂದು ಕಾಶಿಗೆ ಹೋಗಿ ಕೋಪಬಿಟ್ಟು ಬಂದವನು ಕಾಶಿಗೆ ಹೋಗಿ ಏನುಬಿಟ್ಟು ಬಂದೆ ಎಂದು ಕೇಳಿದವನ ಮೇಲೆ ಕೋಪದಿಂದಲೇ ಉತ್ತರಕೊಡುವಂತವರನ್ನು ವಿಡಂಬಿಸುತ್ತ ಕೋಪದಿಂದ ಆಗುವ ಅವಗಡಗಳನ್ನು ತಿಳಿಸುತ್ತಾರೆ.

ಕೋಪ ಬಿಡಬೇಕು ಇಲ್ಲದೆ ಹೋದೆ ಅನಾಹುತ ತಪ್ಪಿದ್ದಲ್ಲ ಎಂದು ಕೋಪವನ್ನು ಬಿಡಲು ಶಾಂತಿ ಮಂತ್ರವನ್ನು ಜಪಿಸಬೇಕು ಋಷಿಗಳ ಹಾಗೆ ಯೋಗ ಧ್ಯಾನದ ಮೂಲಕ ಮನಸ್ಸನ್ನು ನಿಗ್ರಹಿಸುವ ಅಗತ್ಯತೆಯನ್ನು ಇಲ್ಲಿ ಕಟ್ಟಿಕೊಡುತ್ತಾರೆ. ಕಣ್ಣಿನ ಜಗತ್ತು ವಿಶಾಲವಾದುದು ಕಣ್ಣುಗಳು ಒಳ್ಳೆಯದನ್ನು, ಕೆಟ್ಟದ್ದನ್ನು ನೋಡುತ್ತವೆ. ಆ ಮೂಲಕ ನಮಗೆ ಒಳ್ಳೆಯ ಕೆಟ್ಟದರ ಸತ್ಯದರ್ಶನವಾಗುತ್ತದೆ. ಕಣ್ಣುಗಳಲ್ಲಿ ಓರೆನೋಟ, ನೆಟ್ಟದೃಷ್ಟಿ ಎಂಬ ನೋಟಗಳ ಜೊತೆಗೆ ಕೋಪದ ಸ್ವಭಾವದವರನ್ನು ಉರಿಗಣ್ಣ, ಕಿಡಿಗಣ್ಣ, ಪಿಂಗಾಕ್ಷಕರು ಎಂದು ಕರೆಯುತ್ತಾರೆ. ನಿದ್ದೆಗಣ್ಣು, ನೆಡುಗಣ್ಣು, ಮುಂತಾದ ನೋಟಗಳಲ್ಲಿ ನಮ್ಮ ಏಕಾಗ್ರತೆ, ಚಂಚಲತೆ, ಚುರುಕುತನ, ರಸಿಕತೆ, ಎಲ್ಲವನ್ನು ಈ ಕಣ್ಣು ಹೊರಹಾಕುತ್ತದೆ. ಈ ಕಣ್ಣುಗಳನ್ನು ಇಟ್ಟುಕೊಂಡು ಹಲವಾರು ಗಾದೆಗಳು ಹುಟ್ಟಿಕೊಂಡಿವೆ. 'ಒಂದು ಕಣ್ಣಿಗೆ ಸುಣ್ಣ, ಒಂದು ಕಣ್ಣಿಗೆ ಬೆಣ್ಣೆ' ಅತ್ತೆ ಕಣ್ಣು ಕೊತ್ತಿಮ್ಯಾಗೆ, 'ಮಾರಿಕಣ್ಣು ಹೋರಿಮ್ಯಾಗೆ' ಮುಂತಾದ ಗಾದೆಗಳು ವ್ಯಕ್ತಿತ್ವವನ್ನು ತಿಳಿಸುತ್ತವೆ.

ಕಿವಿ ಚಾಡಿಮಾತು ಕೇಳುವ, ಬೇರೆಯವರನ್ನು ಸಂಶಯದಿಂದ ನೋಡುವ ಹಾಗೆ ಮಾಡುತ್ತದೆ. ಪ್ರತ್ಯಕ್ಷವಾಗಿ ಕಂಡರು ಪ್ರಾಮಾಣಿಸಿ ನೋಡು ಎನ್ನುವಾಗ ಕಿವಿಯ ಮಹತ್ವ ತಿಳಿಯಬಹುದು. 'ಕಿವಿ ಒಳಗೆ ಹುಳುಬಿಡು' 'ಕಿವಿಚುಚ್ಚು' ಮುಂತಾದ ಒಳ್ಳೆಯ, ಕೆಟ್ಟ ನಡತೆಗಳು ಇದರಿಂದ ಹೊರಹೊಮ್ಮುತ್ತವೆ. ಆದ್ದರಿಂದ ಚಾಡಿಮಾತುಗಳಿಂದ ದೂರವಿರುವುದು ಒಳ್ಳೆಯದು ಎಂದು ಕಿವಿ ಮಾತು ಹೇಳುತ್ತಾರೆ.

ಈ ಮೇಲಿನ ಅಂಗಗಳನ್ನು ಒಳಗೊಂಡಿರುವ ಮುಖ ಇದು ಬಹಳ ಮುಖ್ಯವಾದ ಅಂಗ ..ನಮ್ಮ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿ. ನಾವು ಮುಖವಾಡಗಳನ್ನು ಹಾಕಿಕೊಂಡು ಬದುಕುತ್ತಿರುವುದನ್ನು ವಿಡಂಬಿಸುತ್ತ ಮುಖವಾಡ ಕಳಚಿಬದುಕಬೇಕಾದ ಸತ್ಯದರ್ಶನವನ್ನು ಮುಖ ಮಂಡಲದಲ್ಲಿ ವ್ಯಕ್ತಪಡಿಸಿದ್ದಾರೆ.

ನಮ್ಮ ಪಂಚೇಂದ್ರಿಯಗಳನ್ನು ವಿಡಂಬಿಸುತ್ತಾ ಅವುಗಳನ್ನು ನಿಗ್ರಹಿಸುವುದರ ಮೂಲಕ ನಾವು ನಮ್ಮ ವ್ಯಕ್ತಿತ್ವವನ್ನು ಹೆಚ್ಚಿಸಿಕೊಂಡು ಮೌಲ್ಯವನ್ನು ಕಂಡುಕೊಳ್ಳಬೇಕಿದೆ ಎಂಬುದನ್ನು ವಿಡಂಬನೆ ಮೂಲಕ ಹೇಳಿದ್ದಾರೆ.

ಸಂಸಾರದಲ್ಲಿ ಹೊಂದಾಣಿಕೆ ಮುಖ್ಯ ಅಂಶಗಳನ್ನು 'ನಾಂಪ-ನಾಂಪಿ', 'ಸರಸ ದಾಂಪತ್ಯ', 'ನೀಕೊಡೆ ನಾಬಿಡೆ', 'ಹಾಲಿನವಳ ಲೆಕ್ಕ', 'ಮನೆ ಟೆಂಪ್ರೇಚರ್', 'ಬಸಪ್ಪನ ದೀಪಾವಳಿ', 'ಕುಟುಂಬ ಯೋಜನೆ', ಮುಂತಾದ ಪ್ರಬಂಧಗಳಲ್ಲಿ ಸಂಸಾರದ ಹೊಂದಾಣಿಕೆಯ ಅಗತ್ಯವನ್ನು ತಿಳಿಸುತ್ತಾ ಗಂಡುಹೆಣ್ಣು ಹೊಂದಾಣಿಕೆಯ ಜೀವನ ನಡೆಸಬೇಕು ಎಂಬ ಅಂಶಗಳನ್ನು ಇಲ್ಲಿ ತೆರೆದಿಡುತ್ತಾರೆ. ಗಂಡಹೆಂಡತಿರ ಸಂಭಾಷಣೆಯಲ್ಲಿ ಸಮಾಜದಲ್ಲಿ ಇರುವ ಸಮಸ್ಯೆಗಳನ್ನು ಎತ್ತಿತೋರಿಸುತ್ತ ಅದನ್ನು ಪ್ರತಿಭಟಿಸಿ ನಿಲ್ಲಬೇಕು ಅನ್ಯಾಯದ ವಿರುದ್ಧ ಧನಿ ಎತ್ತಬೇಕು ಎಂಬುದನ್ನು 'ನಾಂಪ-ನಾಂಪಿ' ಪ್ರಬಂಧದಲ್ಲಿ ಕಾಣುತ್ತೇವೆ. ನಿಜವಾದ ಸಂಸಾರ ತೂಗಿಸುವ ಚಾಕಚಕ್ಯತೆ ಹೆಣ್ಣಿಗೆ ಸಾಧ್ಯ ಅವಳ ಗ್ರಹಣಶಕ್ತಿ ಮೆಚ್ಚುವಂತ ಅಂಶವನ್ನು 'ಹಾಲಿನವಳ ಲೆಕ್ಕ'ದಲ್ಲಿ ಕಾಣುತ್ತೇವೆ. ಚೌಕಾಸಿ ಸ್ವಭಾವದ ಹೆಣ್ಣು ಸಂಸಾರ ತೂಗಿಸಲು ಹೇಗೆ ಚೌಕಾಸಿ ಮಾಡುತ್ತಾಳೆ, ಚೌಕಾಸಿಯ ಅನಿವಾರ್ಯತೆ ತಿಳಿಸುತ್ತಾ ಸಂಸಾರದ ಮಹತ್ವವನ್ನು 'ನೀಕೊಡೆ ನಾ ಬಿಡೆ'ಯಲ್ಲಿ ಚಿತ್ರಿಸುತ್ತಾರೆ ಸಂಸಾರದಲ್ಲಿ ಸರಸ ಸಲ್ಲಾಪದ ಕ್ಷಣಗಳನ್ನು ಸರಸ ದಾಂಪತ್ಯದಲ್ಲಿ ಸತ್ಯದರ್ಶನ ಮಾಡಿಸುತ್ತಾರೆ. 'ಮನೆ ಟೆಂಪ್ರೇಚರ್', 'ಬಸಪ್ಪನ ದೀಪಾವಳಿ'ಯಲ್ಲಿ ಕಲಹದಿಂದ ಆಗಬಹುದಾದ ಅನಾಹುತ ಸನ್ನಿವೇಶ ತಿಳಿಸುತ್ತಾರೆ. ಈ ಮೂಲಕ ಸಂಸಾರದಲ್ಲಿ ಶಾಂತಿಯೆಂಬುದನ್ನು ಕಾಣಲು ಗಂಡು ಹೆಣ್ಣುಗಳು ಹೊಂದಿಕೊಂಡು ಬಾಳುವ ಮೌಲ್ಯವನ್ನು ತಿಳಿಸುತ್ತಾರೆ. ಶಾಂತಿ ಬದುಕನ್ನು ಕಾಣಲು ತಾಳ್ಮೆ, ಸಹನೆ, ಮುಂತಾದವು ಕೌಟುಂಬಿಕ ಮೌಲ್ಯಗಳು ಇವನ್ನು ಇಂದಿನ ಕುಟುಂಬಗಳು ಕಂಡುಕೊಳ್ಳಬೇಕಾಗಿದೆ ಎಂಬ ಅನಿವಾರ್ಯತೆಯನ್ನು ತಿಳಿಸುತ್ತಾರೆ.

ಯಾವುದಕ್ಕಾರವೂ ಒಂದು ಮಿತಿ ಇರುತ್ತದೆ ಅತಿಯಾದ ತಾಳ್ಮೆ ಕೆಲವು ವೇಳೆ ಬೇರೆಯವರು ನಮ್ಮನ್ನು ದುರುಪಯೋಗ ಪಡಿಸಿಕೊಳ್ಳುವ ಅಪಾಯವಾಗುತ್ತದೆ. ಸಂದರ್ಭವನ್ನು ಅರಿತು ವ್ಯವಹರಿಸಬೇಕಾಗುತ್ತದೆ. 'ದಂಡಂ ದಶಗುಣಂ'ನಲ್ಲಿ ಬರುವ ರಾಮುಮಾಸ್ಟರ್‌ನ ತಾಳ್ಮೆಯನ್ನು ವಿದ್ಯಾರ್ಥಿಗಳು ಪರೀಕ್ಷೆಗೊಳಪಡಿಸುತ್ತಾರೆ ಯಾರನ್ನು ಹೊಡೆಯುವುದಿಲ್ಲ ಎಂದಾಗ ಹುಡುಗರೆಲ್ಲರೂ ಗಲಾಟೆ ಹೆಚ್ಚು ಮಾಡುತ್ತಾರೆ. ಪೈಲ್ವಾನ್ ಪಿಳ್ಳೆಪ್ಪನ ಮಗ ಅತಿಯಾದ ತುಂಟನಾಗಿದ್ದು ಅವನ ತುಂಟಾಟ ಮಿತಿಮೀರಿದಾಗ ಅವನಿಗೆ ನಾಲ್ಕುಬಾರಿಸಿ ಕ್ಲಾಸಿಂದ ಆಚೆಗೆ ಎಸೆಯುತ್ತಾರೆ. ಪಿಳ್ಳೆಪ್ಪನಿಂದ ರಾಮಮಾಸ್ಟರ್‌ಗೆ ಶಿಕ್ಷೆ ಗ್ಯಾರಂಟಿ ಎಂದುಕೊಂಡಿದ್ದಾಗ ಪಿಳ್ಳಪ್ಪ ಬಂದು ಸಂತೋಷದಿಂದ ರಾಮು ಮಾಸ್ಟರ್‌ನ ಅಭಿನಂದಿಸುತ್ತಾನೆ. ವಿದ್ಯಾರ್ಥಿಗಳು ತಪ್ಪು ದಾರಿಯಲ್ಲಿ ನಡೆಯುವಾಗ ಶಿಕ್ಷೆ ಅನಿವಾರ್ಯವಾಗಿರುತ್ತದೆ ಹಾಗೆ ಮಕ್ಕಳನ್ನು ಬೆಳೆಸುವಾಗ ಅತಿ ಮುದ್ದುಮಾಡದೆ ತಪ್ಪು ಮಾಡಿದಾಗ ಶಿಕ್ಷಿಸಿ ಬುದ್ದಿ ಹೇಳಬೇಕು ಇಲ್ಲದೆ ಹೋದರೆ ಫೈಲ್ವಾನ್ ಮಗನಂತೆ ಆಗುತ್ತಾರೆ. ಶಿಕ್ಷಕರು ಮತ್ತು ಪೋಷಕರು ಮಕ್ಕಳನ್ನು ತಿದ್ದುವ ಕಾರ್ಯದ ಕಡೆ ಗಮನ ನೀಡಬೇಕಾದ ಅವಶ್ಯಕತೆ ತಿಳಿಸುತ್ತಾರೆ. ಇಲ್ಲಿ ಮಾನವೀಯ

ಮೌಲ್ಯಗಳನ್ನು ಬೆಳೆಸುವಲ್ಲಿ ಶಿಕ್ಷಕರು ಮತ್ತು ಮಕ್ಕಳ ತಂದೆ ತಾಯಿಗಳು ಶ್ರಮವಹಿಸಬೇಕಾದದ್ದು ಮುಖ್ಯವಾಗಿದೆ ಎಂಬುದನ್ನು ತೋರಿಸುತ್ತರೆ.

ಮನುಷ್ಯ ಅತಿಯಾದ ಆಸೆಯಿಂದ ಲೋಲುಪತೆ ಜೀವನಕ್ಕೆ ಜೋತು ಬಿದ್ದು ಬದುಕಿನಲ್ಲಿ ಹಣ, ಹೆಸರು ಗಳಿಸುವುದೇ ಮುಖ್ಯ ಎಂದು ತಿಳಿದು ಸಮಾಜದಲ್ಲಿ ತನ್ನ ಸ್ಥಾನಮಾನ ಪ್ರತಿಷ್ಠೆ ಉಳಿಸಿಕೊಳ್ಳಲು ಕೆಟ್ಟದಾರಿಯನ್ನು ಹಿಡಿಯುತ್ತಿದ್ದು ಶಾಂತಿ, ನೆಮ್ಮದಿಯನ್ನು ಕಳೆದುಕೊಂಡು ಆಧುನಿಕ ಜೀವನದಲ್ಲಿ ಸಜ್ಜನಿಕೆ ಸಹಬಾಳ್ವೆ, ಹೊಂದಾಣಿಕೆ, ಪದಗಳು ಅರ್ಥ ಕಳೆದುಕೊಳ್ಳುತ್ತಿವೆ. ಮನುಷ್ಯ ಇಂದು ಶಾಂತಿ, ನೆಮ್ಮದಿ, ತಾಳ್ಮೆ, ಸಹಬಾಳ್ವೆ, ಸಜ್ಜನಿಕೆ, ಸಹನೆ, ಸನ್ನಡತೆ ಮುಂತಾದ ಮೌಲ್ಯಗಳನ್ನು ಕಂಡುಕೊಳ್ಳುವ ಅನಿವಾರ್ಯತೆ ಇದೆ. ಹಾಗೆ ಕಂಡು ಕೊಳ್ಳುವುದು ಹೇಗೆ ಎಂಬಂತಹ ಅಂಶಗಳನ್ನು ಅ.ರಾ.ಮಿತ್ರ ತಮ್ಮ ಪ್ರಬಂಧದಲ್ಲಿ ವಿಡಂಬನೆಯ ಮೂಲಕ ಮನುಷ್ಯತ್ವ ಮತ್ತು ಮೌಲ್ಯಗಳ ಹುಡುಕಾಟ ನಡೆಸಿರುವುದನ್ನು ಕಾಣುತ್ತೇವೆ.

ಅಧ್ಯಾಯ – 6

ಸಮಾರೋಪ

ಲಲಿತ ಪ್ರಬಂಧ ರಚನೆಯಲ್ಲಿ ಪ್ರಮುಖ ಸ್ಥಾನಗಳಿಸಿರುವ ಅ.ರಾ.ಮಿತ್ರರವರು ಹಾಸ್ಯಪ್ರಜ್ಞೆಯ ಮೂಲಕ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ವಿಶಿಷ್ಟ ಸ್ಥಾನಗಳಿಸಿದ್ದಾರೆ. ಉಪನ್ಯಾಸಕರಾಗಿ ಹಲವು ವರ್ಷ ವಿದ್ಯಾರ್ಥಿಗಳಿಗೆ ಪಾಠ ಬೋಧಿಸಿ ಹಲವು ಕೃತಿಗಳನ್ನು ರಚಿಸಿ. ಜನ ಸಾಮಾನ್ಯರಿಗೂ ಅರ್ಥವಾಗುವ ರೀತಿಯಲ್ಲಿ ಕುಮಾರವ್ಯಾಸನ 'ಕರ್ಣಾಟ ಭಾರತ ಕಥಾ ಮಂಜರಿ'ಯನ್ನು ಗದ್ಯದಲ್ಲಿ ಅನುವಾದಿಸಿ ಮಹಾದುಪಕಾರ ಮಾಡಿದ್ದಾರೆ. ಕನ್ನಡ ಸಾಹಿತ್ಯ ವಿದ್ಯಾರ್ಥಿಗಳಿಗೆ ಕಷ್ಟವೆನಿಸಿರುವ ಛಂದಸ್ಸನ್ನು ನಾವಾಡುವ ಸಾಮಾನ್ಯ ಕನ್ನಡದಲ್ಲಿ 'ಛಂದೋವಿಹಾರ' ಎಂಬ ಕೃತಿಯನ್ನು ಸಾಮಾನ್ಯ ಭಾಷೆಯಲ್ಲಿ ರಚಿಸಿ ಎಲ್ಲರ ಅಚ್ಚು ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಹೀಗೆ ಹಲವು ವಿಷಯಗಳಲ್ಲಿ ಭಾಷಾ ಪ್ರೌಢಿಮೆಯನ್ನು ಹೊಂದಿರುವ ಅ.ರಾ.ಮಿತ್ರರವರು ತಮ್ಮ ಲಲಿತ ಪ್ರಬಂಧಗಳಲ್ಲೂ ಸಹ ಹಲವು ವಿಶಿಷ್ಟತೆಗಳನ್ನು ತೋರಿದ್ದಾರೆ.

ಮಿತ್ರರ ಲಲಿತ ಪ್ರಬಂಧಗಳು ಕೇವಲ ನಕ್ಕು ಮೈಮರೆಸದೆ ನಮ್ಮನ್ನು ಚಿಂತನಗೆ ಒಳಪಡಿಸುತ್ತದೆ. ವಿಡಂಬನೆಯ ಮೂಲಕ ಸಮಾಜದಲ್ಲಿರುವ ಅನ್ಯಾಯ. ಮೋಸ. ವಂಚನೆಗಳನ್ನು ಬಯಲಿಗೆಳೆಯುತ್ತಾ. ಮುಖವಾಡ ಹಾಕಿಕೊಂಡು ಮೆರೆಯುವ ಉತ್ತರಕುಮಾರ ನಂತವರ ಗುಣ ಸ್ವಭಾವಗಳನ್ನು ವಿಡಂಬಿಸುತ್ತಾ ಇಂಥವರಿಂದ ಸಮಾಜ ಮುಕ್ತವಾಗಬೇಕು ಎಂಬ ಆಶಯವನ್ನು ವ್ಯಕ್ತಪಡಿಸುತ್ತಾರೆ. ಪ್ರಜಾ ಪ್ರಭುತ್ವ ವ್ಯವಸ್ಥೆಯಲ್ಲಿ ರಾಜಕೀಯ ಪುಡಾರಿಗಳು ತಮ್ಮ ಸ್ವಾರ್ಥ ಸಾಧನೆಯಲ್ಲಿ ಮುಳುಗಿ ಸಮಾಜವನ್ನು ವಿನಾಶದಂಚಿನಕಡೆಗೆ ಕೊಂಡೊಯ್ಯುತ್ತಿದ್ದು ಇಂತಹ ವ್ಯಕ್ತಿಗಳು ಸಮಾಜಕ್ಕೆ ಹೇಗೆ ಕಂಠಕರಾಗಿದ್ದಾರೆ ಎಂಬುದನ್ನು ತಮ್ಮ ಪ್ರಬಂಧಗಳಲ್ಲಿ ಕಟ್ಟಿಕೊಟ್ಟಿದ್ದಾರೆ. ಸಾಮಾಜಿಕ ಪರಿವರ್ತನೆಗೆ ಮನುಷ್ಯಕುಲ ಒಂದಾಗಿ ಸಾಗಬೇಕು ಕುವೆಂಪು ಹೇಳುವಂತೆ 'ಸರ್ವರಿಗೆ ಸಮಬಾಳು ಸರ್ವರಿಗೆ ಸಮಪಾಲು' ಎಂಬ ಜೀವನವನ್ನು ನಡೆಸಬೇಕು ಎಂಬ ಅಂಶಗಳನ್ನು ಇವರು ಪ್ರಬಂಧಗಳಲ್ಲಿ ಕಟ್ಟಿಕೊಟ್ಟಿದ್ದಾರೆ.

ಸಾಮಾಜಿಕ ಸನ್ನಿವೇಶವನ್ನು ಅರಿಯದೆ ಕೆಲವರು ಭಾಷಣ ಬಿಗಿಯುತ್ತ ತಮ್ಮ ಮಾತಿನ ಮಚ್ಚನ್ನು ಹಾಗಾಗ ಕೊಚ್ಚುತ್ತಿರುತ್ತಾರೆ. ಅಧಿಕಾರಿ ವರ್ಗದವರು ಇಂತವರು ಹೇಳಿದ ಮಾತುಗಳಿಗೆ ತಾಳಕ್ಕೆ ತಕ್ಕಂತೆ ಕುಣಿಯುತ್ತ ಅನ್ಯದಾರಿಯನ್ನು ಹಿಡಿದು ನಿಜವಾದ ಮನುಷತ್ವವನ್ನು ಕಳೆದುಕೊಳ್ಳುತ್ತಿದ್ದಾರೆ. ನ್ಯಾಯ. ಧರ್ಮ. ಸತ್ಯ. ನಿಷ್ಠೆಗಳನ್ನು ಗಾಳಿಗೆ ತೂರಿ ಲೋಲುಪತೆಯ ಜೀವನವನ್ನು ನಡೆಸುತ್ತಿದ್ದಾರೆ. ಇಂತವರ ಬಂಡವಾಳವನ್ನು 'ನನ್ನ ಯಶಸ್ಸಿನ ಗುಟ್ಟು' ಪ್ರಬಂಧದಲ್ಲಿ ಬಯಲಿಗೆಳೆದಿದ್ದಾರೆ. ಬರುವ ವಿವಿಧ ಇಲಾಖೆಯ ಭ್ರಷ್ಟ ಅಧಿಕಾರಿಗಳಿಂದ ಸಮಾಜದಲ್ಲಿ ಜೀವನ ಮೌಲ್ಯಗಳು ಹೇಗೆ ಕುಸಿಯುತ್ತಿವೆ ಎಂಬುದನ್ನು ತಿಳಿದು ಸಾಮಾಜಿಕ ಬದಲಾವಣೆಯನ್ನು ಕಂಡು ಕೊಳ್ಳಲು ಇವರ ಪ್ರಬಂಧಗಳು ಸಹಾಯಕವಾಗಿವೆ. ಸಾಮಾಜಿಕ

ಜವಾಬ್ದಾರಿ ಅರಿಯದವರ ಗುಣಸ್ವಭಾವಗಳು 'ಕರ್ಣಪಿಶಾಚಿ' ಪ್ರಬಂಧದಲ್ಲಿ ಅನಾವರಣಗೊಂಡಿದೆ. ಮನುಷ್ಯರಾದ ನಾವು ಎಲ್ಲರೊಂದಿಗೂ ಹೊಂದಾಣಿಕೆ ಜೀವನವನ್ನು ನಡೆಸುತ್ತಾ ಸಾಗಿದಾಗ ಬದುಕು ಸುಖಮಯವಾಗಿರುತ್ತದೆ ಎಂಬಂಥ ಅಂಶಗಳನ್ನು ತಮ್ಮ ಪ್ರಬಂಧಗಳಲ್ಲಿ ಕಟ್ಟಿಕೊಡುತ್ತಾರೆ. ಕುಟುಂಬದಲ್ಲಿ ಕಾಣುವ ಸರಸ, ವಿರಸ, ಕಲಹ ಮುಂತಾದವು ಸಾಂಸಾರಿಕ ಸನ್ನಿವೇಶದಲ್ಲಿ ಹೇಗೆ ಕಾಣಿಸಿಕೊಳ್ಳುತ್ತವೆ ಎಂಬುದನ್ನು ತಿಳಿಸುತ್ತಾ ಸಂಸಾರದಲ್ಲಿ ಮನುಷ್ಯ ಮುಖ್ಯವಾಗಿ ಹೊಂದಾಣಿಕೆ ಮಾಡಿಕೊಂಡು ಹೋಗಬೇಕು ಆಗಿದ್ದಾಗ ಮಾತ್ರ ಸಂಸಾರ ಸುಖಮಯವಾಗುತ್ತದೆ. ಇಲ್ಲದೇ ಹೋದರೆ ಮನೆಯ ಟೆಂಪ್ರೇಚರ್ ಏರಿ ಅಸೂಹೆಯ ಸಿಡಿಮದ್ದುಗಳು ಸಿಡಿದು ಸಂಸಾರಗಳು ಹಾಳಾಗಿ ಮನಸ್ಸುಗಳು ಹೊಡೆದು ಹೋಗುತ್ತವೆ ಎಂಬಂತ ಅಂಶಗಳನ್ನು 'ಬಸಪ್ಪನ ದೀಪಾವಳಿ', 'ಮನೆ ಟೆಂಪ್ರೇಚರ್' ಪ್ರಬಂಧಗಳಿಂದ ತಿಳಿಯಬಹುದಾಗಿದೆ.

ಮನುಷ್ಯ ತನ್ನ ಅಸೂಹೆಯ ಕಿಡಿಗಳನ್ನು ತನ್ನ ಹೊಟ್ಟೆಯಲ್ಲಿ ಪೋಷಿಸಿಕೊಂಡು ಬರುತ್ತಿದ್ದಾನೆ. ಆದರೆ ಇದು ಮುಂದೊಂದು ದಿನ ತನ್ನನ್ನ ಹಾಳು ಮಾಡುತ್ತದೆ ಎಂಬುದನ್ನು 'ಹುತ್ತದಲ್ಲಿ ಹುತ್ತ' ಪ್ರಬಂಧದ 'ವನಜ' ಸಾಕ್ಷಿಯಾಗಿ ನಿಲ್ಲುತ್ತಾಳೆ. ಇದುದ್ದರಲ್ಲಿ ಸುಖ ಪಡದೆ ಜನರನ್ನು ಮೆಚ್ಚಿಸಬೇಕು ಎಂದು ತನ್ನ ಪ್ರತಿಷ್ಠೆಗೋಸ್ಕರ ಸಾಲ ಸೂಲವನ್ನು ಮಾಡುವುದನ್ನು 'ಆರತಕ್ಷತೆ'ಯಲ್ಲಿ ನೋಡಿದಾಗ ತಿಳಿಯುತ್ತದೆ. ಆದರೆ ಮುಂದೆ ಸಾಲ ನೀಡಿದಾತ ಬಂದು ಸಾಲ ಕೇಳಿದಾಗ ಇಬ್ಬದಿಯ ಕೀಲು ಮುರಿದಂತೆ ಎಲ್ಲರೆದುರು ಅವಮಾನವನ್ನು ಅನುಭವಿಸಬೇಕಾಗುತ್ತದೆ. 'ಹಾಸಿಗೆ ಇದ್ದಷ್ಟು ಕಾಲು ಚಾಚು' ಎಂಬ ಗಾದೆಯಂತೆ ಇದ್ದುದರಲ್ಲಿ ಸುಖ ಕಂಡುಕೊಂಡು ನೆಮ್ಮದಿ ಜೀವನ ನಡೆಸಬೇಕು ಎಂಬುದನ್ನು ಇಲ್ಲಿ ತಿಳಿಸಲಾಗಿದೆ. ವ್ಯಕ್ತಿ ಸುಖಮಯವಾಗಿರಬೇಕಾದರೆ ಸಮಾಜದಲ್ಲಿ ಶಾಂತಿಯುತ ಜೀವನ ನಡೆಸಬೇಕಾದರೆ ಸಾಮರಸ್ಯ ಜೀವನ ಮುಖ್ಯ ಇಡೀ ಭೂಸಂಪನ್ಮೂಲಗಳಿರುವುದೇ ನನ್ನ ಸುಖಕ್ಕಾಗಿ ಎಂದು ಭಾವಿಸಿ ಎಲ್ಲವನ್ನು ಸ್ವಾರ್ಥಕ್ಕಾಗಿ ನಾಶ ಮಾಡುತ್ತಾ ಹೋದರೆ ಮುಂದೊಂದು ದಿನ ದುಃಖಪಡಬೇಕಾದ ಸಂದರ್ಭ ಬರುತ್ತದೆ. ತನ್ನ ಸ್ವಾರ್ಥ, ದುರಾಸೆಗಳಿಂದ ಹಣಗಳಿಸುವ ಉದ್ದೇಶದಿಂದ ಮರಗಳನ್ನು ಕಡಿದು ಪರಿಸರವನ್ನು ಹಾಳು ಮಾಡುತ್ತಿದ್ದಾನೆ. ಮರಗಳನ್ನು ಪ್ರೀತಿಯ ಅಪ್ಪುಗೆಯಿಂದ ಉಳಿಸುವ ಮೂಲಕ ಕಾಡನ್ನು ರಕ್ಷಿಸಬೇಕಾಗಿದೆ ಅದಕ್ಕಾಗಿ ಮನುಷ್ಯ ಕಂಕಣಬದ್ಧನಾಗಬೇಕಾಗಿದೆ. ಹಾಗೆ ಮಾನವ ಸಂಬಂಧಗಳನ್ನು ಪ್ರೀತಿಯ ಅಪ್ಪುಗೆಯಿಂದ ಉಳಿಸುವ ಮೂಲಕ ಸಮಾಜವನ್ನು ಕಾಪಾಡಬೇಕಾಗುತ್ತದೆ. ಇಲ್ಲದೆ ಹೋದರೆ ಬದುಕು ಕಾಡ್ಗಿಚ್ಚಿನಂತೆ ಸುಟ್ಟು ಭಸ್ಮವಾಗುತ್ತದೆ ಎಂಬುದನ್ನು ಇವರ ಪ್ರಬಂಧಗಳಲ್ಲಿ ಕಾಣುತ್ತೇವೆ.

ಮನುಷ್ಯ ತನ್ನ ದುಡುಕಿನ ಸ್ವಭಾವದಿಂದ ಜೀವನವನ್ನು ಹಾಳು ಮಾಡಿಕೊಳ್ಳುವುದು 'ಮೂಗಿನ ತುದಿ' ಪ್ರಬಂಧದಲ್ಲಿ ಅನಾವರಣಗೊಂಡಿದೆ. ಮೂಗಿನ ಬಾಹ್ಯ ರೂಪದಲ್ಲಿ ಹಲವು ಬಗೆಗಳಿದ್ದರೂ ಎಲ್ಲರ ಮೂಗಿನ ತುದಿಯಲ್ಲಿ ಏನಿದೆ ಎಂದು ಕೇಳಿದರೆ ಕೋಪ ಎಂಬ ಉತ್ತರ

ದೊರೆಯುತ್ತದೆ. ಮನುಷ್ಯ ಒಂದು ವೇಳೆ ಕೋಪದ ಕೈಗೆ ಬುದ್ಧಿಯ ನೀಡಿದರೆ ಏನಾಗುತ್ತದೆ ಎಂಬುದನ್ನು 'ಮನೆ ಟೆಂಪ್ರೇಚರ್'ನಲ್ಲಿ ಕಾಣಬಹುದು. ಯಾರದೋ ಕೋಪವನ್ನು ಮತ್ಯಾರ ಮೇಲೂ ತೋರಿದಾಗ ಮನಸ್ಸು ಕದಡಿದ ಕೊಳದ ರೀತಿ ಆಗುತ್ತದೆ. ನಿಜವಾಗಲು ಮನುಷ್ಯ ಈ ಕೋಪವನ್ನು ಬಿಡಬೇಕು. ಆಗ ಮಾತ್ರ ಜೀವನದಲ್ಲಿ ನೆಮ್ಮದಿ ಬದುಕು ಕಾಣಲು ಸಾಧ್ಯ ಎಂಬುದನ್ನು ತಿಳಿಯಬಹುದಾಗಿದೆ. ತಪ್ಪು ಮಾಡಿದಾಗ ವ್ಯಕ್ತಿಗೆ ಬುದ್ಧಿ ಕಲಿಸಬೇಕು ಬೆಳೆಯುವ ಪೈರು ಮೊಳಕೆ ಎಂಬಲ್ಲಿ ಎನ್ನುವಂತೆ ಮಕ್ಕಳು ತಪ್ಪು ಮಾಡಿದಾಗ ಅವರಿಗೆ ತಿದ್ದಿ ಬುದ್ಧಿ ಹೇಳಬೇಕಾದ ಅಗತ್ಯವಿರುವುದನ್ನು 'ದಂಡಂ ದಶಗುಣಂ' ಪ್ರಬಂಧದಲ್ಲಿ ನೋಡಬಹುದು ಹಾಗೂ ತಾಳ್ಮೆಗೂ ಒಂದು ಮಿತಿ ಇದೆ ಎಂಬುದನ್ನು ತಿಳಿಯಬಹುದು.

ನಿಜವಾದ ಜೀವನ ಧರ್ಮ ಎಂದರೆ ಕಾಯಕ ನಿಷ್ಠೆ. ಕಾಯಕದಲ್ಲಿ ತಮ್ಮನ್ನು ತೊಡಗಿಸಿಕೊಂಡು ಜೀವನದಲ್ಲಿ ನೆಮ್ಮದಿ ಕಾಣಬೇಕು ಎಂಬುದನ್ನು 'ಪವಡಿಸು ಪರಮಾತ್ಮ' ಎಂಬ ಪ್ರಬಂಧದಲ್ಲಿ ತಿಳಿಯುತ್ತದೆ. ಎಲ್ಲವನ್ನು ದೇವರ ಮೇಲೆ ಬಾರ ಹಾಕಿ ಸೋಮಾರಿತನವನ್ನು ಪ್ರದರ್ಶಿಸುತ್ತಾ ದೇವರೇ ಬಂದು ಕೆಲಸ ಮಾಡಲಿ ಎಂದು ಸೋಮಾರಿಯಂತೆ ವರ್ತಿಸುವ ಅಧಿಕಾರಿ ವರ್ಗದವರು ಇಂದು ಸಾರ್ವಜನಿಕರ ಸಮಸ್ಯೆಗೆ ಸ್ಪಂದಿಸುವ ಅಗತ್ಯವಿದೆ. ಕೇವಲ ಕಾಲ ಕಳೆಯಲೆಂದೇ ಕಾಲ ಕೇಳುತ್ತ ತಿರುಗುವ ಸೋಮಾರಿಗಳು ಸಹ ಕಾಲದ ಮಹತ್ವವನ್ನು ಅರಿಯಬೇಕಾಗಿದೆ. ಆ ಮೂಲಕ ಸಮಾಜದಲ್ಲಿ ತನ್ನ ಕರ್ತವ್ಯವನ್ನು ಅರಿತು ಬದುಕಬೇಕಾಗಿದೆ. ಜೀವನದಲ್ಲಿ ತಪ್ಪು ಮಾಡುವುದು ಸಹಜ. ಆದರೆ ತಪ್ಪು ಮಾಡಿದಾಗ ಹಲವರು ನಮ್ಮನ್ನು ಅಣಕಿಸಿಕೊಳ್ಳುತ್ತಾರೆ ಅಂಥ ವೇಳೆಯಲ್ಲಿ ಅವರ ನಿಂದನೆ ಮಾತುಗಳಿಗೆ ಕಿವಿಗೊಡದೆ ಕಿವಿಯೊಳಗೆ ಉಳುಬಿಟ್ಟುಕೊಂಡವರ ರೀತಿ ಸಾಧನೆಯ ಹಾದಿಯಲ್ಲಿ ನಡೆಯಬೇಕು ಕಿವಿಯಲ್ಲಿ ಉಳುಬಿಟ್ಟುಕೊಂಡವರು ಯಾವುದಾದರೂ ಒಂದು ಸಮಸ್ಯೆಯ ಬೆನ್ನೇರಿ ಅದನ್ನೇ ಬಿಡಿಸುವ, ಹೊಸದನ್ನು ಕಂಡು ಹಿಡಿಯುವ, ಸಂಶೋಧಿಸುವ ಹಾದಿಯಲ್ಲಿರುತ್ತಾರೆ ಹಾಗೆ ನಾವು ಬದುಕಬೇಕೇ ಎಂಬುದನ್ನು 'ನೆಡೆವರೆಡಹದೆ' ಹಾಗೂ 'ಕರ್ಣಾಮೃತ' ಪ್ರಬಂಧಗಳಲ್ಲಿ ತಿಳಿಸಿದ್ದಾರೆ.

ಮನುಷ್ಯ ಪಂಚೇಂದ್ರಿಯಗಳನ್ನು ತನ್ನ ಅಂಕೆಯಲ್ಲಿಟ್ಟುಕೊಳ್ಳುವುದರ ಮೂಲಕ ನೆಮ್ಮದಿ ಜೀವನವನ್ನು ನಡೆಸಬೇಕು. ದೇಹ ಬಯಸಿದ್ದನ್ನೆಲ್ಲವನ್ನು ಈಡೇರಿಸಹೊರಟರೆ ಬದುಕು ಕಷ್ಟಕರವಾಗುತ್ತದೆ. ಈ ಪಂಚೇಂದ್ರಿಯಗಳು ತೋರುವ ವರ್ತನೆಯಿಂದ ನಮ್ಮ ವ್ಯಕ್ತಿತ್ವ ಅನಾವರಣಗೊಳ್ಳುತ್ತದೆ. ಈ ಪಂಚೇಂದ್ರಿಯಗಳಲ್ಲಿ ನಾಲ್ಕು ಅಂಶಗಳು ನಮ್ಮ ಮುಖದಲ್ಲೇ ಇದ್ದು ಅವು ವ್ಯಕ್ತಪಡಿಸುವ ಸ್ವರೂಪದಿಂದ ನಮ್ಮ ವ್ಯಕ್ತಿತ್ವ ರೂಪುಗೊಳ್ಳುತ್ತದೆ. ಆದ್ದರಿಂದ ಕಣ್ಣು, ಕಿವಿ, ಮೂಗು, ಬಾಯಿಗಳು ಕೇವಲ ಬಾಹ್ಯರೂಪದ ಹೆಸರುಗಳಾಗಿರದೆ ನಮ್ಮ ವ್ಯಕ್ತಿತ್ವದ ಗುರುತುಗಳಾಗಿವೆ. ನಮ್ಮ ದೇಹ ತೋರ್ಪಡಿಸುವ ಕೆಟ್ಟ ಚಟಗಳನ್ನು ನಿಗ್ರಹಿಸಿಕೊಂಡು ಉತ್ತಮ

ಜೀವನವನ್ನು ನಡೆಸಬೇಕು ಎಂಬುದು 'ಮುಖಮಂಡಲ', 'ಮೂಗಿನ ತುದಿ', 'ಕಣ್ಣಿನ ಜಗತ್ತು', 'ಬಾಯಿ-ಕಿವಿ' ಪ್ರಬಂಧಗಳಲ್ಲಿ ಕಾಣುತ್ತವೆ.

ಸರ್ಕಾರವನ್ನು, ಆಡಳಿತ ವ್ಯವಸ್ಥೆಯನ್ನು 'ಕೆಂಪುಬಸ್ಸು', 'ಕ್ಯೂ' ಮುಂತಾದ ಪ್ರಬಂಧಗಳಲ್ಲಿ ವಿಡಂಬಿಸುತ್ತಾ ಸರ್ಕಾರದ ಧೋರಣೆಗಳು ನಿಲುವುಗಳು ಬದಲಾಗಬೇಕು. ಸಾಮಾನ್ಯರ ಸ್ಥಿತಿಗತಿಗಳನ್ನು ಅರಿತು ಅವರ ಸಮಸ್ಯೆಗಳಿಗೆ ಸ್ಪಂದಿಸಿ ಅರಿತು ಮೂಲಭೂತ ಅಗತ್ಯತೆಗಳನ್ನು ಪೂರೈಸಬೇಕಾಗಿದೆ ಎಂಬ ಸೂಚನೆಗಳು ಕಾಣಿಸಿಕೊಳ್ಳುತ್ತವೆ. ಸರ್ಕಾರ, ರಾಜಕೀಯ ಪುಡಾರಿಗಳು, ಅಧಿಕಾರಿ ವರ್ಗದವರು ತಮ್ಮ ಮನೋಧೋರಣೆಗಳನ್ನು ಬದಲಿಸಿಕೊಳ್ಳಬೇಕಾದ ಅಂಶಗಳನ್ನು ಪ್ರಬಂಧಗಳಲ್ಲಿ ವಿಡಂಬನೆಯ ಮೂಲಕ ತಿಳಿಸಿ ಬದಲಾಗಬೇಕಾದ ಅವಶ್ಯಕತೆಯನ್ನು ಕಟ್ಟಿಕೊಟ್ಟಿದ್ದಾರೆ.

ಸಮಾಜದಲ್ಲಿ ತಾಂಡವಾಡುತ್ತಿರುವ ಪಿಡುಗಗಳಿಗೆ, ಭ್ರಷ್ಟಾಚಾರ ಕೋಮುಗಲಭೆ, ರೋಗರುಜಿನಗಳಿಗೆ ಮನುಷ್ಯನೇ ಕಾರಣವಾಗಿದ್ದು ಸಮಾಜಕ್ಕೆ ಸಾಂಕ್ರಾಮಿಕ ಕಾಯಿಲೆ ಹರಡುವ ಸೊಳ್ಳೆಯಾಗಿದ್ದಾನೆ ಎಂಬುದನ್ನು 'ಸೊಳ್ಳೆ ಪರದೆ' ಎಂಬ ಪ್ರಬಂಧದಲ್ಲಿ ಕಾಣಿಸಿಕೊಳ್ಳುತ್ತದೆ. ಸಮಾಜದಲ್ಲಿ ಬದಲಾವಣೆ ತರಬೇಕಾದ ಶಿಕ್ಷಣ ವ್ಯವಸ್ಥೆ ಅದೋಗತಿಗಿಳಿದಿದ್ದು ಅದುಬದಲಾಗ ಬೇಕಾದ ಅನಿವಾರ್ಯತೆಯನ್ನು ಶಿಕ್ಷಕ, ವಿದ್ಯಾರ್ಥಿಗಳ ಗುಣ ಸ್ವಭಾವಗಳನ್ನು 'ಕಿರಿದಾರಿಗಳಿವೆ-ಎಚ್ಚರಿಕೆ' 'ಪರೀಕ್ಷಾಜ್ವರ', 'ಮೂರುಗಂಟೆ' ಪ್ರಬಂಧಗಳಲ್ಲಿ ತಿಳಿಸುತ್ತ ನಿಜವಾದ ಜೀವನ ಧರ್ಮದ ಮಾರ್ಗವನ್ನು ತೋರಿಸಿದ್ದಾರೆ.

ಹೀಗೆ ಅ.ರಾ.ಮಿತ್ರರವರು ತಮ್ಮ ಪ್ರಬಂಧಗಳಲ್ಲಿ ಮನುಷ್ಯನ ಗುಣಸ್ವಭಾವಗಳನ್ನು ವಿಡಂಬಿಸುತ್ತ ಹಾಸ್ಯದ ಮೂಲಕವೇ ಪರಿಹಾರದ ಮಾರ್ಗವನ್ನು ಸೂಚಿಸುತ್ತ ಸಮಾಜದಲ್ಲಿ ಹೊಂದಾಣಿಕೆಯ ಜೀವನವನ್ನು ನಡೆಸುತ್ತ ನಿಜವಾದ ಮನುಷತ್ವವನ್ನು ಬೆಳೆಸಿಕೊಳ್ಳುತ್ತ 'ಮಾನವ ಕುಲ ತಾನೊಂದೆ ವಲಂ' ಎಂಬಂತೆ ಬಾಳಬೇಕಾದ ದಾರಿಯನ್ನು ತೋರಿಸಿದ್ದಾರೆ. ಬದುಕಿನಲ್ಲಿ ಸತ್ಯ, ನ್ಯಾಯ, ನಿಷ್ಠೆ, ಪ್ರೀತಿ, ಗೌರವ, ತಾಳ್ಮೆ, ಹೊಂದಾಣಿಕೆಯಿಂದ ಜೀವನ ಮೌಲ್ಯಗಳನ್ನು ಬೆಳೆಸಿಕೊಂಡು ಮನುಷ್ಯ ನೆಮ್ಮದಿಯುತವಾದ ಜೀವನವನ್ನು ನಡೆಸಬೇಕು ಆಗ ಮಾತ್ರ ಉತ್ತಮ ಸಮಾಜ ನಿರ್ಮಾಣ ಸಾಧ್ಯ ಎಂಬ ಅಂಶಗಳು ಇವರ ಪ್ರಬಂಧಗಳಲ್ಲಿ ಕಂಡುಬರುತ್ತದೆ.

ಸಾಧ್ಯತೆಗಳು :

1. ಅ.ರಾ.ಮಿತ್ರರವರು ಹಲವು ಪ್ರಕಾರದ ಸಾಹಿತ್ಯವನ್ನು ರಚಿಸಿದ್ದು ಅವುಗಳನ್ನು ಕುರಿತು ಅಧ್ಯಯನ ನಡೆಸಬಹುದಾಗಿದೆ.
2. ಇವರ ಲಲಿತ ಪ್ರಬಂಧಗಳನ್ನು ಮನೋವೈಜ್ಞಾನಿಕ ಹಿನ್ನೆಲೆಯಲ್ಲಿ ಅಧ್ಯಯನ ನಡೆಸಬಹುದಾಗಿದೆ.
3. ಅ.ರಾ.ಮಿತ್ರರವರ ಲಲಿತ ಪ್ರಬಂಧಗಳನ್ನು ಇತರೆ ಲಲಿತ ಪ್ರಬಂಧಕಾರರೊಂದಿಗೆ ತೌಲನಿಕವಾಗಿ ಅಧ್ಯಯನಕ್ಕೆ ಒಳಪಡಿಸಬಹುದಾಗಿದೆ.
4. ಸಮಕಾಲೀನ ಸಂದರ್ಭದಲ್ಲಿ ಅ.ರಾ.ಮಿತ್ರರವರ ಲಲಿತ ಪ್ರಬಂಧಗಳ· ಪ್ರಸ್ತುತತೆ ಕುರಿತು ಅಧ್ಯಯನ ಕೈಗೊಳ್ಳಬಹುದಾಗಿದೆ.
5. ಸಮಾಜದ ಮೇಲೆ ಅ.ರಾ.ಮಿತ್ರರವರ ಲಲಿತ ಪ್ರಬಂಧಗಳ ಪ್ರಭಾವ. ಎಂಬ ಶೀರ್ಷಿಕೆ ಅಡಿಯಲ್ಲಿ ಅಧ್ಯಯನ ಕೈಗೊಳ್ಳಬಹುದಾಗಿದೆ.

ಹೀಗೆ ಇನ್ನು ವಿವಿಧ ಆಯಾಮಗಳಲ್ಲಿ ಇವರ ಲಲಿತ ಪ್ರಬಂಧಗಳನ್ನು ಕುರಿತು ಅಧ್ಯಯನ ಕೈಗೊಳ್ಳಬಹುದಾಗಿದೆ.

ಅನುಬಂಧ

ಪರಾಮರ್ಶನ ಗ್ರಂಥಸೂಚಿ

ಕ್ರ. ಸಂ.	ಪುಸ್ತಕದ ಹೆಸರು	ಲೇಖಕರು	ಪ್ರಕಾಶನ	ವರ್ಷ
1.	ಮಿತ್ರಾವಲೋಕನ	ಪ್ರೊ. ಅ.ರಾ.ಮಿತ್ರ	ವಸಂತ ಪ್ರಕಾಶನ, ಬೆಂಗಳೂರು	2009
2.	ದಶಕದ ಕನ್ನಡ ಸಾಹಿತ್ಯ	ಸಂಪಾದಕರು: ಎಫ್.ಟಿ. ಹಳ್ಳಿಕೇರಿ, ಡಾ. ಕೆ.ರವೀಂದ್ರನಾಥ್	ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ	2002
3.	ಕನ್ನಡ ಸಾಹಿತ್ಯ ಸಂಸ್ಕೃತಿ ಕೋಶ	ಸಂ: ಡಾ. ಚಿ.ಸಿ. ನಿಂಗಣ್ಣ	ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ, ಸರಸ್ವತಿ ಗೋದಾಮು, ಗುಲ್ಬರ್ಗ	ಫೆಬ್ರವರಿ 2010
4.	ಕನ್ನಡ ಸಾಹಿತ್ಯ ಚರಿತ್ರೆ	ತ.ಸು. ಶಾಮರಾಯ	ತುಳುಕಿನ ವೆಂಕಣ್ಣಯ್ಯ ಸ್ಮಾರಕ, ಗ್ರಂಥಮಾಲೆ, ಮೈಸೂರು	2010
5.	ಹೊಸಗನ್ನಡ ಪ್ರಬಂಧ ಸಂಕಲನ	ಸಂ: ಗೊರೂರು ರಾಮಸ್ವಾಮಿ ಅಯ್ಯಂಗಾರ್	ಕನ್ನಡ ಕವಿ ಕಾವ್ಯಮಾಲೆ, ಶಾರದಾ ಮಂದಿರ, ರಾಮಯ್ಯರ್ ರಸ್ತೆ, ಮೈಸೂರು	1961
6.	ಸಂಕೀರ್ಣ ಲಲಿತ ಪ್ರಬಂಧಗಳು	ಅ.ರಾ.ಮಿತ್ರ	ವಿಶ್ವಕನ್ನಡ ಸಮ್ಮೇಳನ, ಬೆಂಗಳೂರು, ಕರ್ನಾಟಕ ಸರ್ಕಾರ	
7.	ಬಂಧ–ಪ್ರಬಂಧ	ಸಂ: ಪ್ರೊ। ಎಸ್. ಶ್ರೀನಿವಾಸನ್, ಪ್ರೊ। ಜಿ. ಅಬ್ದುಲ್ ಬಶೀರ್	ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು	1999
8.	ಹೂಬುಟ್ಟಿ	ಸಂ: ಎಸ್.ಮಧುಸೂದನ್, ಹೆಚ್.ಎನ್. ಮುರಳಿಧರ	ಕರ್ನಾಟಕ ಸಂಘ ಅಧ್ಯಯನ ಕೇಂದ್ರ, ಬೆಂಗಳೂರು	ಜೂನ್ 1987
9.	ಹೊಸಗನ್ನಡ ಸಾಹಿತ್ಯ ಚರಿತ್ರೆ	ಪ್ರೊ। ಎಲ್.ಎಸ್. ಶೇಷಗಿರಿರಾವ್	ಸಪ್ನ ಬುಕ್ ಹೌಸ್, ಬೆಂಗಳೂರು	2011
10.	ಯುಗಧರ್ಮ ಹಾಗೂ ಸಾಹಿತ್ಯ ದರ್ಶನ, ಸಾಹಿತ್ಯ ಮತ್ತು ಸಾಹಿತ್ಯ ಪ್ರಜ್ಞೆ	ಸಂ: ಗಿರಡ್ಡಿ ಗೋವಿಂದರಾಜ್	ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು	2010

11.	ಛಂದೋಮಿತ್ರ ಖ್ಯಾತಿಯ ಸಾಹಿತಿ ಅ.ರಾ.ಮಿತ್ರ	ಕೃಷ್ಣಸುಬ್ಬರಾವ್	ಹೊಯ್ಸಳ ಕರ್ನಾಟಕ ಸಂಘ, ಬೆಂಗಳೂರು-27	2014
12.	ಶಿಕ್ಷಣದ ತಾತ್ವಿಕ ನೆಲೆ	ಡಾ. ವೈ.ಎನ್. ಶ್ರೀಧರ್	ಅನುರಾಧ ಪ್ರಕಾಶನ, ಬೆಂಗಳೂರು	2009
13.	ವಿಮರ್ಶೆ ಪರಿಭಾಷೆ	ಓ.ಎಲ್. ನಾಗಭೂಷಣ್ ಸ್ವಾಮಿ	ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು	2011
14.	ನೆಗೆಗನ್ನಡಂ ಗೆಲ್ಗೆ ಆಧುನಿಕ ಕನ್ನಡದಲ್ಲಿ ಹಾಸ್ಯ	ಸಂ: ಹೆಚ್.ಕೆ. ನಂಜುಂಡಸ್ವಾಮಿ ಮತ್ತು ಹೆಚ್.ವೈ. ರಾಜಗೋಪಾಲ	ಕನ್ನಡ ಸಾಹಿತ್ಯ ರಂಗ ಅಭಿನವ ಪ್ರಕಾಶನ, ಬೆಂಗಳೂರು	2007
15.	ಸಮಗ್ರ ಲಲಿತ ಪ್ರಬಂಧಗಳು ಅ.ರಾ.ಮಿತ್ರ	ಸಂ: ತಾರಾನಾಗರಾಜ್	ತಾಳಂಕಿ ಪ್ರಕಾಶನ : ಸುದರ್ಶನ ಪ್ರಕಾಶನ, ಬೆಂ-85	2000
16.	ಆರತಕ್ಷತೆ (ಆಯ್ದ ಲಲಿತ ಪ್ರಬಂಧ ಸಂಕಲನ)	ಪ್ರೊ। ಅ.ರಾ. ಮಿತ್ರ	ವಸಂತ ಪ್ರಕಾಶನ, ಬೆಂ-53	2005
17.	ನಾನೇಕೆ ಕೊರೆಯುತ್ತೇನೆ? ಅ.ರಾ.ಮಿತ್ರ (ಆಯ್ದ ಲಲಿತ ಪ್ರಬಂಧ ಸಂಕಲನ)	ಪ್ರೊ। ಅ.ರಾ. ಮಿತ್ರ	ವಸಂತ ಪ್ರಕಾಶನ, ಬೆಂ-53	2005
18.	ಒಳನೋಟಗಳು	ಪ್ರೊ। ಅ.ರಾ. ಮಿತ್ರ	ಕನ್ನಡ ಸಂಘ, ಶೇಷಾದ್ರಿಪುರಂ ಕಾಲೇಜ್, ಬೆಂ-20	1991
19.	ಬೆಸ್ಟ್ ಆಫ್ ಅ.ರಾ. ಮಿತ್ರ	ಸಂ: ಬೇಲೂರು ರಾಮಮೂರ್ತಿ	ಅಂಕಿತ ಪುಸ್ತಕ, ಬೆಂ-04	2011
20.	ಸಂಕ್ಷಿಪ್ತ ಕನ್ನಡ ಭಾಷೆಯ ಚರಿತ್ರೆ	ಎಂ.ಹೆಚ್. ಕೃಷ್ಣಯ್ಯ	ಅಂಕಿತ ಪುಸ್ತಕ, ಬೆಂ-04	2012

ಅ.ರಾ. ಮಿತ್ರರವರ ಲಲಿತ ಪ್ರಬಂಧಗಳು

ಕ್ರ. ಸಂ.	ಪ್ರಬಂಧಗಳು	ಕ್ರ. ಸಂ.	ಪ್ರಬಂಧಗಳು	ಕ್ರ. ಸಂ.	ಪ್ರಬಂಧಗಳು	ಕ್ರ. ಸಂ.	ಪ್ರಬಂಧಗಳು
1.	ಸಂಕ್ರಾಂತಿ	26.	ಕಲಕಿದ ಕೊಳ	51.	ನಾನೇಕೆ ಕೊರೆಯುತ್ತೇನೆ...	76.	ಹೀನಸುಳಿ
2.	ಪ್ರಯಾಣಿಕರು	27.	ಪಾದಚಾರಿಗಳು	52.	ತಿಥಿಯರಿಯದ ಅತಿಥಿಗಳು	77.	ಯಾರೋ ಬಂದಿದ್ದರು..!
3.	ಗಾಂಪಗಾಥಾ	28.	ಪಿಳ್ಳೆಗಳ ಸಂಸಾರ	53.	ಮಾನವ ಜನ್ಮ ದೊಡ್ಡದು	78.	ಅಯ್ಯೋ ಮರೆವೇ ! !
4.	ಕೊರತೆ	29.	ಬೆಂಗಳೂರು Vs ಧಾರವಾಡ	54.	ಸಾಲವನ್ನು ಕೊಂಬಾಗ..	79.	ಪವಡಿಸು ಪರಮಾತ್ಮನೇ !
5.	ಹಣವೆ ನಿನ್ನಯ ಗುಣ!	30.	ಗಿರವಿಯ ಸೆರೆ	55.	ಹೊಟ್ಟೆಕಿಚ್ಚು	80.	ವರಪ್ರಸಾದ ತೀರಿಬಂದಾಗ..!
6.	ಹನಿಗವನ	31.	ಉಪಘಾತ !!	56.	ನೀಕೊಡೆ-ನಾಬಿಡೆ	81.	ಕೆಂಪು ಬಸ್ಸು
7.	ಉತ್ತರಕುಮಾರರು- ನಮ್ಮ ಸುತ್ತಮುತ್ತ	32.	ಆಸನಕಂಪ	57.	ನಗೆಕತ್ತರಿ ಅರ್ಥಾತ್ ಜೋಕು	82.	ಬಾದರಾಯಣಿಗಳು
8.	ಅಪ್ಪಿಕೋ	33.	ಕುಟುಂಬ ಯೋಜನೆ?	58.	ನನ್ನ ರಸಫಳಿಗೆಗಳು	83.	ಬಸಪ್ಪನವರ ದೀಪಾವಳಿ
9.	ನಾಮದ ಬಲವೊಂದಿದ್ದರೆ ಸಾಕು	34.	ಮೂರು ಗಂಟೆಗಳು	59.	ಒಬ್ಬ ಹಾಸ್ಯ ಸಾಹಿತಿ – ತನ್ನನ್ನೇ ಕುರಿತು	84.	ಅಡ್ಡಗೋಡೆ !
10.	ಮುಖಮಂಡಲ	35.	ಉತ್ಪ್ರೇಕ್ಷೆ	60.	ಜೋಡೀದಾರ	85.	ನಾನೊಂದು ಮದುವೆಯ ಮಾಡಿಕೊಂಬೆ
11.	ಹುತ್ತದಲ್ಲಿ ಹುತ್ತ	36.	ಪರೀಕ್ಷಾ-ಜ್ವರ	61.	ನನ್ನ ಯಶಸ್ಸಿನ ಗುಟ್ಟು	86.	ಮೂಲಂಗಿ ಪ್ಯಾಂಟು
12.	ನಾಂಪ-ನಾಂಪಿ	37.	ಶಬ್ದಶುದ್ಧಿ	62.	ಕಸಾನುಭವ	87.	ಕಣ್ಣಿನ ಜಗತ್ತು
13.	ನಡೆವರೆಡಹದೆ	38.	ಕುತೂ'ಹಲ'	63.	ಗೊರಕೆ	88.	ಆಸನ ಯೋಗಗಳು
14.	ಆರತಕ್ಷತೆ	39.	ಛಂದೋವಿಹಾಸ	64.	ಮೂಗಿನತುದಿ	89.	ಸ್ವ-ಪಾಕ ರುಚಿ
15.	ಪಂಡಿತನ ಸಂಕಟ	40.	ಕಮ್ಮಟದಲ್ಲಿ ತುತ್ತೂರಿ	65.	ಸೆಕೆಂಡ್ ಹ್ಯಾಂಡ್ ಪುಸ್ತಕಗಳು	90.	ಸೊಳ್ಳೆ ಪರದೆ
16.	ರ್ರೀ... ಗಂಟೆ ಎಷ್ಟು?	41.	'ವರಕುಳ'ಗಳು	66.	ಸಾಲಾಯ ತಸ್ಮೈ ನಮಃ	91.	ಹಾಸ್ಯ ಒಂದು ಔಷಧ
17.	ಬಾಲ್ಕನಿಯ ಬಂಧುಗಳು	42.	ಕಿರಕುಳ ಪುರಾಣಂ	67.	ಪುಸ್ತಕಂ-ಭೂಷಣಂ	92.	ಹೊಸ ವರ್ಷದ ಸಂಕಲ್ಪಗಳು
18.	ಏಳಯ್ಯ ಬೆಳಗಾಯಿತು!	43.	ಪತ್ರಿಕೆಯ ಹುಡುಗರು	68.	ಕ್ಯೂ	93.	ಹೋಟೇಲುಗಳು
19.	ಬಾಯಿ-ಕಿವಿ	44.	ಪ್ರಚಾರ ಫಲಕಗಳು	69.	ಸ್ವಯಂಪಾಕ	94.	ವರ್ಗಾವಣೆ
20.	ಚರ್ಚಾಕೂಟ	45.	ಬಾಡಿಗೆ ಮನೆ	70.	ಕಿರುದಾರಿಗಳು- ಎಚ್ಚರಿಕೆ	95.	ಬೀಳ್ಕೊಡಿಗೆ
21.	ಕಡಲೆ-ಪುರಿ	46.	ಕರ್ಣಪಿಶಾಚ	71.	ಹಾಲಿನವಳ ಲೆಕ್ಕ	96.	ಭಾಷಾ ಬಾಂಧವ್ಯ
22.	ಆಡಿ ಬಾ ನನ ಕಂದ	47.	ಸುಳ್ಳಿನ ಬಲೆ	72.	ದಂಡಂ ದಶಗುಣಂ..	97.	ಶಬ್ದ ಮಾಲಿನ್ಯ
23.	ನಾ(ಲಾ)ಯಕ ಪಾತ್ರಧಾರಿ	48.	ಸಾಕ್ಷಾತ್ಕಾರ	73.	ಪ್ರೇಮದ ಬೇನೆ ಬೆನ್ನು ಬಿದ್ದಾಗ..	98.	ಮುಖಮಂಡಲ
24.	ಮನೆ ಟೆಂಪರೇಚರ್	49.	ಕರ್ಣಾಮೃತ	74.	ಪುರಂದರರೋsವಾಚ..	99.	ಮನೋಮಾಲಿನ್ಯ
25.	ಮಲಿನ ಸರಸ್ವತಿ	50.	ಹಾಸ್ಯ-ಒಂದು ಚಿಂತನೆ	75.	ಸರಸ-ದಾಂಪತ್ಯ	100.	ಬೆಳಕಿನ ಹಬ್ಬ

3